## 3.4.5 Number of research papers per teacher in the Journals notified on UGC website during the year

### 3.4.5.1: Number of research papers in the Journals notified on UGC website during the year

| Sl.No. | Title of paper | Name of the author/s | Department of the teacher | Name of journal | Year of publication | ISSN number | Link to the recognition in UGC enlistment of the Journal / Digital Object Identifier (doi) number | | |
|---|---|---|---|---|---|---|---|---|---|
| | | | | | | | Link to website of the Journal | Link to article / paper / abstract of the article | Is it listed in UGC Care list / Scopus / Web of Science / other, mention |
| **2021-2022** | | | | | | | | | |
| 1 | Kala Prapurna Ballari T Raghava | Dr.Basavaraja B. | Kannada | International Journal of Academic Research Vol-08, Issue-6 (2) | 2021 | 2348-7666 | | | |
| 2 | Dr.Siddalingaiahnavara Ekalavya Natakada Prastutate | Dr.Jayaramaiah V. | Kannada | Aruhu-Kuruhu, Vol-12, Issue-21 | July-Sep. 2021 | 2347-5048 | | | |
| 3 | Kannada Gadya Shasanagala Sahityaka Adhyayana | Dr.Jayaramaiah V. | Kannada | International Journal of Academic Research Vol-08, Issue-7 (2) | Jul-21 | 2348-7666 | | | |
| 4 | Halagannada Kavya Svarupa | Dr.Joginakatte Manjunath | Kannada | International Journal of Academic Research Vol-08, Issue-7 (2) | Jul-21 | 2348-7666 | | | |
| | Aadipuranadalli Bharata Bahubaliya Yuddha Prasanga | Dr.Bheemashankar Joshi | Kannada | Aruhu Kuruhu UGC Carelisted and Peer Reviewed Kannada Journal | Jan-Mar. 2022 | 2347-5048 | | | |
| 5 | Shtree Samajada Uddaraka Dr.Baba Saheb Ambedkar | Dr.Shantharaju H.V. | Kannada | International Journal of Academic Research Vol-08, Issue-7 (2) | Jul-21 | 2348-7666 | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

ISSN: 2348-7666
Volume - 8, Issue 6(2), June, 2021
Impact Factor: 6.023


# International Journal of Academic Research

Monthly

VOICE OF INTELLECTUALS

## PEER REVIEWED JOURNAL

Editor
Dr.Haniyuru Chandre Gowda
Associate Professor in Kannada, National Tribals & Folkloric Researcher.
Director & Head, Birsa Munda Tribals Community Development & Research Center (BMTC-DRC), Bengaluru





Multidisciplinary, Multiple Languages
Refereed and Indexed Journal

Editor-in-Chief
Dr.T.V.Ramana

Volume 8, Issue-6(2), June, 2021

# International Journal of Academic Research

## Editors:



**Dr. Haniyuru Chandre Gowda**
Associate Professor in Kannada, National Tribals & Folkloric Researcher.
Director & Head, Birsa Munda Tribals Community Development &
Research Center (BMTC-DRC), Bengaluru



**Dr.Gangadhara R.H.**
Assistant professor,
Govt., first grade college,
Ranebennur. Haveri- district, Karnataka



**Bhramaramba Yate**
Lecturer & Head,
Dept., of Kannada,
Veerashaiva College, Ballary-583102
Karnataka

**IJAR-ACHIEVED PULICATION EXCELLECE AWARD FOR OUTSTANDING CONTRIBUTION IN THE FIELD OF INTERDISCIPLINARY RESEARCH**

**Published by**
Likhitha Publications
Kakinada-533005 &
Visakhapatnam – 530 017
Andhra Pradesh – India
website :www.ijar.org.in

**Office Address**
Dr.T.V.Ramana, (9948440288)
4-105/1, Srinivasa Nagar, Vakalapudi (P),
Kakinada-533005
Andhra Pradesh-India
e-mail: drtvramana@yahoo.co.in

**Design by**
SS Xerox, Visakhapatnam

| | | |
|---|---|---|
| 21 | ಜಾನಪದ ಸಂಸ್ಕೃತಿಯಲ್ಲಿ ಧಾರವಾಡ–ನಿರ್ಮಲಾ ಶೀಲವಂತರ | 155 |
| 22 | ಜನಪದ ತ್ರಿಪದಿಗಳಲ್ಲಿ ತಾಯ್ತನ–ಡಾ. ನಾಗರಾಜ ಹೊಸೂರಕರ್ | 167 |
| 23 | ಗುರುವಿಲ್ಲದೇ ಜ್ಞಾನವಿಲ್ಲ –ಡಾ.ಎಂ.ಪಿ.ಅನುರಾಧಾ & ಡಾ. ನಾಗರಾಜ ವಿ.ಗುಡಗನವರ | 173 |
| 24 | ಪ್ರಸ್ತುತ ಜಗತ್ತು ಮತ್ತು ಗ್ರಾಮ ದೈವಗಳು –ನವೀನ್ ಕುಮಾರ್.ಕೆ.ಎಸ್ | 178 |
| 25 | ಕಲಾ ಪ್ರಪೂರ್ಣ ಬಳ್ಳಾರಿ ಟಿ. ರಾಘವ –ಡಾ. ಬಸವರಾಜ ಬಿ. | 186 |
| 26 | Dr. B. R. Ambedkar's Thoughts on Women Empowerment in India - **Dr.Eranna** | 190 |
| 27 | ಗ್ರಾಮ ದೇವತೆಗಳು ಬೆಳೆದು ಬಂದ ದಾರಿ –ಶಿವಣ್ಣ .ಟಿ | 195 |
| 28 | ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸುವಲ್ಲಿ ಎದುರಿಸುವ ಸವಾಲುಗಳು ಮತ್ತು ಮಾರ್ಗೋಪಾಯಗಳು –ಡಾ.ಮೋಹನ್ ಕುಮಾರ ಟಿ.ಎಂ | 199 |
| 29 | ಕರ್ನಾಟಕದಲ್ಲಿ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ಸಾಧನವಾಗಿ ಸರ್ಕಾರೇತರ ಸಂಘ–ಸಂಸ್ಥೆಗಳ ಪಾತ್ರ–ಒಂದು ವಿಶ್ಲೇಷಣೆ –ಲಕ್ಷ್ಮಿದೇವಮ್ಮ. ಎನ್ | 203 |
| 30 | ಎಚ್.ಜಿ. ಸಣ್ಣಗುಡ್ಡಯ್ಯ ಅವರ ಪ್ರಬಂಧಗಳಲ್ಲಿ ರಾಜಕೀಯ ಪ್ರಜ್ಞೆ –ಪದ್ಮಜ ವೈ.ಎಂ. & ಡಾ.ಎಸ್.ಶಿವಣ್ಣ | 208 |
| 31 | Climate Change and its Effects on Human Health: **Dr. Anantha Murthy.R** | 213 |
| 32 | Infant Mortality Rate and Maternal Mortality Rate in Shivamogga District- A Taluk wise analysis **-Eswara M.G. & Dr. B. Jayarama Bhat** | 218 |
| 33 | Throwing a Lifeline to Start-Ups : **Umesh M.R, Dr.K.Nagendra Babu** | 230 |
| 34 | ಭೈರಪ್ಪ ಅವರ ಕಾದಂಬರಿಗಳಲ್ಲಿನ "ಕೇಂದ್ರ ಕಾಳಜಿ ಮತ್ತು ಬದ್ಧತೆ" ದಿಕ್ಸೂಚಿ: ಭೈರಪ್ಪ ಅವರ 'ದಾಟು' ಕಾದಂಬರಿಯಲ್ಲಿ ಸಂಶೋಧನಾ ದೃಷ್ಟಿ –ಡಾ. ಶೀಲಾದೇವಿ ಎಸ್. ಮಳೀಮಠ | 241 |

International Journal of Academic Research
ISSN: 2348-7666; Vol.8, Issue-6(2), June, 2021
Impact Factor: 6.023; Email: drtvramana@yahoo.co.in

# KALA PRAPOORNA BALLARI T.RAGHAVA

-Dr.Basavaraja .B

## ಕಲಾ ಪ್ರಪೂರ್ಣ ಬಳ್ಳಾರಿ ಟಿ. ರಾಘವ

-ಡಾ. ಬಸವರಾಜ ಬಿ.
ಸಹಾಯಕ ಪ್ರಾಧ್ಯಾಪಕರು,
ಡಾ.ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,
ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ– ೦೭

ಕರ್ನಾಟಕ ರಂಗಭೂಮಿಯ ಇತಿಹಾಸವನ್ನು ಕೆಣಕಿ ಕೆದರಿದಾಗ ಅದರಲ್ಲಿ ಬೆರಗಾಗುವಷ್ಟು ಕಲಾ ಸೇವೆ ಬಳ್ಳಾರಿ ಜಿಲ್ಲೆಯಿಂದಾಗಿದೆ ಎನ್ನಬಹುದು. ಇಲ್ಲಿ ರಂಗಭೂಮಿ ಬೆಳೆದು ಬಂದ ರೀತಿಯೇ ಅಮೋಘ. ಇಲ್ಲಿಯ ಅನೇಕ ಧೀಮಂತ ರಂಗಕಲಾವಿದರಿಂದ ಬಳ್ಳಾರಿ, ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನ ಹೆಸರನ್ನು ಛಾಪಿಸಿಕೊಂಡಿದೆ ಎಂದರೆ ಅದೆಷ್ಟು ರಂಗ ಚೇತನಗಳನ್ನು ಈ ಜಿಲ್ಲೆ ಕಂಡಿದೆ ಎಂಬುದು ಅರಿವಿಗೆ ಬರುತ್ತದೆ. ಅಂತಹ ರಂಗಚೇತನಗಳಲ್ಲಿ ಟಿ. ರಾಘವರಿಗೆ ಅಗ್ರಸ್ಥಾನ ಸಲ್ಲುತ್ತದೆ.

ರಾಘವರ ಜನನವಾದದ್ದು ಒಂದು ಅಮೋಘ ಘಟನೆಯೇ ಸರಿ. ವೈಷ್ಣವ ಪಂಥದ ನರಸಿಂಹಾಚಾರ್ಯ ಮತ್ತು ಶೇಷಮ್ಮನವರು ಬಹಳ ದಿನಗಳವರೆಗೆ ಮಕ್ಕಳಿಲ್ಲದ ಕೊರಗಿನಲ್ಲಿದ್ದರು. ಇಂತಹ ಸಮಯದಲ್ಲಿ 'ಬಸಪ್ಪ' ಎಂಬ ಅವಧೂತರ ದರ್ಶನವಾಗಿ ಮಕ್ಕಳಿಲ್ಲದ ದಂಪತಿಗಳಿಗೆ ಗಂಡು ಮಗುವಾಗುತ್ತದೆ ಎಂದು ಆಶೀರ್ವದಿಸಿದರು. ಅವರ ಆಶೀರ್ವಾದದ ಫಲವೆಂಬಂತೆ ೨ನೇ ಆಗಸ್ಟ್ ೧೮೮೦ರಂದು ಮುಂದೆ ರಂಗಭೂಮಿಯ ದಿವ್ಯ ನಕ್ಷತ್ರವಾಗಿ ಬೆಳಗಲಿದ್ದ ವರಕುಮಾರನ ಜನನವಾಯಿತು. ಅವಧೂತರ ಆಶಿರ್ವಾದದಿಂದ ಜನಿಸಿದ್ದರಿಂದ ಈ ಮಗುವಿಗೆ "ಬಸಪ್ಪ" ಎಂದೇ ನಾಮಕರಣವಾಯಿತಾದರೂ ಮನೆಯಲ್ಲಿ ಮುದ್ದಿಗಾಗಿ ಕರೆಯುತ್ತಿದ್ದ 'ರಾಘವ' ಎಂಬ ಹೆಸರೇ ಮುಂದೆ ರಂಗಭೂಮಿಯ ಪ್ರಪಂಚದಲ್ಲಿ ಪ್ರಸಿದ್ಧಿಯನ್ನು ಪಡೆಯಿತು.

ಆರಂಭದಲ್ಲಿ ಉಪಾಧ್ಯಾಯರಾಗಿದ್ದ ತಂದೆಯವರಿಂದಲೇ ಮನೆಯಲ್ಲಿ ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲೀಷ್ ಭಾಷೆಗಳ ಅಭ್ಯಾಸವಾಯಿತು. ನಂತರ ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಲ್ಲಿ ಓದುವಾಗಲೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬೆಳೆಸಿಕೊಂಡು 'ಡಾಕ್ಟರ್ ಆ್ಯಂಡ್ ಅಪಾತಕರಿ' ಮತ್ತು 'ಮಿಸ್ಟರ್ ಆ್ಯಂಡ್ ಮಿಸೆಸ್ ನನ್' ಎಂಬ ನಾಟಕಗಳಲ್ಲಿ ಪ್ರಥಮ ಪ್ರವೇಶ ಮಾಡಿದ ರಾಘವರಿಗೆ ರಂಗಭೂಮಿ ವಿಶೇಷ ಆಕರ್ಷಣೆಯಾಯಿತು. ಮುಂದೆ ಬಿ.ಎ. ಪದವಿಗಾಗಿ ಮದ್ರಾಸಿನಲ್ಲಿ ಇದ್ದಾಗ ಅಲ್ಲಿ "ಬಾಂಬೆ ಪಾರ್ಶಿಥಿಯಟ್ರಿಕಲ್ ಕಂಪನಿ"ಯ ನಾಟಕಗಳನ್ನು ನೋಡಲು ಪ್ರತಿದಿನ ಹೋಗುತ್ತಿದ್ದರು. ಆ ಕಂಪನಿಯ "ದಾದಾಭಾಯಿ ಖತ್ರಿ" ಎಂಬ ಪ್ರಸಿದ್ಧ ನಟನಾಭಿನಯ ಇವರ ಮೇಲೆ ಪ್ರಭಾವ ಬೀರಿ ನಾಟಕಗಳ ಬಗೆಗೆ ಇವರಿಗೆ ಇದ್ದ ಆಕರ್ಷಣೆ ಆಸಕ್ತಿಯಾಗಿ ಬೆಳೆಯಿತು. ಬಿ.ಎ. ಪದವಿ ನಂತರ ಬಳ್ಳಾರಿಗೆ ಮರಳಿದ ರಾಘವರು ಇಲ್ಲಿಯ ಯಂಗಮೆನ್ಸ್ ಲಿಟರರಿ ಅಸೋಸಿಯೇಷನ್ ಎಂಬ ಸಂಘದಲ್ಲಿ ಅಭಿನಯಿಸಲು ಪ್ರಾರಂಭಿಸಿದರು. ಇದೇ ಸಮಯದಲ್ಲಿ 'ಸ್ಟೂಡೆಂಟ್ ಎಜ್ಯುಕೇಷನ್ ಸೊಸೈಟಿ'ಯಲ್ಲಿ ವಟ್ಟಂ ಶ್ಯಾಮರಾಯರು, ವಟ್ಟಂ ಶ್ರೀನಿವಾಸರಾಯರು ಅಭಿನಯಿಸುತ್ತಿದ್ದರು. ಇವರ ಪರಿಚಯ ಪಡೆದ ರಾಘವರು ಇವರೊಂದಿಗೆ ಕೂಡಿಕೊಂಡು ಶೇಕ್ಸ್‌ಪಿಯರ್ ಕ್ಲಬ್ ಪ್ರಾರಂಭಿಸಿ ಶೇಕ್ಸ್‌ಪಿಯರ್ ನಾಟಕಗಳನ್ನು ಆಡಲು ಪ್ರಾರಂಭಿಸಿದರು. ಇದರ ಜೊತೆಗೆ ಬಿ.ಎ. ಪಾಸು ಮಾಡಿದ ರಾಘವರು ವಕೀಲರಾಗಿ ಸೇವೆ ಪ್ರಾರಂಭಿಸಿದರು. ಆ ಸಮಯಕ್ಕಾಗಲೇ ಸ್ವತಃ ನಾಟಕಗಳನ್ನು ರಚಿಸಿ ತಂಡವನ್ನು ಕಟ್ಟಿಕೊಂಡು, ನಾಟಕಗಳನ್ನು ಪ್ರದರ್ಶಿಸಿ ಜನಪ್ರಿಯರಾಗಿದ್ದ ತಮ್ಮ ಸೋದರಮಾವ ಧರ್ಮವರಂ ರವರ "ಸರಸ ವಿನೋದಿನಿ ಸಭಾ" ಸೇರಿ ಅವರ ನಾಟಕಗಳಲ್ಲಿ ಅಭಿನಯಿಸಲು ಪ್ರಾರಂಭಿಸಿದರು. ಆದರೆ ರಾಘವರು ಈ ಮಂಡಳಿಯಲ್ಲಿದ್ದುದ್ದು ಕೆಲವು ದಿನಗಳು ಮಾತ್ರ. ಪ್ರಗತಿಪರ ವಿಚಾರಗಳನ್ನು ತುಂಬಿಕೊಂಡಿದ್ದ, ಅದರಲ್ಲೂ ಶೇಕ್ಸ್‌ಪಿಯರ್ ನಾಟಕಗಳಿಂದ

ಪ್ರಭಾವಿತರಾಗಿದ್ದ ಇವರು, ನಾಟಕಗಳು ಸಾಮಾಜಿಕ ಬದಲಾವಣೆಗೆ ದಾರಿಯಾಗಬೇಕೆಂದು ಕೊಂಡಿದ್ದರು, ಹಾಗಾಗಿ, ಇವರಿಗೆ ಪೌರಾಣಿಕ ನಾಟಕಗಳು ಹಿಡಿಸದಾದವು. ಇದೇ ಸಮಯದಲ್ಲಿ ಬಳ್ಳಾರಿಯ ಪ್ರಸಿದ್ಧ ನಾಟಕಕಾರ ಕೋಲಾಚಲಂ ಶ್ರೀನಿವಾಸರಾಯರು, ರಾಘವರು ಹಿಂದೆ ಅಭಿನಯಿಸುತ್ತಿದ್ದ 'ಒಥೆಲ್ಲೋ', 'ಹ್ಯಾಮ್ಲೆಟ್', 'ಮ್ಯಾಕ್‌ಡೆತ್', 'ಕಿಂಗಲಿಯರ್', 'ರೋಮಿಯೊ ಮತ್ತು ಜ್ಯೂಲಿಯಟ್', 'ಮರ್ಚಂಟ್ ಆಫ್ ವೆನಿಸ್' ಮುಂತಾದ ನಾಟಕಗಳನ್ನು ನೋಡಿದ್ದರು. ರಾಘವರು ತೋರುತ್ತಿದ್ದ ಅಮೋಘ ಅಭಿನಯದಿಂದ ಪ್ರಭಾವಿತರಾಗಿ ತಮ್ಮ "ಸುಮನೋರಮಾ ನಾಟಕ ಸಭೆಗೆ" ಆಹ್ವಾನ ನೀಡಿದರು. ಈ ತಂಡದೊಂದಿಗೆ ಆರಂಭದಲ್ಲಿ ಅವರು ಮಾಡುತ್ತಿದ್ದ ನಾಟಕಗಳಲ್ಲಿಯೇ ಅಭಿನಯಿಸಿದರು. ಆದರೆ, ಹಳೆಯ ತುಡಿತವಿತ್ತಲ್ಲ ಹೊಸ ಬಗೆಯ ನಾಟಕಗಳನ್ನು ಪ್ರಯೋಗಿಸಬೇಕೆಂಬುದು ಈ ವಿಚಾರಗಳನ್ನು ಕೋಲಾಚಲಂ ಶ್ರೀನಿವಾಸರಿಗೆ ತಿಳಿಸಿ ಅವರಿಂದ 'ಚಾಂದ ಬೇಬಿ' ಎಂಬ ಚಾರಿತ್ರಿಕ ನಾಟಕವನ್ನು ಬರೆಯಿಸಿದರು. ಪುರಾಣದ ಕಡೆ ಇದ್ದ ಜನರ ಒಲವನ್ನು ಚಾರಿತ್ರಿಕ ನಾಟಕದೆಡೆಗೆ ತಿರುಗಿಸುವುದು ಅಂದಿನ ದಿನಗಳಲ್ಲಿ ಅಷ್ಟು ಸುಲಭದ ಮಾತಾಗಿರಲಿಲ್ಲ. ರಾಘವರು ಮಾತ್ರ ಪಟ್ಟು ಬಿಡಲಿಲ್ಲ. ಇದರ ನಂತರ 'ಸುನಂದಿನಿ', 'ವಿಜಯನಗರ ಪತನ', 'ಭಾರತಯುದ್ಧ', 'ಹರಿಶ್ಚಂದ್ರ' ನಾಟಕಗಳನ್ನು ಬರೆಯಿಸಿ ಪ್ರಯೋಗಕ್ಕೆ ತಂದು ಅಮೋಘ ಅಭಿನಯವನ್ನು ನೀಡಿದರು. ಇವಲ್ಲದೆ, ಈ ಸಮಯದಲ್ಲಿ ಸ್ನೇಹಿತರಾದ ವಟ್ಟಂ ಸಹೋದರರ ನೆರವಿನಿಂದ ಬೆಂಗಳೂರಿನ "ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್" ನ ಪರಿಚಯ ಪಡೆದು ಪ್ರತಿ ಭಾನುವಾರ ಬೆಂಗಳೂರಿಗೆ ಹೋಗಿ ಕನ್ನಡ, ತೆಲಗು, ಇಂಗ್ಲೀಷ್ ನಾಟಕಗಳನ್ನು ಅಭಿನಯಿಸುತ್ತಿದ್ದರು.

ರಾಘವರು ಅಭಿನಯದಲ್ಲಿ ಮೇಲಕ್ಕೆ ಬಂದದ್ದು, ಪಾತ್ರಗಳಲ್ಲಿ ಅವರು ತೋರುತ್ತಿದ್ದ ವಿಭಿನ್ನ ರೀತಿಯ ಅಭಿನಯದಿಂದಾಗಿಯೇ ಎನ್ನಬಹುದು. ಇಂತಹ ಅವರ ಪಾತ್ರಗಳ ಕೆಲವು ತುಣುಕುಗಳನ್ನು ಗಮನಿಸಿದರೆ ಬಹುಶಃ ಅವರು ಎಂತಹ ನಟ ಎನ್ನುವುದು ತಿಳಿಯುತ್ತದೆ.

'ಸತ್ಯಾವಾನ ಸಾವಿತ್ರಿ' ನಾಟಕದಲ್ಲಿ ರಾಘವರು ನಿರ್ವಹಿಸುತ್ತಿದ್ದುದು ಯಮನ ಪಾತ್ರ. ಅವರು ಮಾಮೂಲಿನಂತೆ ಅಂದಿನ ಕಂಪನಿ ನಾಟಕಗಳ ಯಮನ ಪಾತ್ರವಲ್ಲ. ಇದು ರಾಘವರ ಕಲ್ಪನೆಯ ಯಮನ ಪಾತ್ರ. ಮೂಲದಲ್ಲಿ ಯಮನೆಂದರೆ ರೌದ್ರಾವತಾರಿ ವಿಕೃತ ವೇಷದವನು. ಆದರೆ, ರಾಘವರು ಯಮನ ಪಾತ್ರದಲ್ಲಿ ಸೌಮ್ಯದೇವತಾಮೂರ್ತಿಯಂತೆ ರಂಗ ಪ್ರವೇಶ ಮಾಡುತ್ತಿದ್ದರು. ಇದನ್ನು ಕಂಡ ಪ್ರೇಕ್ಷಕರು ಒಂದು ರೀತಿಯಲ್ಲಿ ತಬ್ಬಿಬ್ಬಾಗಿ ಬಿಡುತ್ತಿದ್ದರು. ಆದರೆ, ಪ್ರೇಕ್ಷಕರ ಈ ಚಡಪಡಿಸುವಿಕೆಯನ್ನು ಹಾಗೆ ಮುಂದುವರಿಯಲು ಬಿಡದೆ, "ಸಾವಿತ್ರಿ ನೀನು ಪಾತಿವ್ರತ್ಯ ಮಹಿಮೆಯುಳ್ಳವಳು ಎಂದು ನಿನ್ನನ್ನು ಹೆದರಿಸಲಿಚ್ಛಿಸದೇ, ಸೌಮ್ಯಮೂರ್ತಿಯಾಗಿ ದರ್ಶನ ನೀಡಿದೆ" ಎಂದು ಹೇಳಿ ಚಡಪಡಿಸುತ್ತಿದ್ದ ಪ್ರೇಕ್ಷಕರನ್ನು ಹರ್ಷಭರಿತರನ್ನಾಗಿ ಮಾಡುತ್ತಿದ್ದರು. ಇದು ಪ್ರೇಕ್ಷಕರ ಕುತೂಹಲವನ್ನು ಕೆರಳಿಸುವ ರಾಘವರ ತಂತ್ರವಾಗಿತ್ತು.

ಪ್ರೇಕ್ಷಕರನ್ನಷ್ಟೆ ಅಲ್ಲ ಕೆಲವೊಮ್ಮೆ ಸಹನಟರನ್ನು ಬೆಚ್ಚಿ ಬೀಳುವಂತೆ ಮಾಡುತ್ತಿದರೆನ್ನುವುದಕ್ಕೆ ಭಕ್ತ ಪ್ರಹ್ಲಾದ ನಾಟಕ ಒಳ್ಳೆಯ ಉದಾಹರಣೆ. ಇದರಲ್ಲಿ ರಾಘವರು ಹಿರಣ್ಯಕಶ್ಯಪನ ಪಾತ್ರ ಮಾಡುತ್ತಿದ್ದರು. ಕೊನೆಯ ದೃಶ್ಯದಲ್ಲಿ ಹಿರಣ್ಯಕಶ್ಯಪು ಖಡ್ಗವನ್ನೊಮ್ಮೆ ಝಳಪಿಸಿ ಸುದೀರ್ಘ ಸಂಭಾಷಣೆಯನ್ನು ಪೌರುಷದಿಂದ ಹೇಳಿ ಅಟ್ಟಹಾಸದಿಂದ ಪ್ರಹ್ಲಾದನ ಕಡೆಗೆ ಧಾವಿಸಿದೊಡನೆ ಪ್ರಹ್ಲಾದನ ಪಾತ್ರಧಾರಿ ಹುಡುಗ ಮೂರ್ಛೆಯಿಂದ ಬಿದ್ದು ಬಿಟ್ಟಿದ್ದ. ರಾಘವರು ಆ ಪಾತ್ರದಲ್ಲಿ ಎಷ್ಟು ತಲ್ಲೀನರಾಗಿದ್ದರೆಂದರೆ ಅವರೂ ಸಹ ಮೂರ್ಛೆಯಿಂದ ಕುಸಿದುಬಿದ್ದು ಬಿಡುತ್ತಿದ್ದರು.

'ವಿಜಯನಗರ ಪತನ'ದ ನಾಟಕದಲ್ಲಿನ ಪಠಾಣ ರುಸ್ತುಮಿನ ಪಾತ್ರ ರಾಘವರಿಗಾಗಿಯೇ ಸೃಷ್ಟಿಯಾಯಿತೆನೋ ಎಂಬಂತೆ ಮೂಡಿಬಂದಿತ್ತು. ಈ ಪಾತ್ರದಲ್ಲಿ ರಾಘವರು ತೋರುತ್ತಿದ್ದ ಅದ್ಭುತ ಅಭಿನಯ ರಂಗಭೂಮಿಯ ಇತಿಹಾಸದಲ್ಲಿ ಅವರ ಹೆಸರನ್ನು ಚಿರಸ್ಥಾಯಿಯಾಗಿ ಮೂಡಿಸಿತು.

'ಅಂಕದ ಪರದೆ ಎದ್ದ ಮೇಲೆ ರಾಘವರು ಸೈಡ್‌ವಿಂಗ್‌ನಿಂದ ಅಶ್ವರೂಢರಾಗಿ ರಂಗಮಂಚಕ್ಕೆ ಪ್ರವೇಶಿಸುತ್ತಿದ್ದರು. ಕುದುರೆಯನ್ನು ಗದರಿಸಿ ಕೆಲವು ಸಮಯದ ನಂತರ ಕಂಬಕ್ಕೆ ಕಟ್ಟಿ ಹುಲ್ಲು ತಂದು ಹಾಕುತ್ತಿದ್ದರು. ಹಿಮ್ಮೇಳದಲ್ಲಿ ವಿಜಯನಗರ ಸಾಮ್ರಾಜ್ಯ ಪಥನಕ್ಕೆ ಸಂಬಂಧಿಸಿದ ಕಥೆ ಕೇಳಿ ಬರುತ್ತದೆ. ಪಠಾಣ ಬರುತ್ತಿದ್ದ ಧ್ವನಿಯ ಕಡೆಗೆ ತನ್ನ ದೃಷ್ಟಿಯನ್ನು ಹರಿಸುತ್ತಾನೆ. ಆ ಕಥೆಯನ್ನು ಕೇಳುತ್ತಾ ಕೇಳುತ್ತಾ ನಿಸ್ತೇಜಿತನಾಗುತ್ತಾನೆ. ಭಾರವಾದ ನಿಟ್ಟುಸಿರನ್ನು ಬಿಟ್ಟು ನಿಷ್ಪ್ರಮಿಸುತ್ತಾನೆ. ಹಲವಾರು ನಿಮಿಷಗಳ ನಂತರ ಮತ್ತೆ ಸೈಡ್‌ವಿಂಗ್‌ನಿಂದ ರಂಗಮಂಚಕ್ಕೆ ಪ್ರವೇಶಿಸಿ ಅಲ್ಲೇ ಇದ್ದ ಬಂಡೆಯ ಮೇಲೆ ಕುಳಿತು ಒಣಗಿದ ರೊಟ್ಟಿಯನ್ನು ಕಡಿಯತೊಡಗುತ್ತಾನೆ. ಸಾಗುತ್ತಲೇ ಇದ್ದ ಪತನದ

ಕಥೆಯತ್ತ ಮತ್ತೆ ತನ್ನ ದೃಷ್ಟಿಯನ್ನು ನೆಡುತ್ತಾನೆ. ಮುಂದುವರೆದ ಹಿನ್ನೆಲೆಯ ಕಥೆಯಲ್ಲಿ ರಾಮರಾಯನ ದೌರ್ಜನ್ಯ ಆಕೃತಿಗಳು ಪ್ರಾರಂಭವಾಗಿರುತ್ತದೆ. ಅದನ್ನು ಆಲಿಸಿದ ಪಠಾಣ ನೇತ್ರಗಳಲ್ಲಿ ಜಿಗುಪ್ಸೆ, ವೇದನೆ ವ್ಯಕ್ತವಾಗುತ್ತದೆ. ಈ ಕಥೆಯಿಂದ ಬೇಸತ್ತು ಅವನು ಕೋಪಗೊಂಡು ಕಡಿಯುತ್ತಿದ್ದ ರೊಟ್ಟಿಯನ್ನು ನೆಲಕ್ಕೆ ಅಪ್ಪಳಿಸುತ್ತಾನೆ. ಕೆಲವು ನಿಮಿಷಗಳ ನಂತರ ಅಲ್ಲಿಂದ ಬಿರುಸಾಗಿ ನಿರ್ಗಮಿಸುತ್ತಾನೆ.

ಈ ದೃಶ್ಯದಲ್ಲಿ ಯಾವುದೇ ಮಾತುಗಳಿಲ್ಲದೆ ಭಾವಾಭಿನಯ, ಆಂಗಿಕಾಭಿನಯ ಅವರನ್ನು ಸಾಟಿಯಿಲ್ಲದ ನಟನನ್ನಾಗಿಸಿತು. ಅಲ್ಲದೆ ಅಂದು ರಂಗಭೂಮಿಯಲ್ಲಿ ಇವರ ಈ ಪಾತ್ರವು ಕ್ರಾಂತಿಯನ್ನು ಎಬ್ಬಿಸಿ ಇವರನ್ನು ಕೀರ್ತಿ ಶಿಖರಕ್ಕೆ ಮುಟ್ಟಿಸಿತು. ಇಲ್ಲಿ ನೈಜ ಕುದುರೆ ಇಲ್ಲದಿದ್ದರೂ ಕೇವಲ ಆಂಗಿಕಾಭಿನಯದಲ್ಲಿ ನಟಿಸುತ್ತಿದ್ದ ಪರಿ ನಿಜವಾದ ಕುದುರೆಯನ್ನೇ ರಾಘವರು ಎಳೆದು ತರುತ್ತಿದ್ದರೇನೋ ಎಂಬ ಭ್ರಮೆಯನ್ನು ನೋಡುಗರಿಗೆ ಹುಟ್ಟಿಸುತ್ತಿತ್ತು.

ಬೆಂಗಳೂರು ಅಮೆಚೂರ ಅಸೋಸಿಯೇಷನ್ನಿನಲ್ಲಿ ಅತಿಥಿ ನಟರಾಗಿ ಅಭಿನಯಿಸುತ್ತ, ಅಲ್ಲಿಯೂ ಪ್ರಸಿದ್ಧರಾದ ರಾಘವರು ಆ ತಂಡದೊಂದಿಗೆ ಮೈಸೂರು, ಮುಂಬೈ, ಕಲ್ಕತ್ತಾ, ಸಿಮ್ಲಾಗಳಲ್ಲಿನ ಪ್ರದರ್ಶನಗಳಲ್ಲಿ ಅಭಿನಯಿಸಿ ತಮ್ಮ ಕಲಾ ಪ್ರತಿಭೆಯನ್ನು ಮೆರೆದರು. ನಂತರ ೧೯೨೫ ರಲ್ಲಿ ಸಮುದ್ರದಾಚೆ ರಂಗೂನ್‌ನಲ್ಲಿಯೂ ತೆಲುಗು, ಇಂಗ್ಲೀಷ್ ನಾಟಕಗಳಲ್ಲಿ ಅಭಿನಯಿಸಿದರು.

**ಪ್ರಶಂಸೆಗಳ ಮಹಾಪೂರ:**

ರಾಘವರು ಅಭಿನಯದಲ್ಲಿ ಎಷ್ಟು ಎತ್ತರಕ್ಕೆ ಬೆಳೆದರೆಂದರೆ ಅವರ ನಾಟಕಗಳನ್ನು ನೋಡಿ ಮೆಚ್ಚದವರೇ ಇಲ್ಲ. ವರದಾಚಾರ್ಯರ ಹಿರಣ್ಯಕಶ್ಯಪು ಪಾತ್ರವನ್ನು ನೋಡಿ ಮೆಚ್ಚಿದ ರವೀಂಧ್ರನಾಥಠಾಗೂರರು ಆ ಪಾತ್ರವನ್ನು ರಾಘವರು ಮಾಡುತ್ತಾರೆಂದು ತಿಳಿದು ನೋಡಲು ಬಯಿಸಿದರು. ನಾಟಕದಲ್ಲಿ ರಾಘವರ ಅಭಿನಯವನ್ನು ನೋಡಿ ಮೆಚ್ಚಿ "Raghava as the greatest living Indian actor of the century" ಎಂದು ಉದ್ಘರಿಸಿದರು.

ಮಹಾತ್ಮಗಾಂಧೀಜಿಯವರು ಒಮ್ಮೆ ಬೆಂಗಳೂರಿಗೆ ಬಂದಾಗ ಗಾಂಧೀಜಿಯವರ ದೀನರ ಉದ್ಧಾರ ಕಾರ್ಯದ ನೆರವಿಗಾಗಿ ಬೆಂಗಳೂರಿನ ಅಮೆಚೂರ ಸಂಘದ ವತಿಯಿಂದ ಪಂಡಿತ ತಾರಾನಾಥರು ಹಿಂದಿಯಲ್ಲಿ ಬರೆದ "ದೀನಬಂಧು ಕಬೀರ" ನಾಟಕ ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರು. ಇದಕ್ಕೆ ಗಾಂಧೀಜಿಯವರನ್ನು ಆಹ್ವಾನಿಸಲಾಗಿ ರಾಜಗೋಪಾಲಾಚಾರಿಯವರೊಂದಿಗೆ ಗಾಂಧೀಜಿಯವರು ಕೇವಲ ೨೦ ನಿಮಿಷ ನಾಟಕ ನೋಡುವ ನಿಯಮದಂತೆ ಬಂದಿದ್ದರು. ನಾಟಕದಲ್ಲಿ ರಾಘವರ ಅಭಿನಯಕ್ಕೆ ಮನಸೋತ ಗಾಂಧೀಜಿಯವರಿಗೆ ಹೊತ್ತು ಹೋದದ್ದೇ ತಿಳಿಯಲಿಲ್ಲ. ಪಕ್ಕದಲ್ಲಿದ್ದ ರಾಜಗೋಪಾಲಾಚಾರಿಯವರು ವೇಳೆಯನ್ನು ಜ್ಞಾಪಿಸಿ "ಪ್ರಾರ್ಥನೆಗೆ ಸಮಯವಾಯಿತು" ಎಂದಾಗ ಗಾಂಧೀಜಿಯವರು "ಇದು ಪ್ರಾರ್ಥನೆಯಲ್ಲವೇ?" ಎಂದು ಹೇಳಿ ನಾಟಕದ ದೃಶ್ಯದಲ್ಲಿ ತನ್ಮಯರಾದರು. ಯಾವ ನಾಟಕವನ್ನೂ ಕೊನೆಯವರೆಗೂ ನೋಡದ ಗಾಂಧೀಜಿಯವರು ದೀನಬಂಧು ಕಬೀರ ನಾಟಕವನ್ನು ನೋಡಿದ್ದು, ರಾಘವ ಅಭಿನಯಕ್ಕೆ ಮಾರುಹೋಗಿಯೇ ಎನ್ನುವುದಕ್ಕೆ ನಾಟಕ ಮುಗಿದ ನಂತರ "ರಾಘವಾಚಾರಿ ಮಹಾರಾಜ ಕೀ ಜೈ" ಎಂದು ಜಯಕಾರ ಹಾಕಿ ಹೊರಟರು ಎನ್ನುವುದು ಸಾಕ್ಷಿಯಾಗುತ್ತಿದೆ.

ಹೀಗೆ ಜನಸಾಮಾನ್ಯನಿಂದ ರಾಷ್ಟ್ರಕವಿ, ರಾಷ್ಟ್ರಪಿತರಿಂದ ಸೈ ಎನಿಸಿಕೊಂಡ ಕಲಾವಿದರು ವಿರಳ. ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದ ನಂತರ, ರಾಘವರಿಗೆ ಪಾಶ್ಚಾತ್ಯ ರಂಗಭೂಮಿಯನ್ನು ಕಾಣಬೇಕೆಂಬ ಹಂಬಲವುಂಟಾಗಿ, ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು.

ಅಲ್ಲಿಎರಡು ತಿಂಗಳುಗಳ ಕಾಲ ಇದ್ದು ಸುಮಾರು ೫೨ ನಾಟಕಗಳನ್ನು ವೀಕ್ಷಿಸಿದರು.ಅಲ್ಲದೇ, ಅಲ್ಲಿಯ ರಂಗಭೂಮಿಯ ಶ್ರೇಷ್ಠನಟರಾದ ಸರ್ ಫೋರ್ಡ್ಸ್ ರಾಬರ್ಟಸನ್ ಹಾಗೂ ಶ್ರೀಮತಿ ರಾಬರ್ಟ್‌ಸನ್ ಹ್ಯಾಂಡಸ್ ಮತ್ತು ಆ್ಯಷ್ಲಿಡೂನ್ ಹಾಗೂ ಪ್ರಸಿದ್ಧ ನಾಟಕಕಾರ, ವಿಮರ್ಶಕರಾದ ಜಾರ್ಜ ಬರ್ನಾಡ್ ಷಾ ಅವರನ್ನು ಭೇಟಿಯಾದರು. ಬರ್ನಾಡ್ ಷಾ ರವರು ಇವರ ಭೇಟಿಯಿಂದ ಆಶ್ಚರ್ಯಗೊಂಡು "ಇದೇನು ಕಾವ್ಯ–ಧರ್ಮ ಕಲೆಗಳಿಗಾಗಿ ನಾವೇ ಹಿಂದೂಸ್ಥಾನಕ್ಕೆ ಬಂದು ಅಲೆಯಬೇಕಾಗಿರುವಲ್ಲಿ ನೀವೇಕೆ ಇಲ್ಲಿಗೆ ಬಂದಿರಿ?" ಎಂದು ಹೇಳಿ ಯಾರಿಗೂ ೫ ರಿಂದ ೧೦ ನಿಮಿಷಗಳ ಕಾಲ ಅವಕಾಶ ಕೊಡದ ಷಾ, ರಾಘವರೊಂದಿಗೆ ಎರಡು ಗಂಟೆಯ ಕಾಲ ಕಲೆಯ ಬಗೆಗೆ ಚರ್ಚಿಸಿದರು. ಶೇಕ್ಸ್‌ಪಿಯರ್ ನಾಟಕದ ವಸ್ತು ಕೃತಿ, ಭಾವಗಳ ಬಗೆಗೆ ಚರ್ಚಿಸಿದ ರಾಘವರು ಕೆಲವು ಸನ್ನಿವೇಶಗಳನ್ನು ಅವರೆದುರಿಗೆ ಅಭಿನಯಿಸಿ ತೋರಿಸಿದರು. ಇವರ ಅಭಿನಯ ನೋಡಿ ಮೆಚ್ಚಿದ ಷಾ "If Shakespeare wrote-you have acted it is a pity you were born in India (then considered a slave country) if only you

had been born here England would have made you as great as Shakespeare" ಎಂದರಂತೆ, ಒಬ್ಬ ನಿಜವಾದ ಕಲಾವಿದನಿಗೆ ಇದಕ್ಕಿಂತ ದೊಡ್ಡ ಪ್ರಶಸ್ತಿ ಬೇಕೆ?

ರಾಘವರ ಗೌರವಾರ್ಥ ಲಂಡನ್ ನಗರದ ಸುಪ್ರಸಿದ್ಧ ಕಲಾಕೇಂದ್ರವೆಂದು ಹೆಸರು ಪಡೆದ ಗ್ಯಾರಿಕ ಕ್ಲಬ್‌ನಲ್ಲಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಪೋರ್ಬಸ್ ರಾಬರ್ಟ್‌ಸನ್ ಅವರ ಸೋದರ ಶ್ರೇಷ್ಠನಟ ಸೋರಬ್ ರಾಬರ್ಟ್‌ಸನ್ ಲೇಡಿ ರಾಬರ್ಟ್‌ಸನ್ ಮುಂದೆ ಬ್ರಿಟಿಷ್ ಪ್ರಧಾನಿಯಾದ ವಿನ್‌ಸ್ಟನ್ ಚರ್ಚಹಿಲ್ ಮತ್ತು ಜಾರ್ಜ್ ಬರ್ನಾಡ ಷಾ ರವರು ಪಾಲ್ಗೊಂಡಿದ್ದರು. ಅಲ್ಲದೆ ಕೆಲವು ಕಾಲ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ ಹಾಲ್ಡನ್ ಅವರು ರಾಘವರಿಗೆ ಪ್ರತ್ಯೇಕ ಭೋಜನಕೂಟವನ್ನು ಏರ್ಪಡಿಸಿದ್ದರು.

ಷಾ ರವರಿಂದ ಮೆಚ್ಚುಗೆ ಪಡೆದ ರಾಘವರ ಕಡೆಗೆ ಇಡೀ ಯೂರೋಪ್, ಅಮೇರಿಕ ಬೆರಗಾಗಿ ನೋಡಿತು. ಅವರನ್ನು ತಮ್ಮ ದೇಶಗಳಿಗೂ ಆಹ್ವಾನಿಸಿದವು. ಅಮೇರಿಕಾಕ್ಕೆ ಹೋಗಲು ಇಚ್ಛೆ ಇದ್ದರೂ ಹೋಗಲು ಸಾಧ್ಯವಾಗದೆ ಪ್ಯಾರಿಸ್, ಬರ್ಲಿನ್ ನಗರಗಳಿಗೆ ತೆರಳಿ ಭಾರತೀಯ ನಾಟ್ಯಕಲೆಯ ಬಗೆಗೆ ವಿದ್ವತ್ ಪೂರ್ಣಉಪನ್ಯಾಸ ನೀಡಿದರು.

ವಿದೇಶದಿಂದ ಬಂದ ನಂತರ ಪಾಶ್ಚಾತ್ಯ ರಂಗಭೂಮಿ ದಿನದಿಂದ ದಿನಕ್ಕೆ ಗೌರವವನ್ನು ಹೇಗೆ ಹೆಚ್ಚಿಸಿಕೊಳ್ಳುತ್ತಿದೆ ಎಂಬುದನ್ನು ಮನಗಂಡ ರಾಘವರು ಇಲ್ಲಿಯ ರಂಗಭೂಮಿಯನ್ನು ಪಾಶ್ಚಾತ್ಯರಂತೆ ಬದಲಾಯಿಸಲು ಪ್ರಯತ್ನಪಟ್ಟರು. ಸಮಾಜ ಸುಧಾರಣೆಯ ನಾಟಕಗಳು ಬರಬೇಕು. ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ನಟಿಸಬೇಕು. ಪ್ರದರ್ಶನಗಳಿಗೆ ೩. ಯೋಗ್ಯ ಥಿಯೇಟರ್‌ಗಳು ನಿರ್ಮಾಣವಾಗಬೇಕು. ನಟರಿಗೆ ತರಬೇತಿ ಕಾಲೇಜುಗಳನ್ನು ಸ್ಥಾಪಿಸಬೇಕು. ನಟರ ಸಹಾಯಾರ್ಥವಾಗಿ ಆ್ಯಕ್ಟರ್ಸ್ ಫಂಡ್ ಕೂಡಿಸಬೇಕು. ಇವೇ ಮುಂತಾದ ಸಲಹೆಗಳನ್ನು ಕೊಡುತ್ತಾ ಅದನ್ನು ಕಾರ್ಯರೂಪಕ್ಕೆ ತರಲು ಬಹುವಾಗಿ ಪ್ರಯತ್ನಿಸಿದರು.

ಹೀಗೆ ಬಳ್ಳಾರಿಯ ಈ ಪ್ರಸಿದ್ಧ ವಕೀಲ ನಟನಾಗಿ ಅಭಿನಯದಲ್ಲಿ ವೈವಿಧ್ಯತೆಯನ್ನು ಮೆರೆದು ಪ್ರೇಕ್ಷಕರಿಗೆ ವಿಭಿನ್ನ ರೀತಿಯ ಅನುಭವವನ್ನು ತಂದುಕೊಟ್ಟರಲ್ಲದೆ, ದೇಶ-ವಿದೇಶದ ಧೀಮಂತರ ಪ್ರಶಂಸೆಗೆ ಪಾತ್ರರಾದರು. ನಂತರ, ನಾಟಕಗಳ ಉಳಿವಿಗೆ, ಬದಲಾವಣೆಗೆ ಪರಿಶ್ರಮಿಸಿ ಬಳ್ಳಾರಿಯನ್ನು, ಕರ್ನಾಟಕವನ್ನು, ಭಾರತೀಯ ನಾಟ್ಯಕಲೆಯನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಿ ಕಲಾ ಪ್ರಪೂರ್ಣರಾದರು. ಬಹಳಷ್ಟು ಸಲ ಪ್ರಯೋಗಿಸಬೇಕೆಂದು ಪ್ರಯತ್ನಿಸಿ ವಿಫಲರಾಗಿದ್ದ ತಾವೇ ಬರೆದ "ತೀರದ ಸಮಸ್ಯೆ" ನಾಟಕವನ್ನು ೧೯೪೬ ರ ಮಾರ್ಚ್ ೨೩ ರಂದು ಪ್ರಯೋಗಿಸಿ ತೃಪ್ತಿಪಟ್ಟಿದ್ದ ರಾಘವರು, ಏಪ್ರಿಲ್ ೧೬, ೧೯೪೬ ರಂದು ನಿಧನರಾದಾಗ ಕನ್ನಡ ಮತ್ತು ಆಂಧ್ರ ರಂಗಭೂಮಿಗಳೆರಡು ದಿವ್ಯ ನಕ್ಷತ್ರವನ್ನು ಕಳೆದುಕೊಂಡು ಬರಡಾದವು.

**ಪರಾಮರ್ಶನಗ್ರಂಥಗಳು:**


೧. D. Venugopalachari, Raghav Memorial Souvenir, 1965, T. Raghav a sketch
೨. ಜೋಳದರಾಶಿ ದೊಡ್ಡನಗೌಡರು, ಕಲಾ ಪ್ರಪೂರ್ಣ ಟಿ. ರಾಘವ

ARUHU KURUHU
Kannada Quarterly, KARKAN 19884/10/1/2009-TC

UGC CARE LISTED AND PEER REVIEWED JOURNAL



ಡಾ. ಸಿದ್ಧಲಿಂಗಯ್ಯ

ಜನನ : ೧೯೫೪, ಮರಣ : ೧೧-೦೬-೨೦೨೧

## ಚಂದಾ ವಿವರ

ಒಂದು ವರ್ಷದ ಚಂದಾ ರೂ. 3000/- (ಮೂರು ಸಾವಿರ ರೂಗಳು) ಹಣವನ್ನು ಅರುಹು ಕುರುಹು ಖಾತೆಗೆ ಜಮಾ ಮಾಡಿ ಮಾಹಿತಿ ನೀಡುವುದು. ಚಂದಾ ಹಣವನ್ನು ಕರ್ನಾಟಕ ಬ್ಯಾಂಕ್, ದೇವರಾಜ ಅರಸು ರಸ್ತೆ ಶಾಖೆ, ಮೈಸೂರು, 'ಅರುಹು ಕುರುಹು' ಹೆಸರಿನ ಚಾಲ್ತಿ ಖಾತೆ ಸಂಖ್ಯೆ: 4842000100237501, IFSC: KARB 0000484 ಇಲ್ಲಿಗೆ ನಿಮ್ಮ ಖಾತೆಯಿಂದ ನೇರವಾಗಿ RTGS-NEFT ಜಮಾ ಮಾಡಬಹುದು.

Aruhu Kuruhu Kannada Quarterly 45th Issue july-Sept 2021
Pages 200, Edited by H.S. Umesh, Published and owned by
Ha.Thi. Rathna, # 10, 'Belaku' Kuvempu road, Prithvi badavane
Dattagalli 3rd stage, Mysore-570033, aruhukuruhu@gmail.com

₹ 200

ಅರುಹು ಕುರುಹು ಜುಲೈ-ಸೆಪ್ಟಂಬರ್ ೨೦೨೧

ISSN : 2347 - 5048

# ಅರುಹು ಕುರುಹು

ಸಂಪುಟ : ೧೨
ಸಂಚಿಕೆ : ೪೫
ಜುಲೈ-ಸೆಪ್ಟಂಬರ್ ೨೦೨೧

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ಯುಜಿಸಿ ಕೇರ್ ಪಟ್ಟಿಯಲ್ಲಿರುವ ತ್ರೈಮಾಸಿಕ ಪತ್ರಿಕೆ



UGC CARE LISTED AND PEER REVIEWED JOURNAL

ARUHU KURUHU
Kannada Quarterly, KARKAN 19884/10/1/2009-TC

UGC CARE LISTED AND PEER REVIEWED JOURNAL



ಡಾ. ಸಿದ್ಧಲಿಂಗಯ್ಯ
ಜನನ : ೧೯೫೪, ಮರಣ : ೧೧-೦೬-೨೦೨೧

## ಚಂದಾ ವಿವರ

ಐದು ವರ್ಷದ ಚಂದಾ ರೂ. 3000/- (ಮೂರು ಸಾವಿರ ರೂಗಳು) ಹಣವನ್ನು ಅರುಹು ಕುರುಹು ಖಾತೆಗೆ ಜಮೆ ಮಾಡಿ ಮಾಹಿತಿ ನೀಡುವುದು. ಚಂದಾ ಹಣವನ್ನು ಕರ್ನಾಟಕ ಬ್ಯಾಂಕ್, ದೇವರಾಜ ಅರಸು ರಸ್ತೆ ಶಾಖೆ, ಮೈಸೂರು, 'ಅರುಹು ಕುರುಹು' ಹೆಸರಿನ ಚಾಲ್ತಿ ಖಾತೆ ಸಂಖ್ಯೆ: 4842000100237501, IFSC: KARB 0000484 ಇಲ್ಲಿಗೆ ನಿಮ್ಮ ಖಾತೆಯಿಂದ ನೇರವಾಗಿ RTGS-NEFT ಜಮೆ ಮಾಡಬಹುದು.

Aruhu Kuruhu Kannada Quarterly 45th Issue july-Sept 2021
Pages 200, Edited by H.S. Umesh, Published and owned by
Ha.Thi. Rathna, # 10, 'Belaku' Kuvempu road, Prithvi badavane
Dattagalli 3rd stage, Mysore-570033, aruhukuruhu@gmail.com

₹ 200

ಅರುಹು ಕುರುಹು ಜುಲೈ-ಸೆಪ್ಟೆಂಬರ್ ೨೦೨೧ ೪೫

ISSN : 2347 - 5048

# ಅರುಹು ಕುರುಹು

ಸಂಪುಟ : ೧೨
ಸಂಚಿಕೆ : ೪೫
ಜುಲೈ-ಸೆಪ್ಟೆಂಬರ್ ೨೦೨೧

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ಯುಜಿಸಿ ಕೇರ್ ಪಟ್ಟಿಯಲ್ಲಿರುವ ತ್ರೈಮಾಸಿಕ ಪತ್ರಿಕೆ



UGC CARE LISTED AND PEER REVIEWED JOURNAL

ISSN: 2347 - 5048

# ಅರುಹು ಕುರುಹು

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ಸಂಪುಟ : ೧೨ ಸಂಚಿಕೆ : ೪೫ ಜುಲೈ-ಸೆಪ್ಟಂಬರ್ ೨೦೨೧

ಯುಜಿಸಿ ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞಪರಿಶೀಲಕರ ಕನ್ನಡ ಪತ್ರಿಕೆ



ತಜ್ಞ ಪರಿಶೀಲಕರ ಸಮಿತಿ

PEER REVIEW COMMITTEE

**ಡಾ. ಸಿ. ನಾಗಣ್ಣ**
ಸಂದರ್ಶಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ಎಂ.ಜಿ. ಮಂಜುನಾಥ**
ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ಪ್ರೀತಿ ಶ್ರೀ ಮಂಥರಕುಮಾರ್**
ಪ್ರಾಧ್ಯಾಪಕರು (ನಿ), ಮೈಸೂರು ವಿಶ್ವವಿದ್ಯಾನಿಲಯ

**ಡಾ. ಮುಜಾಫರ್ ಅಸ್ಸಾದಿ**
ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

**ಡಾ. ವಿನಯಾ ಒಕ್ಕುಂದ**
ಪ್ರಾಧ್ಯಾಪಕರು, ಸರ್ಕಾರಿ ಪ್ರಥ. ಕಾಲೇಜು, ದಾಂಡೇಲಿ

**ಡಾ. ಸೋಮಣ್ಣ ಹೊಂಗಳ್ಳಿ**
ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ

**ಡಾ. ಮೇಟಿ ಮಲ್ಲಿಕಾರ್ಜುನ**
ಭಾಷಾಶಾಸ್ತ್ರ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ

**ಡಾ. ಎಫ್.ಟಿ. ಹಳ್ಳಿಕೇರಿ**
ಹಸ್ತಪ್ರತಿಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ

**ಡಾ. ಪರಮಶಿವಮೂರ್ತಿ**
ಕನ್ನಡ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ

**ಡಾ. ಆರ್. ಸುನಂದಮ್ಮ**
ಪ್ರಾಧ್ಯಾಪಕರು, ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

**ಡಾ. ಅಪ್ಪಗೆರೆ ಸೋಮಶೇಖರ**
ಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಸಂಪಾದಕರು
**ಪ್ರೊ. ಎಚ್ ಎಸ್ ಉಮೇಶ**

ಗೌರವ ಸಂಪಾದಕರು
**ಡಾ. ಹಾ ತಿ ಕೃಷ್ಣೇಗೌಡ**

ವ್ಯವಸ್ಥಾಪಕ ಸಂಪಾದಕರು
**ಹಾ ತಿ ರತ್ನ**

ವಿನ್ಯಾಸ
**ಹಾಲತಿ ಲೋಕೇಶ್**

ತಾಂತ್ರಿಕ ಸಹಕಾರ
**ವಿಪುಲ್ ಹಾಲತಿ**



A PEER REVIEWED AND UGC CARE LISTED JOURNAL

ಅರುಹು ಕುರುಹು, ತ್ರೈಮಾಸಿಕ ಪತ್ರಿಕೆ



#೧೦, 'ಬೆಳಕು', ಕುವೆಂಪು ರಸ್ತೆ, ಪೃಥ್ವಿ ಬಡಾವಣೆ, ದಟ್ಟಗಳ್ಳಿ ೩ನೇ ಹಂತ
ಮೈಸೂರು-೫೭೦೦೩೩, ಮೊ: ೯೮೮೬೬೨೨೮೩೩
halathisomashekar@gmail.com aruhukuruhu@gmail.com

# ಒಳನೋಟ


೧. ಅತ್ತಿಮಬ್ಬೆಯ ಸುತ್ತಮುತ್ತ : ಕೆಲವು ವಿಚಾರಗಳು – ಡಾ ಎನ್ ಎಸ್ ತಾರಾನಾಥ

೨. ಅಡಿಗರ ಅನುವಾದ : "ಹುಲ್ಲಿನ ದಳಗಳು" – ಡಾ ಸಿ ನಾಗಣ್ಣ

೩. ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೋಲದೇವನಹಳ್ಳಿ ಶಾಸನ : ಸಂಖ್ಯೆ ೩೭ (ಒಂದು ಕಿರು ಅಧ್ಯಯನ) – ತಾ ನಂ ಕುಮಾರಸ್ವಾಮಿ

೪. ರಾಷ್ಟ್ರಕೂಟರ ಶಾಸನಗಳು : ಸಾಂಸ್ಕೃತಿಕ ನೋಟ – ಡಾ. ಟಿ.ಡಿ. ರಾಜಣ್ಣ ತಗ್ಗಿ

೫. ಕನ್ನಡ ಶಾಸನಗಳಲ್ಲಿ ಸಮಪಂಚವಾದ ವೃತ್ತಗಳು – ಬಸವರಾಜು ಪಿ

೬. ಶಾಸನಗಳಲ್ಲಿ ವೀರಬಲ್ಲಾಳನ ರಾಣಿಯರು – ಶಕುಂತಲ ಸಿ ವಿ

೭. ತ್ರಿಯಂಬಕಪುರದ ತಾಮ್ರ ಶಾಸನೋಕ್ತ ಹತ್ತೊಂಬತ್ತು ಕೆರೆಗಳು – ಒಂದು ಚಾರಿತ್ರಿಕ ಅವಲೋಕನ – ಡಾ ಹೆಚ್ ಎಂ ಮೋಹನ

೮. ಬಲೀಂದ್ರ : ಪುರಾಣ ಮತ್ತು ಆಚರಣೆ – ಡಾ ಶ್ರೀಧರ ಎನ್

೯. ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು – ಡಾ ಎಂ ರಂಗಸ್ವಾಮಿ

೧೦. ತಮಿಳಿನ ಅರವತ್ಮೂರು ನಾಯನ್ಮಾರರು – ಒಂದು ಅವಲೋಕನ – ಡಾ ಎನ್ ಕರಿಬಸಪ್ಪ

೧೧. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನವರಸಗಳು – ಧನಲಕ್ಷ್ಮೀ

೧೨. ಕನ್ನಡ ಕಾವ್ಯಗಳಲ್ಲಿ ರಸ ನಿರೂಪಣೆ – ಜೆ ಪ್ರೇಮಾ

೧೩. ವಚನಗಳ ತಾತ್ವಿಕತೆ – ಡಾ ರಾಧಾಕೃಷ್ಣ ಎಸ್ ಬೆಳ್ಳೂರು

೧೪. ಜೇಡರ ದಾಸಿಮಯ್ಯನವರ ವಚನಗಳಲ್ಲಿ ಸಾಮಾಜಿಕ ವಿಡಂಬನೆ – ಡಾ ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ

೧೫. ಹರಿದಾಸ ಪರಂಪರೆಯ ಪ್ರತಿನಿಧಿ ಪುರಂದರದಾಸರು – * ರೇಣುಕಾ ಡಿ ಆರ್ ** ಡಾ ಎಲ್ ಪಿ ರಾಜು

೧೬. ವಿಜಯನಗರ ಕುರಿತು ಬರ್ಟನ್ ಸ್ಟೀನ್ – ಎಸ್ ಬಿ ಶಿವಪ್ರಸಾದ್

೧೭. ಸುರಪುರ ಸಂಸ್ಥಾನದ ಪೂರ್ವ ಸೈನ್ಯ ವ್ಯವಸ್ಥೆ ಮತ್ತು ಯುದ್ಧಗಳು : ಒಂದು ಅಧ್ಯಯನ – ರಮೇಶ

೧೮. ಡಾ. ಜಿ. ಆರ್. ತಿಪ್ಪೇಸ್ವಾಮಿ ವಿರಚಿತ 'ಎಂ. ಎಲ್. ಶ್ರೀಕಂಠೇಶಗೌಡ' ಕೃತಿ : ಒಂದು ಅನುಸಂಧಾನ – ಡಾ ಕಾ ವೆಂ ಶ್ರೀನಿವಾಸಮೂರ್ತಿ

೧೯. ಕುವೆಂಪು ದೃಷ್ಟಿಯಲ್ಲಿ ಕನ್ನಡ ನಾಡು–ನುಡಿ ಮತ್ತು ಕನ್ನಡಿಗ – ಡಾ ಗೋವಿಂದೇಗೌಡ ಕೆ ಇ

೨೦. ತಾಯ್ನುಡಿಯಲ್ಲದೆಯೂ ನುಡಿ ತಾಯಿಯ ಸೇವೆಗೈದವರು ತುಳುವರಿವರು ಕೃತಿ ನೋಟ – ಡಾ ಮಾಧವ ಎಂ ಕೆ

೨೧. ಡಾ ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕದ ಪ್ರಸ್ತುತತೆ – ಡಾ ಜಯರಾಮಯ್ಯ ವಿ

೨೨. ಡಾ ಸಿದ್ಧಲಿಂಗಯ್ಯ ಅವರ ಕಾವ್ಯದ ಭಿನ್ನ ಆಯಾಮಗಳು – ಡಾ ಉಮಾಶಂಕರ್ ಎಚ್ ಡಿ

೨೩. ಮುಂಜಾನೆ ಭಾವ – ಬಂದ್ರಳ್ಳಿ ಚಂದ್ರು

೨೪. ನಾವೂ ಕಾರಣರೇ? – ಡಾ ಹಾಲತಿ ಸೋಮಶೇಖರ್

೨೫. ಪು. ತಿ. ನ. ಅವರ ಸಾಹಿತ್ಯದಲ್ಲಿ 'ಮಾನವೀಯ ಚಿಂತನೆಗಳ' ನೋಟ – ರಂಗಸ್ವಾಮಿ ಹೆಚ್

೨೬. 'ಅರ್ಥ' : ಹಲವು ಸಾಧ್ಯತೆಗಳ ಒಂದು ವಿಶಿಷ್ಟ ಕಥೆ – ಡಾ ಮೋಹನ್ ಕುಮಾರ್ ಎಂ ಜಿ

೨೭. ಕನ್ನಡದ ಹಿರಿಯ ಪ್ರಾಧ್ಯಾಪಕ ಪ್ರೊ. ಮ. ಗು. ಬಿರಾದಾರ – ಡಾ. ಅಪ್ಪಗೆರೆ ಸೋಮಶೇಖರ್

೨೮. ಆಧುನಿಕ ವಚನಕಾರ ಡಾ. ಸಿದ್ಧಯ್ಯ ಪುರಾಣಿಕ – ಡಾ ಹಣಮಂತ ಬಿ ಮೇಲಕೇರಿ

೨೯. ಡಾ. ಸೋಮನಾಥ ಯಾಳವಾರರ ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆ ಚುಟುಕು ಕಾವ್ಯಸಂಕಲನದಲ್ಲಿ ಕಾವ್ಯಸಖಿಯೊಡನೆ ಕವಿಯ ಸಖ್ಯಭಾವ – ದತ್ತಾತ್ರಯ ಸಿ ಹೆಚ್

೩೦. ಬಿ. ಶ್ಯಾಮಸುಂದರ್ ಅವರ ಜೀವಪರ ಸಂವೇದನೆಗಳು – ಸೌಭಾಗ್ಯ ಶಿವಪುತ್ರಪ್ಪ

೩೧. ಮಹಿಳಾ ಕಾವ್ಯದ ಅಭಿವ್ಯಕ್ತಿಯ ನೆಲೆಗಳು – ಸುಜೀತ್ ಎಸ್

೩೨. ಕಡಲ ಕುದಿತದ ಬೇಗುದಿಯೊಳಗೂ ಮಾನವ್ಯದ ಹಾದಿ – ಡಾ ಹೆಚ್ ಎಸ್ ಮಂಜುರಾಜು

೩೩. ಜಿ.ಎಸ್.ಎಸ್ ಅವರ ಗಾಂಧಿ ಕವಿತೆ ಹಾಗೂ ವರ್ತಮಾನದಲ್ಲಿ ಗಾಂಧೀಜಿಯವರ ಮೌಲ್ಯಗಳು – ಚಂದ್ರಶೇಖರ ಹೆಗಡೆ

೩೪. ಎಚ್ ಜಿ ಸಣ್ಣಗುಡ್ಡಯ್ಯನವರ ಕವಿತೆಗಳಲ್ಲಿ ಸಾಮಾಜಿಕ ನೆಲೆ – ಪದ್ಮಜ ವೈ ಎಂ

೩೫. ವಲಸೆ ಹಕ್ಕಿಯ ಹಾಡು : ತಲೆಮಾರುಗಳ ಮುಖಾಮುಖಿ – ಡಾ ದೊರೇಶ

೩೬. ಕಟ್ಟೀಮನಿ ಅವರ 'ಜೀವನಕಲೆ' ಕಥಾಸಂಕಲನದಲ್ಲಿ ಜೀವನದ ವಿವಿಧ ಮುಖಗಳ ಚಿಂತನೆ – ವೆಂಕೋಬರಾವ್ ಎಂ

೩೭. ಘನತೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧಗಳು : ಒಂದಿಷ್ಟು ಟಿಪ್ಪಣಿ – ಕವಿತ ಯು ಎಂ

೩೮. ಸಮಾಜದ ಏಳಿಗೆಯಲ್ಲಿ ಕುಶಲಕರ್ಮಿಗಳ ಪಾತ್ರ – ವೆಂಕಟೇಶ್ ಎಸ್

೩೯. ಮಾಧ್ಯಮಗಳಲ್ಲಿ ತಂತ್ರಜ್ಞಾನ ಬಳಕೆ ಮತ್ತು ಪ್ರಭಾವ – ಡಾ ಶಿವಕುಮಾರ ಕಣಸೋಗಿ

೪೦. ಅಪರಾಧಿಗಳ ಮನಃಪರಿವರ್ತನಾ ಕಾರ್ಯಕ್ರಮಗಳು – ಡಾ ಪರಮೇಶ ಜಿ. ಎಸ್

೪೧. ಆತ್ಮೀಯತೆಯ ಸ್ವಾದದತ್ತ ಜಾಹೀರಾತು – ಡಾ ಕಲಾವತಿ ಬಿ ಜಿ

೪೨. "ಪ್ರವೃತ್ತಿ ಮಾನುಷ ಸಹಜಧರ್ಮಂ" – ಕುಮಾರ

ಡಾ.ಪಾದೇಕಲ್ಲು ವಿಷ್ಣುಭಟ್ಟ

'ತುಳುವರಿವರು' ಕೃತಿಯು ತುಳು ಸಾಹಿತ್ಯ ಅಧ್ಯಯನ ಮಾಡುವವರಿಗೆ, ವಿದ್ಯಾರ್ಥಿಗಳಿಗೆ ಒಂದು ಆಕರ ಗ್ರಂಥವಾಗಿರುವುದರಲ್ಲಿ ಸಂಶಯವಿಲ್ಲ. ಡಾ. ಪಾದೇಕಲ್ಲು ವಿಷ್ಣು ಭಟ್ಟ ಅವರು ಈ ಮಹತ್ತ್ವಪೂರ್ಣ ಕೃತಿಯ ಸಂಪಾದಕರು. ತಾಯ್ನೆಲ ಹಾಗೂ ತಾಯ್ನುಡಿಯ ಬಗ್ಗೆ ಅಪರಿಮಿತ ಒಲವು, ಕಾಳಜಿ ಹಾಗೂ ಗೌರವ ಹೊಂದಿರುವ ಡಾ. ಪಾದೇಕಲ್ಲು ವಿಷ್ಣುಭಟ್ಟ ಅವರು ತಮ್ಮ ಬದುಕಿನುದ್ದಕ್ಕೂ ನುಡಿಸೇವೆಯಲ್ಲೇ ತಮ್ಮನ್ನು ತೊಡಗಿಸಿಕೊಂಡವರು. ಕನ್ನಡ ಮತ್ತು ತುಳುಭಾಷೆಗಳ ಜೊತೆಗೆ ಈ ಭಾಷಾ ಸಂಸ್ಕೃತಿಗಳನ್ನು ಕುರಿತು ಹಲವು ಕೃತಿಗಳನ್ನು ಹೊರತಂದವರು. ಕನ್ನಡ, ತುಳು ಮತ್ತು ಯಕ್ಷಗಾನ ಸಾಹಿತ್ಯಕ್ಕೆ ಸಂಬಂಧಿಸಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಅಧ್ಯಾಪನ ಅನುಭವದ ಜೊತೆಗೆ ನಿರಂತರ ಅಧ್ಯಯನ ಶಿಸ್ತನ್ನು ಈಗಲೂ ಅನುಸರಿಸುವ ಡಾ. ಪಾದೇಕಲ್ಲು ವಿಷ್ಣು ಭಟ್ಟರು ಕನ್ನಡ, ತುಳು, ಸಂಸ್ಕೃತ ಭಾಷೆಗಳನ್ನು ಕುರಿತು ಅಧಿಕೃತವಾಗಿ, ಓತಪ್ರೋತವಾಗಿ, ನಿಖರವಾಗಿ ಮಾತನಾಡಬಲ್ಲವರು; ಬರೆಯಬಲ್ಲವರು. ಉಡುಪಿಯಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಸದಸ್ಯರಾಗಿ ಅಲ್ಲಿಂದ ಪ್ರಕಟವಾದ ಹಲವು ಗ್ರಂಥಗಳ ಸಂಪಾದಕರಾಗಿ ಜವಾಬ್ದಾರಿ ನಿರ್ವಹಿಸಿದವರು. 'ತುಳು ನಿಘಂಟು' ಯೋಜನೆ ಯಲ್ಲಿ ಸಹಾಯಕ ಸಂಪಾದಕರಾಗಿ ದುಡಿದವರು. ವಿವಿಧ ಲೇಖನ ಸಂಕಲನಗಳನ್ನೂ ಶಾಸ್ತ್ರಸಂಬಂಧಿ ಗ್ರಂಥಗಳನ್ನೂ ಸಂಪಾದಿಸಿದವರು. ತುಳು ಸಾಹಿತ್ಯಾಧ್ಯಯನ, ಹಳಗನ್ನಡ-ಹೊಸಗನ್ನಡಗಳ ಮಧ್ಯಮಣಿ ಕವಿ ಮುದ್ದಣ ಮೊದಲಾದ ಇವರ ವಿದ್ವತ್ಪೂರ್ಣ ಕೃತಿಗಳು ಉಲ್ಲೇಖನೀಯ. ತುಳು ಛಂದೋವಿನ್ಯಾಸ, ಯಕ್ಷಗಾನ, ಭಾಗವತ ಪ್ರಸಂಗಗಳು, ಮಹಾ ಜನಪದ ಮೊದಲಾದ ಇವರ ಸಂಪಾದಿತ ಕೃತಿಗಳು ಅತ್ಯಂತ ಮಹತ್ತ್ವದವುಗಳಾಗಿವೆ. ಹತ್ತು ಹಲವು ಪ್ರಶಸ್ತಿ, ಗೌರವಗಳು ಇವರಿಗೆ ಲಭಿಸಿವೆ.

* * *



# ಡಾ ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕದ ಪ್ರಸ್ತುತತೆ

## ಡಾ ಜಯರಾಮಯ್ಯ ವಿ

ಡಾ. ಸಿದ್ಧಲಿಂಗಯ್ಯನವರು ಮಹಾಭಾರತದಲ್ಲಿ ಬರುವ ಏಕಲವ್ಯನ ಪ್ರಸಂಗವನ್ನು ತೆಗೆದುಕೊಂಡು ಆಧುನಿಕ ಕಾಲಕ್ಕೆ ಅನ್ವಯವಾಗುವಂತೆ ಏಕಲವ್ಯ ನಾಟಕವನ್ನು ರಚಿಸಿದ್ದಾರೆ. ಆದರೆ ಮೂಲದಲ್ಲಿರುವಂತೆ ಚಿತ್ರಿಸದೆ ತಮ್ಮ ಆಶಯಗಳನ್ನು ಹೇಳಲು ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಈ ನಾಟಕದಲ್ಲಿ ೧೧ ದೃಶ್ಯಗಳಿದ್ದು ಮೊದಲನೆಯ ದೃಶ್ಯದಲ್ಲಿ ಮೇಳದವರು ಏಕಲವ್ಯನ ಶೌರ್ಯ, ಸಾಹಸ, ಘನತೆ-ಗೌರವ, ವೀರತ್ವಗಳನ್ನು ಹಾಡಿನ ಮೂಲಕ ಪರಿಚಯಿಸುತ್ತಾರೆ. ಅನಂತರ ಸೈನಿಕ ಶ್ರೀಗಂಧದ ಮರವನ್ನು ಕಡಿಯುವ ಸಂದರ್ಭದಲ್ಲಿ ಗಾಳಣ್ಣ ಮತ್ತು ಬೋರಣ್ಣ ತಡೆಯುತ್ತಾರೆ. ಶೆಟ್ಟಿಯು ರಾಜರಿಗೂ ನಾವು ಪಾಲುಕೊಡುತ್ತೇವೆ. ಅವರ ಅನುಮತಿಯಿಂದಲೇ ಇಲ್ಲಿಗೆ ಬಂದಿದ್ದೇವೆಂದು ಪೌರುಷದಿಂದ ಹೇಳುತ್ತಾನೆ. ಗಾಳಣ್ಣ ಮತ್ತು ಬೋರಣ್ಣ ಮರ ಕಡಿಯಲು ಬಿಡುವುದಿಲ್ಲ. ಕೊನೆಗೆ ವಿಧಿಯಿಲ್ಲದೆ ಶೆಟ್ಟಿ ಒಂದು ಕೈ ನೋಡುಕೊಳ್ಳುತ್ತೇವೆ. ನಿಮ್ಮನ್ನು ಮಟ್ಟಹಾಕಲು ನಮ್ಮ ಸೈನಿಕರನ್ನು ಕರೆದುಕೊಂಡು ಬರುತ್ತೇವೆಂದು ಹೆದರಿಕೊಂಡು ಓಡುತ್ತಾರೆ.

ಎರಡನೆಯ ದೃಶ್ಯದಲ್ಲಿ ಏಕಲವ್ಯನಿಗೆ ಕಾಡಿನ ಮರಗಳನ್ನು ಕಡಿಯುವುದನ್ನು ಮತ್ತು ರಾಜನು ಕಾಡಿನ ಜನರನ್ನು ಬಗ್ಗುಬಡಿಯುವ ಸಂಚನ್ನು ಹೂಡಿರುವ ಸುದ್ದಿಯು ಬೋರಣ್ಣ ಮತ್ತು ಗಾಳಣ್ಣರಿಂದ ತಿಳಿಯುತ್ತದೆ. ಏಕಲವ್ಯ ಕಾಡಿನ ಜನರನ್ನು ನಾಡಿನ ಜನರಿಂದ ಅಥವಾ ರಾಜನಿಂದ ಹೇಗೆ ಬಿಡಿಸುವುದೆಂದು ಚಿಂತಿಸುತ್ತಿರುವಾಗ ತಾಯಿ ಮತ್ತು ಮಾವನ ಪ್ರವೇಶವಾಗುತ್ತದೆ. ಕೊನೆಗೆ ತಾಯಿ ಹಸ್ತಿನಾವತಿಗೆ ಹೋಗಿ ದ್ರೋಣರ ಕಾಲಿಡಿದು ವಿದ್ಯೆ ಕಲಿಸಿಕೊಡುವಂತೆ ಬೇಡಿಕೊ ಎಂದಾಗ, ತಾಯಿ-ಮಾವರ ಆಶೀರ್ವಾದ ಪಡೆದು ದ್ರೋಣಾಚಾರ್ಯರ ಬಳಿ ಬರುತ್ತಾನೆ. ಮೂರನೆಯ ದೃಶ್ಯದಲ್ಲಿ ಏಕಲವ್ಯನು ದ್ರೋಣಾಚಾರ್ಯರನ್ನು ಭೇಟಿಮಾಡಿ ವಿದ್ಯೆ ಕಲಿಸಿಕೊಡುವಂತೆ ಬೇಡಿಕೊಂಡಾಗ, ದ್ರೋಣರಿಗೆ ವಿದ್ಯೆ ಕಲಿಸುವ ಮನಸ್ಸಿದ್ದರೂ ಭೀಮ-ಅರ್ಜುನರಿಂದ ದ್ರೋಣಾಚಾರ್ಯರಿಗೆ ಸಾಧ್ಯವಾಗುವುದಿಲ್ಲ. ನಾಲ್ಕನೆಯ ದೃಶ್ಯದಲ್ಲಿ ದ್ರೋಣರ ಮಗ ಅಶ್ವತ್ಥಾಮನ ಸಹಾಯದಿಂದ ದ್ರೋಣಾಚಾರ್ಯರು ಪಾಂಡವ-ಕೌರವರಿಗೆ ವಿದ್ಯೆ ಹೇಳಿಕೊಡುವ ಪ್ರತಿದಿನ ಮುನ್ನ ತನಗೆ ಅಂದರೆ ಅಶ್ವತ್ಥಾಮನಿಗೆ ವಿದ್ಯೆ ಹೇಳಿಕೊಡುವಾಗ ನೀನು ಮರೆಯಲ್ಲಿ ನಿಂತು ಕಲಿತುಕೊ ಎಂದು ಅಶ್ವತ್ಥಾಮ ಹೇಳುತ್ತಾನೆ. ಅದರಂತೆ ಏಕಲವ್ಯ ಮರೆಯಲ್ಲಿ ನಿಂತು ವಿದ್ಯೆಯನ್ನು ಕಲಿತುಕೊಳ್ಳುತ್ತಿರುತ್ತಾನೆ. ಐದನೆಯ ದೃಶ್ಯದಲ್ಲಿ ದ್ರೋಣ-ಭೀಷ್ಮರ ಸಂಭಾಷಣೆಯಲ್ಲಿ ಮುಂದಿನ ಕುರುಕ್ಷೇತ್ರ ಯುದ್ಧದಲ್ಲಿ ಆಗುವ ಅನಾಹುತದ ಬಗ್ಗೆ ಚರ್ಚಿಸುತ್ತಾರೆ.

ಆರನೆಯ ದೃಶ್ಯದಲ್ಲಿ ಏಕಲವ್ಯ ದ್ರೋಣರ ಪ್ರತಿಮೆಯನ್ನು ಮುಂದಿಟ್ಟುಕೊಂಡು ಬಿಲ್ವಿದ್ಯೆಯ ಅಭ್ಯಾಸ ಮಾಡುತ್ತಾನೆ. ಏಳನೇ ದೃಶ್ಯದಲ್ಲಿ ಧನುರ್ವಿದ್ಯೆಯಲ್ಲಿ ಪಾರಂಗತನಾದ ಏಕಲವ್ಯನು ಕಾಡಿನಲ್ಲಿ ಶಬ್ದವೇದಿ ವಿದ್ಯೆಯ ಮೂಲಕ ಬೊಗಳುತ್ತಿರುವ ಬೇಟೆನಾಯಿಯನ್ನು

---

ಡಾ. ಜಯರಾಮಯ್ಯ ವಿ, ಸಹ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಶಿವಗಂಗೋತ್ರಿ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

ಸಂಹಾರ ಮಾಡಿದಾಗ ಅಲ್ಲಿಯೇ ಬಿಲ್ವಿದ್ಯೆ ಅಭ್ಯಾಸ ಮಾಡುತ್ತಿದ್ದ ಅರ್ಜುನನಿಗೆ ಆಶ್ಚರ್ಯವಾಗುತ್ತದೆ. ಈ ರೀತಿ ಬೇಟೆ ನಾಯಿಯ ಬಾಯಿ ಮುಚ್ಚಿಸಿದವ[illegible]ಯಾರಿರಬಹುದು? ಅವನು ದೊಡ್ಡ ವೀರನೇ ಇರಬಹುದು ಎಂದು ಊಹಿಸಿ, ಹುಡುಕಿಕೊಂಡು ಬರುತ್ತಿರುವಾಗ ದ್ರೋಣ-ಅರ್ಜುನ-ಏಕಲವ್ಯರ ಭೇಟಿಯಾಗುತ್ತದೆ. ಇಲ್ಲಿ ದ್ರೋಣರು ಏಕಲವ್ಯನ ವಿದ್ಯೆಗೆ ಮೆಚ್ಚಿ ಗುರುವನ್ನು ಮೀರಿಸಿದ ವಿದ್ಯೆ ಕಲಿತಿರುವೆ ಎಂಬ ಪ್ರಶಂಸೆಗೆ ಪಾತ್ರನಾಗುತ್ತಾನೆ. ಏಕಲವ್ಯನಿಗೆ ದ್ರೋಣರು ಪರೋಕ್ಷ ಗುರುಗಳಾದ ವಿಷಯ ಅರ್ಜುನನಿಗೆ ತಿಳಿದಾಗ ಅರ್ಜುನನ ಪ್ರೇರಣೆಯಿಂದ ದ್ರೋಣರು ಏಕಲವ್ಯನಿಂದ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನು ಪಡೆಯುತ್ತಾರೆ. ಅದೇ ತಕ್ಷಣ ಬೇಡನು 'ಹುಲಿಯೊಂದು ಅಟ್ಟಿಸಿಕೊಂಡು ಬರುತ್ತಿದೆ ಬಾಣ ಪ್ರಯೋಗ ಮಾಡು ಏಕಲವ್ಯ' ಎಂದಾಗ ತಕ್ಷಣ ಬಾಣ ಹೂಡಲು ಪ್ರಯತ್ನಿಸಿದಾಗ ತನ್ನ ಹೆಬ್ಬೆರಳನ್ನು ಕಳೆದುಕೊಂಡ ಏಕಲವ್ಯನಿಗೆ ಸಾಧ್ಯವಾಗುವುದಿಲ್ಲ. ಅಲ್ಲಿಂದ ಅರ್ಜುನ ದ್ರೋಣರು ನಿರ್ಗಮಿಸಿದಾಗ ತಾಯಿ ಬಂದು ರಕ್ತವನ್ನು ಕಂಡು ತನ್ನ ಮಗನು ಬೆರಳನ್ನು ದ್ರೋಣರಿಗೆ ಗುರುಕಾಣಿಕೆಯಾಗಿ ಅರ್ಪಿಸಿದೆ ಎಂದಾಗ, ತಾಯಿ ದ್ರೋಣರನ್ನು ಶಪಿಸುತ್ತಾಳೆ. ಎಂಟನೆಯ ದೃಶ್ಯದಲ್ಲಿ ಮೂರು ಜನ ಸೈನಿಕರು ತಾವು ಎಷ್ಟು ಅಪ್ರಾಮಾಣಿಕರು ಅಧೈರ್ಯವಂತರು ಎಂಬುದನ್ನು ತೋರಿಸಿಕೊಡುತ್ತಾರೆ. ಒಂಬತ್ತನೆಯ ದೃಶ್ಯದಲ್ಲಿ ಕರ್ಣ ದುರ್ಯೋಧನರು ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಚರ್ಚಿಸುತ್ತಾರೆ. ಹತ್ತನೆಯ ದೃಶ್ಯದಲ್ಲಿ ಪಾಂಡವರೂ ಸಹ ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಸೆಳೆಯುವ ಹುನ್ನಾರು ನಡೆಸುತ್ತಾರೆ. ಹನ್ನೊಂದನೆಯ ದೃಶ್ಯದಲ್ಲಿ ಕೌರವ-ಪಾಂಡವರು ತಮ್ಮ ಪಕ್ಷ ಸೇರುವಂತೆ ಏಕಲವ್ಯನನ್ನು ಪ್ರೇರೇಪಿಸುತ್ತಾರೆ. ಆದರೆ ಏಕಲವ್ಯ ಯಾರ ಪಕ್ಷವನ್ನೂ ಸೇರದೇ ಅನ್ಯಾಯದ ವಿರುದ್ಧ ಹೋರಾಡುವ ನಿಲುವನ್ನು ತೆಗೆದುಕೊಳ್ಳುತ್ತಾನೆ. ಇಲ್ಲಿಗೆ ನಾಟಕ ಮುಗಿಯುತ್ತದೆ.

ನಾಟಕವನ್ನು ಮೊದಲು ಓದುತ್ತಿದ್ದಾಗ ಕಾಡಿನ ಮತ್ತು ನಾಡಿನ ಜನರ ಎರಡು ಸಂಸ್ಕೃತಿಗಳನ್ನು ಮುಖಾಮುಖಿ ಮಾಡುತ್ತಿದ್ದಾರೆಂದು ತಿಳಿದುಬರುತ್ತದೆ. ಕಾಡಿನ ಜನರಿಗೆ ಪರಿಸರದ ಬಗೆಗಿರುವ ಅರಿವು ಹಾಗೂ ಈ ನಾಟಕದಲ್ಲಿ ಬೋರಣ್ಣ ಹೇಳುವಂತೆ "ನಂ ಕಾಡಿಗೆ ನಮ್ಗೇ ಎದುರ್ ಬೀಳ್ತಾರಲ್ಲೊ" ಎಂಬ ವಸಾಹತುಶಾಹಿ ಹಿನ್ನೆಲೆ ಅಂದರೆ ಕಾಡು ಜನರಾದ ಭಾರತೀಯರನ್ನ ನಾಡಿನ ಜನರಾದ ಬ್ರಿಟಿಷರು ಆಕ್ರಮಣಮಾಡಿ, ಭಾರತೀಯರ ಮೂಲನೆಲೆಯಾಗಿ ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ. ಮುಂದೆ ಓದುತ್ತಾ ಹೋದಂತೆ ನಮ್ಮ ಇಂದಿನ ದುರ್ಬಲ ರಾಜಕೀಯ ಪರಿಸ್ಥಿತಿಯನ್ನು ರೂಪಕವಾಗಿ ಚಿತ್ರಿಸುತ್ತಿರುವಂತೆ, ಈ ದುರ್ಬಲ ಆಡಳಿತ ವ್ಯವಸ್ಥೆಯಿಂದ ಬೇಸತ್ತ ಜನರ ಪ್ರತಿನಿಧಿಯಾಗಿ ಏಕಲವ್ಯ ನಿಂತಿರುವುದು ಕಂಡುಬರುತ್ತದೆ. ಈ ನಾಟಕದಲ್ಲಿ ಬರುವ ರಾಜ ಎಷ್ಟು ಅಸಮರ್ಥ! ದುರ್ಬಲ ಎಂಬುದನ್ನು ಗಾಳಣ್ಣ ಮತ್ತು ಸೈನಿಕರೇ ಮೊದಲ ದೃಶ್ಯದಲ್ಲಿ ಮರಕಡಿಯುವ ಸಂದರ್ಭದಲ್ಲಿ ಪರಿಚಯಿಸುತ್ತಾರೆ. ಹಿಂದೆ ಒಂದು ಸಾರಿ ರಾಜನು ತನ್ನ ಹೆಂಡತಿಯರೊಂದಿಗೆ ವನವಿಹಾರಕ್ಕೆಂದು ಕಾಡಿಗೆ ಬಂದಿರುತ್ತಾನೆ. ಆಗ ಸಡನ್ನಾಗಿ ಹುಲಿಯೊಂದು ಬಂದಾಗ ರಾಜ ತನ್ನ ಹೆಂಡತಿಯರ ಮತ್ತು ತನ್ನ ಪ್ರಾಣ ರಕ್ಷಣೆಗೋಸ್ಕರ ಪಾಟಕಿತ್ತು ಹಳ್ಳದೊಳಗೆ ಬೀಳುತ್ತಾನೆ. ಅನಂತರ ಬೇಡರು ರಾಜನ ಪರಿಸ್ಥಿತಿಯನ್ನು ಕಂಡು ಹಗ್ಗ ಇಳಿಸಿ ರಾಜನನ್ನು ಹಳ್ಳದಿಂದ ಮೇಲಕ್ಕೆತ್ತುತ್ತಾರೆ. ಗಾಳಣ್ಣನ ಈ ಮಾತಿಗೆ ರಾಜನ ಅಂಗರಕ್ಷಕನಾದ ಸೈನಿಕನು "ರಾಜರು ಪ್ರಾಣ ರಕ್ಷಣೆಗಾಗಿ ಓಡಿ ಹಳ್ಳಕ್ಕೆ ಬಿದ್ದದ್ದು ನಿಜ. ಯಾವನೂ ಒಂದು ಹಗ್ಗ ಕೊಡಲಿಲ್ಲ, ರಾಜರೇ ಸ್ವತಃ ತಮ್ಮ ಪರಾಕ್ರಮದಿಂದ ಮೇಲಕ್ಕೆ ಬಂದರು" ಎನ್ನುವ ವಾಕ್ಯದಲ್ಲೇ ಗಮನಿಸಬಹುದು, ರಾಜ ಎಷ್ಟು ಅಸಮರ್ಥ



ಎಂದು. ಹಳ್ಳದಿಂದ ಮೇಲಕ್ಕೆ ಎದ್ದು ಬಂದಿದ್ದೇ ರಾಜನ ದೊಡ್ಡ ಸಾಹಸ! ಎನ್ನುವುದರ ಮೂಲಕ ಸೈನಿ[illegible] ರಾಜನ ಅದಕ್ಷತೆಯನ್ನು ತಿಳಿಸಿಕೊಡುತ್ತಾನೆ ಹಾಗೂ ರಾಜನ ಸೈನಿಕರೂ ಎಷ್ಟು ಅಂಜುಬುರುಕರು ಅಸಮರ್ಥರು ಎಂಬುದು ನಾಟಕದ ಎಂಟನೆಯ ದೃಶ್ಯದಲ್ಲಿ ಮೂರು ಜನ ಸೈನಿಕರ ಸಂಭಾಷಣೆಯಲ್ಲಿ ಗಮನಿಸಬಹುದು. ತನ್ನನ್ನು ತನ್ನ ಹೆಂಡತಿಯರನ್ನು ಕಾಪಾಡಲಾಗದ ಅಸಮರ್ಥ ರಾಜನು, ಇನ್ನು ದೇಶದ ಜನರನ್ನು ಹೇಗೆ ತಾನೇ ಕಾಪಾಡುತ್ತಾನೆ? ಆ ರಾಜನಿಗೆ ಇಷ್ಟವಾದುದ್ದು ಶೆಟ್ಟಿ ಮತ್ತು ಸೈನಿಕನೇ ಹೇಳುವಂತೆ "ಹಣ್ಣು, ಜೇನು, ಕಾಡಿನ ಜಿಂಕೆ, ಮೊಲಗಳ ಮಾಂಸ ಅಂದ್ರಂತೂ ಅವರಿಗೆ ಪಂಚ ಪ್ರಾಣ." ಮುಂದೆ ಬೋರಣ್ಣ ಹೇಳುವಂತೆ "ರಾಜರು ಹಣ್ಣು ಜೇನುಗಳಿಗೆ ಮನಸೋತರೆ, ಸೈನಿಕರು ಕಾಡಿನ ಹೆಣ್ಣು ಹೆಂಡಕ್ಕೆ ಮನಸೋತರು." ಈ ಮಾತುಗಳಿಂದಲೇ ತಿಳಿಯುತ್ತದೆ ಆ ರಾಜ ಎಷ್ಟು ನೀಚ ಅಧಮ ಎಂದು, ಇಲ್ಲಿ ಕಾಡು ಜಿಂಕೆ ಎಂದರೆ ಸುಂದರವಾದ ಹೆಣ್ಣು ಎಂದು ಅರ್ಥೈಸಬೇಕಾಗುತ್ತದೆ. ಸುಂದರ ಹೆಣ್ಣುಗಳು ರಾಜನಿಗಾದರೆ ಇತರೇ ಸಾಮಾನ್ಯ ಹೆಣ್ಣುಗಳನ್ನು ಸೈನಿಕರು ಅನುಭವಿಸುತ್ತಾರೆ. ಇಲ್ಲಿ ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು ಕವನ ಸಂಕಲನದ ಬೆಲ್ಚಿಯ ಹಾಡನ್ನು ನೆನಪಿಗೆ ತರುತ್ತದೆ. ಈ ಕವನದಲ್ಲಿ ಬಡ ಹೆಣ್ಣು ಮಕ್ಕಳನ್ನು ಶ್ರೀಮಂತರು ಲೈಂಗಿಕವಾಗಿ ಕಿರುಕುಳ ಕೊಡುವುದನ್ನು, ಇಲ್ಲಿಯೂ ಶ್ರೀಮಂತರಾದ ರಾಜನು ಸೈನಿಕರು ಕಾಡಿನ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದುದ್ದನ್ನು ಸೂಕ್ಷ್ಮವಾಗಿ ಹೇಳುತ್ತಾರೆ. ಹೆಣ್ಣು ಹೆಂಡಕ್ಕೆ ಮರುಳಾದ ಯಾವ ರಾಜನೂ ದಕ್ಷ ರಾಜನಾಗಲು ಸಾಧ್ಯವಿಲ್ಲ. ಇದನ್ನು ನಾವು ಇತಿಹಾಸದ ಪುಟಗಳಲ್ಲಿ ೧೬ನೆಯ ಲೂಯಿಯಂತಹ ರಾಜರುಗಳನ್ನು ಗಮನಿಸಿದ್ದೇವೆ. ಕಾಡಿನಲ್ಲಿ ಗಂಧದಮರ ಕಡಿಯುವ ಸಂದರ್ಭದಲ್ಲಿ ಗಾಳಣ್ಣ ಮತ್ತು ಬೋರಣ್ಣ ತಡೆದಾಗ ಶೆಟ್ಟಿ "(ನಕ್ಕು) ಎಂಥ ಬೆಪ್ಪರಯ್ಯ ನೀವು, ಮಹಾರಾಜರ ಅಪ್ಪಣೆ ಕೇಳಿಯೇ ನಾವಿಲ್ಲಿಗೆ ಬಂದದ್ದು. ನಮಗೆ ಬರೋ ಲಾಭದಲ್ಲಿ ಅವರಿಗೆ ಸೂಕ್ತವಾದ ಪಾಲು ಹೋಗೋದ್ರಿಂದ ಇದಕ್ಕೆ ಅವ್ರ ಅನುಮತಿ ಉಂಟೇ ಹೊರತು ಅಭ್ಯಂತರವಲ್ಲ" ಎಂಬ ಮಾತಿನಲ್ಲಿಯೇ ತಿಳಿಯುತ್ತದೆ. ಶೆಟ್ಟಿ ಮತ್ತು ರಾಜನಿಗೂ ಎಂತಹ ಕಮಿಟ್‌ಮೆಂಟ್ ಇದೆಯೆಂದು. ಈ ರಾಜನು ನಮ್ಮ ಆಧುನಿಕ ಕೆಲವು ರಾಜಕಾರಣಿಗಳಿಗೆ ಸಮನಾಗಿದ್ದಾನೆ. ಇಂತಹ ವಿಷಯಗಳನ್ನು ಪ್ರತಿ ನಿತ್ಯ ಮಾಧ್ಯಮಗಳಲ್ಲಿ ಗಮನಿಸುತ್ತಿದ್ದೇವೆ.

ಇಂತಹ ದುರ್ಬಲ ಆಡಳಿತ ವ್ಯವಸ್ಥೆಯಿಂದ ಬೇಸತ್ತ ಏಕಲವ್ಯನು "ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು" ಎಂಬ ಗಾದೆಯಂತೆ ಶಾಸ್ತ್ರೋಕ್ತವಾಗಿ ವಿದ್ಯೆ ಕಲಿಯಲು ಮುಂದಾಗುತ್ತಾನೆ. ಏಕೆಂದರೆ ಏಕಲವ್ಯ ಮೂಲತಃ ಬೇಡರ ಕುಲದವನು ಅವನಿಗೆ ಕಾಡಿನ ವಿದ್ಯೆ ಮಾತ್ರ ಗೊತ್ತಿರುತ್ತದೆಯೇ ಹೊರತು ನಾಡಿನ ಜನರನ್ನು ಭೇದಿಸುವ ವಿದ್ಯೆ ತಿಳಿದಿರುವುದಿಲ್ಲ. ಬ್ರಿಟಿಷರನ್ನು ಭಾರತದಿಂದ ಓಡಿಸಲು ನಮಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಗೊತ್ತಿಲ್ಲದಿದ್ದರೂ ಅನಿವಾರ್ಯವಾಗಿ ಅವರಂತೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಬೇಕಾಯಿತು. ಅದರಂತೆ ಏಕಲವ್ಯನು ತನ್ನ ತಾಯಿ, ಮಾವನ ಆಶೀರ್ವಾದ ಪಡೆದು ದ್ರೋಣಾಚಾರ್ಯರಲ್ಲಿಗೆ ವಿದ್ಯೆ ಕಲಿಯಲೆಂದು ಬರುತ್ತಾನೆ. ಆದರೆ ಅಲ್ಲಿ ಬೆಳೆಯಲು ಅವಕಾಶ ಕೊಡುವುದಿಲ್ಲ. ಏಕೆಂದರೆ ಅವನು ಬೆಳೆದು ಎಲ್ಲಿ ನಮ್ಮನ್ನೂ ಮೀರಿಸುತ್ತಾನೋ ಎಂಬ ಭಯದಿಂದ ಆತನನ್ನು ಚಿವುಟಿಹಾಕಲು ಪ್ರಯತ್ನಿಸುತ್ತಾರೆ. ಬಹುಶಃ ಭೀಮ ಮತ್ತು ಅರ್ಜುನರಿಗೂ ಇದೇ ರೀತಿಯ ಆತಂಕ ಕಾಡಿರಬಹುದು.

ಕೊನೆಗೆ ಏಕಲವ್ಯ ದ್ರೋಣರ ಮಗ ಅಶ್ವತ್ಥಾಮನ ಮಾರ್ಗದರ್ಶನದಂತೆ, ಅಶ್ವತ್ಥಾಮನಿಗೆ ದ್ರೋಣಾಚಾರ್ಯರು ಧನುರ್ವಿದ್ಯೆ ಹೇಳಿಕೊಡುವ ಸಂದರ್ಭದಲ್ಲಿ ಮರೆಯಲ್ಲಿ ನಿಂತು ನೋಡಿಕೊಂಡು, ಅನಂತರ ದ್ರೋಣರ ಮಣ್ಣಿನ ಮೂರ್ತಿಯನ್ನಿಟುಕೊಂಡು ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುತ್ತಾನೆ. ಕೊನೆಗೆ ಏಕಲವ್ಯ ಎಷ್ಟರಮಟ್ಟಿಗೆ ವಿದ್ಯೆ ಕಲಿತನೆಂದರೆ "ಶೂದ್ರ ಮುಂಡೇವ್ಕೆ ನಾಲಿಗೆ ಹೊರಳೋದಿಲ್ಲ" ಎಂದು ನಿಂದನೆಗೊಳಗಾಗಿದ್ದ ಕುವೆಂಪು ಯಾರ ಸಹಾಯವೂ ಇಲ್ಲದೆ ಸ್ವತಃ ತಾವೇ ಸಂಸ್ಕೃತ ಕಲಿತು, ಸಂಸ್ಕೃತ ಭೂಯಿಷ್ಠವಾದ ಭಾಷೆಯಲ್ಲಿಯೇ ಕಾವ್ಯರಚನೆ ಮಾಡಿದಂತೆ, ಏಕಲವ್ಯನು ಮುಂದೆ ದ್ರೋಣರಿಂದ ನನ್ನನ್ನೂ (ದ್ರೋಣ) ಮೀರಿಸಿದ ಬಿಲ್ಲುಗಾರನಾಗಿದ್ದಾನೆಯೇ! ಎಂಬಷ್ಟರ ಮಟ್ಟಿಗೆ ಮತ್ತು ಈ ನಾಟಕದಲ್ಲಿ ಬರುವ ಶ್ರೀಕೃಷ್ಣನು "ಏಕಲವ್ಯ ಯಾವ ಪಕ್ಷಕ್ಕೂ ಸೇರದೆ ತಟಸ್ಥನಾದರೆ ಸಾಕು" ಎನ್ನುವಂತೆ ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ.

ಒಬ್ಬ ವ್ಯಕ್ತಿ ಆರ್ಥಿಕವಾಗಲೀ, ಬೌದ್ಧಿಕವಾಗಲೀ, ದೈಹಿಕವಾಗಿ ಬಲಿಷ್ಠನಾದರೆ ಅಥವಾ ಪ್ರಖ್ಯಾತನಾಗಿ ಬೆಳೆದರೆ ನಮ್ಮ ಆಧುನಿಕ ರಾಜಕಾರಣಿಗಳು ತಮ್ಮತ್ತ ಸೆಳೆಯಲು ಏನೆಲ್ಲ ಮಸಲತ್ತು ಮಾಡುತ್ತಾರೋ, ಹಾಗೆಯೇ ಕೌರವ ಮತ್ತು ಪಾಂಡವರು ತಮ್ಮ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಏಕಲವ್ಯನನ್ನು ಒತ್ತಾಯಿಸುತ್ತಾರೆ. ಇಲ್ಲಿ ಕೃಷ್ಣ, ಅರ್ಜುನ, ಭೀಮ, ದುರ್ಯೋಧನ, ಕರ್ಣ ಇವರೆಲ್ಲರನ್ನೂ ನಮ್ಮ ಆಧುನಿಕ ರಾಜಕಾರಣಿಗಳಂತೆ ಸಿದ್ಧಲಿಂಗಯ್ಯ ಚಿತ್ರಿಸಿದ್ದಾರೆ. ಒಂದು ಮರವನ್ನು ಬೆಳೆಸಲು ಯಾರೂ ಕಷ್ಟಪಡುವುದಿಲ್ಲ. ಆದರೆ ಅದು ಬೆಳೆದು ಮರವಾದ ಮೇಲೆ ಅದರ ಫಲವನ್ನು ತಿನ್ನಲು ತಾ ಮುಂದು, ನಾ ಮುಂದು ಎಂದು ಮುಂದೆ ಬರುತ್ತಾರೆ. ಹಾಗೆಯೇ ಹಿಂದೆ ಅರ್ಜುನ, ಭೀಮ ಏಕಲವ್ಯನಿಗೆ ವಿದ್ಯೆ ಕಲಿಯಲು ಅವಕಾಶ ಕೊಡಲಿಲ್ಲ. ಮುಂದೆ ಏಕಲವ್ಯ ವಿದ್ಯೆ ಕಲಿತು ಪಾರಂಗತನಾಗಿ ಬೆಳೆದ ಮೇಲೆ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ದುಂಬಾಲು ಬೀಳುತ್ತಾರೆ.

ಮೂಲ ಕಥೆಯಲ್ಲಿ ಏಕಲವ್ಯನಿಗೆ ಪಾಂಡವರ ಮೇಲೆ ದ್ವೇಷವಿದ್ದುದರಿಂದ ಕೌರವ ಪಕ್ಷ ಸೇರಿಕೊಳ್ಳುತ್ತಾನೆ. ಆದರೆ ಈ ನಾಟಕದಲ್ಲಿ ಏಕಲವ್ಯ ಯಾರ ಪಕ್ಷವನ್ನೂ ಸೇರದೆ ಅನ್ಯಾಯವನ್ನು ಚಂಡಾಡಲು ಮುಂದಾಗುತ್ತಾನೆ. ಏಕಲವ್ಯನೇ ಹೇಳುವಂತೆ "ಕುರುಪಾಂಡವರ ಒಂದು ಪಕ್ಷವಹಿಸಿ, ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ ಜ್ಞಾನದ ಗುತ್ತಿಗೆಯನ್ನು ಎತ್ತಿಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ. ಮೇಲು-ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ, ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು ಪಾಂಡವರಿಬ್ಬರ ವಿರುದ್ಧವೂ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕಿದವರ ಬಾಳಿನಲ್ಲಿ ಬೆಳಕು ಮೂಡುತ್ತದೆ."

* * *



# ಡಾ ಸಿದ್ಧಲಿಂಗಯ್ಯ ಅವರ ಕಾವ್ಯದ ಭಿನ್ನ ಆಯಾಮಗಳು

ಡಾ ಉಮಾಶಂಕರ್ ಎಚ್ ಡಿ

## ಪ್ರವೇಶ

ಸಿದ್ಧಲಿಂಗಯ್ಯ ಅವರ ಕಾವ್ಯ ಕನ್ನಡ ಕಾವ್ಯಲೋಕದ ವಿಶಿಷ್ಟ ದನಿ. ಕನ್ನಡಕಾವ್ಯ ಪರಂಪರೆಯ ಕೊಂಡಿಗಳನ್ನು ಕಳಚಿ ಹೊಸ ತೊಡುಗೆ ತೊಡಿಸಿದ್ದು ಅವರ ಕಾವ್ಯದ ವಿಶೇಷ. ೭೦ರ ದಶಕದ ಚಳವಳಿಗಳ ನಂಟಿನಲ್ಲಿ ಬೆಸೆದುಕೊಂಡು ಬಂದ ಕಾರಣ ಇವುಗಳಿಗೊಂದು ಸಮುದಾಯಗಳ ತಳಸ್ಪರ್ಶಿ ಅನುಭವ ದಟ್ಟಣೆಯಿದೆ. ಸಿದ್ಧಲಿಂಗಯ್ಯನವರು ಸಮುದಾಯಗಳ ದನಿಯಾಗಿ ಅದರೆಲ್ಲ ಮಗ್ಗಲುಗಳನ್ನು ಕಾವ್ಯದ ಮೈಯಾಗಿಸಿದರು. ಈ ಹಿಂದೆ ಉಲ್ಲೇಖಿಸಿರುವಂತೆ 'ಪಟ್ಟ ಪಾಡೆಲ್ಲವನ್ನು ಹುಟ್ಟು ಹಾಡಾಗಿಸಿದ ಹುಟ್ಟು ಕವಿ ಬೇಂದ್ರೆಯಾದರೆ, ಕಂಡುಂಡ ಸಮುದಾಯದ ನೋವೆಲ್ಲವನ್ನು ಸಮುದಾಯದ ಪರ ಹಾಡಾಗಿಸಿದ ಸಮುದಾಯದ ಕವಿ ಡಾ. ಸಿದ್ಧಲಿಂಗಯ್ಯ ಅವರು'. ಇಂಥವರಿಂದ ಮೂಡಿದ ಕವಿತೆಗಳು ಹೊಲೆಮಾದಿಗರ ಹಾಡು ಸಂಕಲನದಿಂದ ಹಿಡಿದು ಇತ್ತೀಚೆಗೆ ಎಲ್ಲ ಕವಿತೆಯೊಳಗೂಡಿ ಸಮಗ್ರವಾಗಿ ಬಂದ 'ಬೋಧಿವೃಕ್ಷದ ಕೆಳಗೆ' ಸಂಕಲನದವರೆಗೆ ವಿಸ್ತಾರವಾಗಿ ಹರಡಿ ನಿಂತಿವೆ. ಕಾವ್ಯದ ಜಾಡನ್ನು ಬದಲಿಸಿದ, ಚಳವಳಿಗಳಿಗೆ ವೇಗವರ್ಧತೆಯನ್ನು ತಂದುಕೊಟ್ಟ, ಸಮಸಮಾಜದ ಕನಸನ್ನು ಕಂಡ, ಹೊಸ ಮೀಮಾಂಸೆಯ ಹುಡುಕಾಟಕ್ಕೆ ತೊಡಗಿಸಿದ ಇವರ ಕವಿತೆಗಳಿಗೆ ಕಾವ್ಯಲೋಕದಲ್ಲಿ ಎಂದೆಂದಿಗೂ ವಿಶಿಷ್ಟ ಸ್ಥಾನ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಬಹುಮುಖ್ಯ ಕವಿಗಳಲ್ಲಿ ಸಿದ್ಧಲಿಂಗಯ್ಯ ಅವರು ಗುರುತಿಸಿಕೊಂಡರೆ; ಅವರ ಕಾವ್ಯಗಳು ಕಾವ್ಯಲೋಕದ ನಡಿಗೆ ಬದಲಿಸಿದ ಹೊಸತನದ ನೆಲೆಯಲ್ಲಿಯೇ ಕಾಣಿಸಿಕೊಳ್ಳುತ್ತಿರುತ್ತವೆ.

## ಭಾಷೆ, ವಸ್ತು ಮತ್ತು ಆಶಯ

ನವ್ಯದ ಭಾಷಾಶೈಲಿಗಿಂತ ಭಿನ್ನವಾಗಿ ಸಿದ್ಧಲಿಂಗಯ್ಯ ಅವರ ಕಾವ್ಯದ ಭಾಷೆ ಬಂದಿದೆ. ಇಡೀ ಕಾವ್ಯದ ನಡಿಗೆಯನ್ನು ಗಮನಿಸಿದಾಗ ಇದು ತಿಳಿಯುತ್ತದೆ. ಓದಿದ ಮತ್ತು ಕೇಳಿಸಿಕೊಂಡ ತಕ್ಷಣ ಅರ್ಥವಾಗುವ, ಹಾಡಿದರೆ ಚಳವಳಿಗೆ ಪ್ರೇರಕ ಶಕ್ತಿಯಾಗಿ ಜೊತೆ ನಿಲ್ಲಬೇಕೆನ್ನುವ ತುಡಿತ ಉಂಟುಮಾಡುವಂತಹ ಭಾಷೆ ಅವರ ಕಾವ್ಯಗಳಲ್ಲಿದೆ. ಏಕ ಪ್ರಕಾರದ ಭಾಷಾ ಬಳಕೆಯಿಂದ ಅವರ ಕಾವ್ಯ ನಲುಗಿಲ್ಲ. ಬದಲಾಗಿ ಸಂವಾದಿಸುವ, ಸರಳವಾಗಿ ಹೇಳುವ, ಕರೆಕೊಡುವ, ಆವೇಶಭರಿತ ನೆಲೆಯಲ್ಲಿ ಪ್ರತಿರೋಧಿಸುವ, ಬೈಗುಳದ ಪರಿಭಾಷೆಯಲ್ಲಿ ಎಚ್ಚರಿಕೆ ನೀಡುವ, ವಾಚ್ಯದ ಮೂಲಕ ವಸ್ತುಸ್ಥಿತಿಯನ್ನು ಧ್ವನಿಸುವ ನೆಲೆ ಸಿದ್ಧಲಿಂಗಯ್ಯ ಅವರ ಕಾವ್ಯಕ್ಕೆ ಅಗಾಧವಾಗಿಯೇ ದಕ್ಕಿದೆ. ಇಷ್ಟೇ ಅಲ್ಲದೆ ಜನಪದ ತ್ರಿಪದಿ ಲಯಗಳಲ್ಲಿ, ವಾಚನದ ಪರಿಭಾಷೆಯಲ್ಲಿ, ನೋವು ಹೇಳುವ ಸಂಕಟದ ಭಾಷೆಯಲ್ಲಿ, ಧಿಕ್ಕರಿಸುವ ಪದಗಳಲ್ಲಿ, ಜನಪದ ಮಹಾಕಾವ್ಯಗಳ ನಿರೂಪಣಾ ಧಾಟಿಯಲ್ಲಿ, ಹಾಡು

ಡಾ. ಉಮಾಶಂಕರ ಎಚ್.ಡಿ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೆ. ಆರ್. ಪೇಟೆ, ಮಂಡ್ಯ ಜಿಲ್ಲೆ.

ISSN: 2348-7666

ISSN: 2348-7666; Vol.8, Issue-7(2), july, 2021

IMPACT FACTOR: 6.023

Monthly

# International Journal of Academic Research


## VOICE OF INTELLECTUALS

## PEER REVIEWED JOURNAL

Editor

Dr.Haniyuru Chandre Gowda

Associate Professor in Kannada, National Tribals & Folkloric Researcher,
Director & Head, Birsa Munda Tribals Community Development &
Research Center (BMTC-DRC), Bengaluru




Multidisciplinary, Multiple Languages
Refereed and Indexed Journal

Editor-in-Chief
Dr.T.V.Ramana

Volume 8, Issue-7(2), July, 2021

# International Journal of Academic Research

**Editor:**



**Dr.Haniyuru ChandreGowda**
Associate Professor in Kannada, National Tribals & Folkloric Researcher.
Director & Head, Birsa Munda Tribals Community Development & Research Centre(BMTC-DRC), Bengaluru, Karnataka, 9901609723

**IJAR-ACHIEVED PUBLICATION EXCELLENCE AWARD FOR OUTSTANDING CONTRIBUTION IN THE FIELD OF INTER-DISCIPLINARY RESEARCH**

**PUBLISHED BY:**
Likhitha Publications
Kakinada-533005 &
Vishakhapatnam-530017
AndhraPradesh-India
Website: www.ijar.org.in

**Office Address:**
Dr.T.V.Ramana,
4-105/1, Srinivasa Nagar,
Vakalapudi(p),
Kakinada-533005,
AndhraPradesh-India,
E-mail:drtvramana@yahoo.co.in

**Design By:**
Dr.Muddesh B.T & Prabhakara P

# EDITORIAL BOARD

Editor-In-Chief:
**Dr.T.V.Ramana**
Andhra University Campus, Kakinada-533005,
AndhraPradesh, India

## ADVISORY COUNCIL:

**Prof. M. Sundara Rao,** Chairman, Board of studies, Dept., of Economics, Andhra University, Vishakhapatnam

**Dr. P.SubbaRao,** Director(i/c), Centre for study of social inclusion and Exclusive Policy, Andhra University, Vishakhapatnam

**Prof.R.Sudarshana Rao,** Vice-Chancellor, Vikrama Simhapuri University, Nellore, Ap

**Prof.T.Ashok,** Special Officer, Adikavi Nannaya University, MNS Campus, Kakinada, Ap

**Prof.M.Chandraiah,** Vice-chancellor(i/c) & Chairman Of EC, Dr.B.R.Ambedkar University, Srikakulam

**Dr.V.Mahipal,** Executive Director(Social Welfare) & Chief Planning Officer(Rtd),Kakinada, AndhraPradesh

**Prof.B.Kuberudu,** Dept., Of Management studies, Andhra University, Vishakhapatnam

**Dr.K.Victor Babu,** Guest Faculty, Dept., Of Philosophy, Andhra University,Vishakhapatnam, Chief Editor of IJMER and Associate Editor Of IJAR

**Prof..J.V.K.V. Pandit,** Dept., of Political Science & Public adm., Andhra University Campus, Kakinada, AP

**Dr.Zoran Vu,** ISI, Rector, Gregory Nazianzen Orthodox Institute Universidad Rural de Guatemala, GT, USA

# EDITORIAL COUNCIL FROM ABROAD

**Prof.Roger wiemers,** Professor ofEducation, Lipscomb University, Nashville, USA

**Dr.A.Heidari,** Faculty of chemistry, California South University(CSU) Irvine, California, USA

**Dr.B.Ravindra Naik,** Dept., of sociology and social anthropology at arba minch university, Ethiopia

**Prof.Josef** HOCI-ITL, dept., of political economy university of Vienna, Vienna 7 Ex-member, Austrian Parliament, Austria

**Prof.Alexander chumakov,** chair of philosophy dept., Russian philosophical society, Russia

**Prof.Fidel Gutierrez vivanco,** founder and president Escuela de asesoria-Filosofica

**Prof.Igor Kondrshin,** Member of the Russian philosophical society, the Russian humanist society and expert of the UNESCO, Moscow, Russia

**Dr.Zoran Vu**,ISI, Rector, Gregory Nazianzen Orthodox Institute Universidad Rural de Guatemala, GT, USA

**Dr.Leo O.N.Edegoh,** Dept., of mass Communication, Chukwuemekaodumegwu Ojukwu University, Uli, Anambra State, Nigeria

**Dr.V.V.Ratnaji Rao Chowdhary,** Dept., of business 7 Economics, wollo university dessie, Ethiopia

**Dr.K.Chaitanya,** Dept., of Chemistry, Nanjing University of science and technology, China

**Dr.I.Ketutdonder,** Depasar state Institute of Hindu Dharma, Indonesia

**M.Ebrahimi,** Dept., of Industrial Engineering, Amirkabir University of Technology, 424 Hafez Avenue, 15916-34311, Tehran-Iran

# EDITORIAL COUNCIL FROM INDIA

**Prof. M. Sundara Rao,** Chairman, Board of studies, Dept., of Economics, Andhra University, Vishakhapatnam

**Prof..J.V.K.V. Pandit,** Dept., of Political Science & Public adm., Andhra University Campus, Kakinada, AP

**Prof.P.Dakshina Murthy,** Prof., in physics, university college of engineering, jawaharalal Nehru technological university, Kakinada, AP

**Prof.T.Ashok,** Special Officer, Adikavi Nannaya University, MNS Campus, Kakinada, Ap

**Prof.D.Sathyanarayana,** BVC Institute of technology & Science, Amalapuram, AP

**Dr.B.Naga Padmavathy,** Dept., of history, SKSD MahilaKakalasala Tunuku, west gdavari-district, Ap

**Dr.Sudhanshu Ranjan mohapatra,** Centre for juridical studies, Dibrugarh University, Dibrugarh, assam

**Santanu kumar Das,** dept., of business administration, Kalam Institute of technology, Behrampur, odisha

**Dr.R.H.Pavithra,** Dept., of Economics, Karnataka state open university, Mysuru, Karnataka

**Dr.Haniyuru ChandreGowda,** Associate Professor in Kannada, National Tribals & Folkloric Researcher.
Director & Head, Birsa Munda Tribals Community Development & Research Centre(BMTC-DRC), Bengaluru, Karnataka, 9901609723
**Dr.Vidya H.N,** Dept., of History, Govt., Arts College, Hassan, Karnataka
**Dr.C.Jaya SubbaReddy,** Dept., Of Mathematics, SVU College of Sciences, Tirupati, AP
**Dr.K.John Babu,** Dept., Of Journalism & Mass communication, Central University Of Kashmir, Kashmir
**Dr.J.Ratna Prabhakar,** Dept., Of commerce, Govt., city college,(Aff.) smania University, Hyderabad
**Dr.A.Srinivas,** Rajiv Gandhi Institute of Law college & Dept., of humanities, JNTUK
**Dr.Kompella Venkataramana,** Dept., of computer science and systems engineering, Ap
**Dr.K.V.RamanaMurthy,** Dept., of Management studies, Andhra university campus, Kakinada
**Dr.P.V.SubbaRa,** Dr.C.S.Rao PG Centre, Dept., of political science, Sri.Y.N.college, Narsapur, west Godavari, AP
**Dr.V.V.S. Ramakrishna,** Dept., of economics, Andhra University campus, Kakinada, Ap
**Dr.D.tirupathaiah,** Dept., of economics, SKRBR college, NarasaRao pet, Guntur-District, AP
**Dr.E.Ashok kumar,** Dept., of education, North-Eastern Hill University, Shillong
**Dr.R.Dhanuja,** PSG college of arts & science, Coimbatore
**Dr.Bipasha Sinha,** SS Jalan Girls College, University of Calcutta, Kolkotha
**Prof., S.Mahendra Dev,** Vie-chancellor, Indira Gandhi Institute of Development Research. Mumbai
**Dr.D.K.Prabhakar,** Dept., of Telugu, Jnanabharathi Campus, Bangalore University, Bengaluru
**Prof.,(Dr.) Sohan Raj Tater,** Former Vice-chancellor, Singhania University, Rajasthan
**Dr.B.T.Muddesh,**
Director,
Sri Siddhartha Centre for Media studies, Tumakuru

**Editor-in-chief, IJAR-Vol.8, issue 7(2), July,2021**

**Typeset and Printed(sucharitha publications) in India:**

IJAR, Concentrates on critical and creative research in multidisciplinary and multiple languages academic Research. This journal seeks to promote original research and cultivate a fruitful dialogue between old and modern thought. Views expressed in the articles is exclusively of the authors, thus, journal is not responsible of it in any case.

**Visit:www.ijar.org.in**

**E-mail:drtvramana@yahoo.co.in**

**July,2021**

# Content


Volume 8 | Issue 7(2) | July 2021



| Sl. No | | Page No. |
|---|---|---|
| 1 | ಕನ್ನಡ ಗದ್ಯಶಾಸನಗಳ ಸಾಹಿತ್ಯಕ ಅಧ್ಯಯನ –ಡಾ.ಜಯರಾಮಯ್ಯ ವಿ. | 1 |
| 2 | E-Governance Initiatives In Karnataka State: A Summary -Madhusudhan .G | 9 |
| 3 | ಸ್ತ್ರೀ ಸಮಾಜದ ಉದ್ಧಾರಕ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ –ಡಾ. ಹೆಚ್.ವಿ.ಶಾಂತರಾಜು | 17 |
| 4 | Conceptualizing the Myth of Ekalavya -Dr.Narasimharaju K. | 20 |
| 5 | ಕನಕದಾಸರಲ್ಲಿ 'ವಾಲ್ಮೀಕಿ ರಾಮಾಯಣ'ದ ಮರುನಿರೂಪಣೆ: ಪುರಾಣ–ವರ್ತಮಾನಗಳ ಮುಖಾಮುಖಿ –ಡಾ.ನಿಂಗಪ್ಪ ಮುದೇನೂರು | 31 |
| 6 | India's Falling Co2 Emissions – Is It A Flash In The Pan? -Narayana Das | 36 |
| 7 | ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆ ವಿನ್ಯಾಸಗಳು –ಡಾ.ಮಹಾಂತೇಶ ಪಾಟೀಲ | 45 |
| 8 | Relationship Between India And China (1952 -2017): A Critical Analysis -Amar .S | 51 |
| 9 | ಹಳಗನ್ನಡ ಕಾವ್ಯ ಸ್ವರೂಪ –ಡಾ.ಜೋಗಿನಕಟ್ಟೆ ಮಂಜುನಾಥ | 57 |
| 10 | Employment Guarantee Program: Gender Related Review -Dr.Bheemesh Machanur | 61 |
| 11 | ಬಹುಮುಖಿ ಉತ್ಪನ್ನ ವಚನ ಚಳುವಳಿ: ಒಂದು ಅವಲೋಕನ –ಮಲ್ಲಿಕಾರ್ಜುನ ಎಚ್.ಎಂ & –ಡಾ.ಬಿ ಪ್ರಭುಸ್ವಾಮಿ | 66 |
| 12 | Gandhi In Indian Fiction With Reference To Mulkraj Anand -K.M. Jayanthi | 78 |
| 13 | ಡಾ.ಸಿದ್ದಲಿಂಗಯ್ಯ ಅವರ ಹೋರಾಟದ ಹಾಡುಗಳು –ಲೋಹಿತ್.ಪಿ | 84 |
| 14 | The Ekalavya Theme in The Mahabharata and Early Retellings of Ekalavya in Indian Literatures -Dr.Narasimharaju K. | 89 |
| 15 | ವೈದೇಹಿಯ ಗೌರಿ (ಸ್ತ್ರೀ ವಿಶಿಷ್ಟ ಅಭಿವ್ಯಕ್ತಿಯ 'ಶಿವನ ಮೀಸುವ ಹಾಡು' ಕಾವ್ಯ ವಿಶ್ಲೇಷಣೆ) –ಎಂ.ಎನ್.ಅರ್ಚನ ತೇಜಸ್ವಿ | 110 |

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

**ಸ್ವಸ್ತಿಶ್ರೀ ಅಪ್ಪೋರಯ್ಯ ದಿವಕ್ಕುಱಪದಿರ್ಕ್ಕಣ್ಣುಗ**
**ನ್ನಾಳನ ಬಿಸುದೊಪುಇಗ್ಜೆ ಮಾಪಾತಗ ಮಕ್ಕುಂ**
**ನಲ್ವತ್ಥವಿ. . . . ದ ಮರಮಸುಕೆಯೆ**
**ಇ ಉರಾ ಸುಕನ್ದೇವತು**

ಇಲ್ಲಿ ಅಂತಹ ಸಾಹಿತ್ಯಕ ಅಂಶಗಳೇನು ಕಾಣುತ್ತಿಲ್ಲ. ನೂರಕ್ಕೆ ತೊಂಬತ್ತರಷ್ಟು ಕನ್ನಡ ಪದಗಳಿದ್ದರೂ ಇಲ್ಲಿ ಹ್ರಸ್ವ, ದೀರ್ಘ, ಒತ್ತು ಮತ್ತು ಸಂಧಿ ದೋಷಗಳು ತುಂಬಿ ನಿಂತಿವೆ. ಲಿಪಿಯೊಂದಿಗೆ ಭಾಷೆ ಹೊಂದಿಕೊಳ್ಳಲು ಹೆಣಗುತ್ತಿರುವುದರ ದ್ಯೋತಕವೆಂಬಂತೆ ಬರವಣಿಗೆಯ ತುಂಬೆಲ್ಲ ತೊದಲು ತೊದಲು ಮಾತನಾಡಲು ಕಲಿತ ಮಗು ಅದನ್ನು ಹೊಸದಾಗಿ ಲಿಪಿಗಿಳಿಸುವಲ್ಲಿ ಎಡವುತ್ತಿರುವ ರೀತಿಯಂತಿದೆ. ಒಟ್ಟಾರೆ ಹಲ್ಮಿಡಿ ಶಾಸನದಷ್ಟು ಸ್ಪಷ್ಟವಾಗಿಲ್ಲ.' ಎಂದು ಎಂ.ಬಿ.ನೇಗಿನಹಾಳ ಅವರು ಸರಿಯಾಗಿಯೇ ಗುರ್ತಿಸಿದ್ದಾರೆ.[೨]

ಕ್ರಿ.ಶ.೫೭೮ರ ಮಂಗಳೇಶನ ಶಾಸನವು ಬಾದಾಮಿ ಚಾಲುಕ್ಯರ ಪ್ರಾಚೀನ ಶಾಸನವಾಗಿದ್ದು, ಭಾಷೆ ತಕ್ಕಮಟ್ಟಿಗೆ ಲಿಪಿಯೊಂದಿಗೆ ಪಳಗಿದ ರೀತಿಯನ್ನು ವಾಕ್ಯದ ತೊಡಕು ಬಿಡಿಸಿಕೊಂಡಿರುವ ಪ್ರಗತಿಯನ್ನು ಸಂಸ್ಕೃತದೊಂದಿಗೆ ಸಾಧಿಸಿದ ಮೈತ್ರಿಯನ್ನು ಕಾಣಬಹುದು. ಶಾಸನದ ಪಾಠ ಈ ರೀತಿಯಿದೆ.

**ಸ್ವಸ್ತಿ ಶ್ರೀಮತ್ ಪೃಥಿವೀ ವಲ್ಲಭ ಮಂಗಲೀಸನಾ**
**ಕಲ್ಮನೆಗೆ ಇತ್ತೊದು ಲಂಜಿಗೇಸರಂ ದೇವರ್ಕ್ಕೆ**
**ಪೂನಿಱುವ**
**ಮಾಲಕಾರನ್ಗೆ ಅರ್ದ್ಧವಿಸದಿ ಇತ್ತೊದಾನ ಟಿವೋನ್**
**ಪಞ್ಚ ಮಹಾ ಪಾತಕನಕ್ಕುಂ ಏಟನೆಯಾ ನರಕದಾ**
**ಪುಟುಅಕುಮ್[೩]**

ಈ ಶಾಸನದಲ್ಲಿ ಮಂಗಳೇಶ ನಿರ್ಮಿಸಿದ ಗುಹಾಂತರ ದೇವಾಲಯವನ್ನು 'ಕಲ್ಮನೆ' (ಕಲ್ಲಿನ+ಮನೆ) ಎಂದು ವರ್ಣಿಸಲಾಗಿದೆ. ಈ ದೇವಾಲಯಕ್ಕೆ ಈಗಿನ ನಂದಿಕೇಶ್ವರ ಗ್ರಾಮವನ್ನು ಮತ್ತು ದೇವಾಲಯಕ್ಕೆ ಹೂವನ್ನು ಒದಗಿಸುವವನಿಗೆ ನಂದಿಕೇಶ್ವರ ಗ್ರಾಮದಿಂದ ದೊರೆಯುವ ಅರ್ಧವಿಸದಿ ತೆರಿಗೆಯನ್ನು ದಾನ ಮಾಡಿದ ವಿವರಗಳಿವೆ.

೬ನೇ ಶತಮಾನಕ್ಕೆ ಸೇರಿದ ಕೊಪ್ಪಳದ ಶಾಸನವೊಂದರಲ್ಲಿ 'ಆಪ್ಪರಸನ್' ಎಂದು ದೀರ್ಘಸ್ವರಕ್ಕೆ ಪದದಲ್ಲಿರುವ ಸಜಾತೀಯ ದ್ವಿತ್ವವೊಂದು ಇಲ್ಲಿ ಗಮನಾರ್ಹವಾಗಿದೆ. ಇಂಥ ದ್ವಿತ್ವಗಳು 'ಪೆರಿ' ಎಂಬ ಗುಣವಚನರೂಪ ಪುರಾತನ ಕನ್ನಡದ ಇನ್ನೊಂದು ಮಾದರಿ. 'ತರಗೆಯಾ ಪೆರ್ಗ್ಗಱ' 'ಕೆಱಗು' ಎಂದು ಷಷ್ಠಿಯ ಹ್ರಸ್ವ-ದೀರ್ಘಗಳೆರಡೂ ಈ ಶಾಸನದಲ್ಲಿವೆ. ಜೊಗೆತೆಕೊಟ್ಟಂ, ಕೊಟ್ಟೊಂ ಎಂಬ ಎರಡೂ ಕ್ರಿಯಾಪದರೂಪಗಳಿವೆ. 'ಕಿಱುಕೂಡಲೂರ' ಎಂಬಲ್ಲಿ ಹಿಂದೆ ಹೇಳಿದ ದ್ವಿತ್ವಸಂಧಿ ಆಗಿಲ್ಲ.

೭ನೇ ಶತಮಾನದ ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಕಾಲದ ಗದ್ದೆಮನೆ ಶಾಸನ[೪] 'ಪೆಟ್ಟಣಿ' ಎಂಬುವವನು ರಣರಂಗದಲ್ಲಿ ಮಹೇಂದ್ರನನ್ನು ಭಯಗೊಳಿಸುವಂತಹ ಶೂರನಾಗಿದ್ದನೆಂದು, ಅವನ ಶೌರ್ಯ ಸಾಹಸವನ್ನು ಸೊಗಸಾಗಿ ವರ್ಣಿಸಲಾಗಿದೆ. ಆ ವೀರಗಲ್ಲಿನ ಶಾಸನ ಪಾಠ ಈ ರೀತಿಯಿದೆ.

**ಸ್ವಸ್ತಿಶ್ರೀ ಶಿಲಆದಿತ್ಯನ್ ದಿಶಾಪ್ಭರ್ಗ್ಗನ್ ಆಕೆವಾಳಾನ್**
**ಅಗ್ಗಳಕಣ್ಣಕನ್**
**ಪೇರಾಟಿಕ್ಕಿವರೆ ಪೆಟ್ಟಣಿ ಸತ್ಯಾಜ್ಞನಟ್ಟಳ್ವ ಭಟನ್**
**ಬೆದರೆ**
**ಮಹೇನ್ದ್ರನ್ ಬೇಡರ ರಾಯರ ಮಲಪ್ಪರ**
**ಕಾಳೆಗದುಳೆವಿಱಿವದು**
**ಸ್ವರ್ಗ್ಗಾಲಯಕ್ಕೇಱಿದನ್**

ಗಂಗರ ಶ್ರೀ ವಿಕ್ರಮನ ಒಂದು ತಾಮ್ರ ಶಾಸನದಲ್ಲಿ[೫] ಶ್ರೀ ವಿಕ್ರಮನ ನಂತರ ಅವನ ಮಗ ಒಂದನೇ ಶಿವಮಾರ ಕುಲಗಾಣ ತಾಮ್ರಪಟದಲ್ಲಿ ಕೆಲವು ಸಾಲುಗಳಲ್ಲಿ ಕನ್ನಡ ಬರಹವಿದ್ದು ಈ ಶಾಸನದಲ್ಲಿ ಉತ್ತಮ ಗದ್ಯ ಸಾಹಿತ್ಯವಿದೆ.

ಕೆಱೆಕಾಲು, ಕಗ್ಗುಱಲಪ್ಪೊಲತ್ತಟು, ಮನೆತನ, ಅನುಮತಪ್ಪಡಿಸಿ ಮುಂತಾದ ಪದಗಳಲ್ಲಿ ದ್ವಿತ್ವಸಂಧಿ ಪ್ರಯೋಗವಾಗಿರುವುದನ್ನು ಕಾಣಬಹುದು. ಕೋಟ್ಟೆ ಎಂಬ ಶಬ್ದರೂಪ, ಚನ್ದ್ರಸೇನಾಚಾರ್ಯ್ಯರ್ಕ್ಕೆ ಎಂಬ ವಿಶಿಷ್ಟ ಚತುರ್ಥಿ, ಕೋಲಿಗನ್ಕೆಱೆಕ್ಕಾಲು ಎಂಬಲ್ಲಿ ಷಷ್ಠಿ, ನಾಲ್ಗು (ನಾಲ್ಕು) ಎಂಬ ಸಂಖ್ಯಾರೂಪ, ಪೊಯ್ದಾರ್ ಎಂಬ ಕ್ರಿಯಾಪದ ಮುಂತಾದ ಹಲವಾರು ಅಪೂರ್ವ ಪ್ರಯೋಗಗಳಾಗಿವೆ. ಇಷ್ಟು ಪ್ರಮಾಣದಲ್ಲಿ ಪುರಾತನ ಕನ್ನಡದ ವೈಶಿಷ್ಟ್ಯಗಳು ಬೇರೆ ಯಾವ ಶಾಸನದಲ್ಲೂ ಕಾಣಲು ಸಾಧ್ಯವಿಲ್ಲ.

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

ಅಲ್ಲದೆ ಇದು ತಾಮ್ರ ಶಾಸನವೆಂಬುದನ್ನು ಇಲ್ಲಿ ನೆನೆಯಬೇಕು. ಎಂದರೆ ಅಂದು ಪಂಡಿತ ವರ್ಗದಲ್ಲಿ ರೂಢಿಯಲ್ಲಿದ್ದ ಸಾಹಿತ್ಯಕ ಗದ್ಯವನ್ನು ಈ ಶಾಸನ ಪ್ರತಿನಿಧಿಸುತ್ತದೆಂದು ಊಹಿಸಬಹುದು ಎಂದು ಡಾ||ಎಂ.ಬಿ.ನೇಗಿನಹಾಳ ಅವರು ಸರಿಯಾಗಿಯೇ ಗುರ್ತಿಸಿದ್ದಾರೆ.[೬]

೭ನೇ ಶತಮಾನದ ಆಳುಪದೊರೆ ರಣಸಾಗರನ ಕಾಲದ ಎರಡು ವೀರಗಲ್ಲು ಶಾಸನಗಳು ಚಿಕ್ಕದಾಗಿದ್ದರೂ ಸುಂದರವಾಗಿವೆ. ಮೊದಲನೆಯ ಶಾಸನದಲ್ಲಿ ಚಿತ್ರವಾಹನ ಎಂಬ ವೀರನನ್ನು 'ಕಾಳಗ ಕೇಸರಿ ಕರಿರಿಪು ವಿಕ್ರಮನ್' ಎಂದು ವರ್ಣಿಸುತ್ತಾ ಅರಿ ಚಕ್ರವ್ಯೂಹವನ್ನು ಒಡೆದನೆಂದು ಹೇಳುವುದು ಮಹಾಭಾರತದ ಅಭಿಮನ್ಯುವನ್ನು ನೆನಪಿಗೆ ತರುತ್ತದೆ. ಎರಡನೇ ಶಾಸನವು ಭಾವ ಮತ್ತು ಭಾಷೆಯಲ್ಲಿ ಮೊದಲಿನ ಶಾಸನವನ್ನೇ ಹೋಲುತ್ತದೆ. ಕಾಮಕೋಡನ ತಂದೆಯ ಹೆಸರೇ ಪ್ರಹಾರಭೂಷಣ 'ನಮ್ಮ ವ್ರಾನ್ಗೆ ಓವದೊರಾ ನಾಲಗಿಯನ್ ಕೀಟಿಶ್ವಾನ್' ಎಂದಿರುವುದು ಕಾಮಕೋಡನು ಛಲದಂಕಮಲ್ಲನೆಂಬುದನ್ನು ಸೂಚಿಸುತ್ತದೆ.[೭]

ಕ್ರಿ.ಶ.೮೦೦ರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಮಾವಳಿ ಶಾಸನವು ಒಂದು ಮಹತ್ವದ ವೀರಗಲ್ಲಾಗಿದ್ದು ಆಳುಪರ ಚಿತ್ರವಾಹನ ಮತ್ತು ಕೊಲ್ಲಿ ಪಲ್ಲವ ನೊಳಂಬರ ನಡುವೆ ನಡೆದ ಘರ್ಷಣೆಯಲ್ಲಿ ಚಿತ್ರವಾಹನನ ಪಕ್ಷದ ಕುಲಮುದ್ದನೆಂಬ ಕಲಿಯು ಶೌರ್ಯದಿಂದ ಹೋರಾಡಿ ಗೆದ್ದು, ಯುದ್ಧದಲ್ಲಿಯೇ ವೀರ ಮರಣವನ್ನು ಪಡೆದ ' ಸಂದರ್ಭವು ಒಂದು ಘಟನೆಯ ವರದಿಯಾಗಿರದೆ, ಸಾಹಿತ್ಯದ ದೃಷ್ಟಿಯಿಂದ ಮನೋಜ್ಞವಾದ ವರ್ಣನಾಂಶವನ್ನು ಒಳಗೊಂಡಿರುವುದು ಗಮನಾರ್ಹವಾಗಿದೆ.

**ಶಾಸನ ಪಾಠ ಈ ರೀತಿಯಿದೆ**

ಸ್ವಸ್ತಿ ಪ್ರಭೂತವರ್ಷ ಶ್ರೀ ಪೃಥಿವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರಾ ಭಟ್ಟಾರಕ ಶ್ರೀ ಗೊವಿನ್ದರಸರ್ಚ್ಚತುಸ್ಸಮುದ್ರಾನ್ತ ವಸುಧೆಯಾ ಧವಳೈಕ ಛತ್ರಛಾಯೆ ಇನ್ದಾಳೆ ಬನವಾಸಿ ಮಣ್ಡಲ ಮಾನಾ ಸಮುದ್ರಾನ್ತ ರಾಜಾದಿತ್ಯರಾಸರ್ ಆಳೆ ಆಳುವ ಖೇಡ ಮಱುಸಾಸಿರನುಮಾನ್ ಚಿತ್ರವಾಹನ ನಾಳುತ್ತುಂ ಬಾಯ್ಕೇಳ ದಿರೆ ಮುನಿದು ಕೊಲ್ಲಿ ಪಲ್ಲವ ನೊಟಿಮ್ಬಂನ್ನೊಟಿಮ್ಬರಾದಿತ್ಯ ನನ್ವೆಸಸಲಾಕಾಕ ರಾಸರುಮೆಟ್ಟಿ ಪೆರ್ಗ್ಗಂಜಿಯ ಕೋಟೆಯಾನ್ ರೋಹಿಸಿ ಬಿಟ್ಟು ಎರಡುಮ್ಬಲದ ವೀರಭಟ್ಟರ್ಕಳೊಟ್ಟಿ ಪೊರಮಟ್ಟು ಬಿಲ್ವಲ್ಲಕ್ಕುದುರೆ ಕುದುರೆಯೊಳ್ಕಿಟ್ಟಿ ಅತಿತುಮುಲ ಕಾಗಳ ಪೆಮ್ಬಿಬಲದ ಕೆಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ದು ಕಾದಿಸೆ ಕಣ್ಡು ಕುಲಮುದ್ಧ ನೀನೀ ಕಯ್ಯಪೊಕ್ಕು ಕಾದೆನ್ದು ಬೆಸಸೆ ಪ್ರಸಾದ ಮೆನ್ದಯ್ದಿ ಕಿಟ್ಟಿಕಾದಿ ಮಱುವಕ್ಕದವರ ಮೆಮ್ಮೆಯ್ಯಯ್ಮೆಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತುಂ ಎಯ್ದೊದೊದಪ್ಪದ ಪೊಲ್ಕಣಿ ಪಂಜರದೊಳಗೆ ಱಗಿ ಭೀಷ್ಮನ್ವಿಟ್ಟನ್ತೆ ನೆಲಮುಟ್ಟದೆ ಬಿಟ್ದನಾನ್ದೇವ ಗಣಿಕ್ಕೆಯರಾರ್ಗ್ಗಂಮ್ಬಿಡಿದು ಬನ್ದಿದಿರ್ಗ್ಗೊಣ್ಡುಯೆ ವೀರಲೋಕಕ್ಕೆ ಸನ್ದೋನ್[೮]

ಕಾಲಕ್ರಮದಲ್ಲಿ ಭಾಷೆಗೆ ಭಾವಾಭಿವ್ಯಕ್ತಿಯ ಕಸುವು ಮೈಗೂಡಿ ಕೊಳ್ಳುತ್ತಿರುವುದು ಈ ಶಾಸನದದಿಂದ ವ್ಯಕ್ತವಾಗುತ್ತದೆ. ಇಲ್ಲಿ ನಾಟಕೀಯತೆ, ವರ್ಣನೆ, ದೃಷ್ಟಾಂತ, ದೃಶ್ಯಕಲ್ಪನೆ ಕೆಲವು ಸಾಹಿತ್ಯಕವಾದ ಅಂಶಗಳನ್ನು ಕಾಣಬಹುದು. ಹಲವಾರು ಘಟನೆಗಳನ್ನು ಸರಪಳಿಯೊಂದರ ಕೊಂಡಿಗಳನ್ನು ಜೋಡಿಸಿದಂತೆ ಇರುವ ಹಲವಾರು ಕ್ರಿಯಾಪದಗಳಿವೆ. ಗದ್ಯದ ನಡಿಗೆ ಅಥವಾ ಬಂಧದ ದೃಷ್ಟಿಯಿಂದ ಈ ಅಂಶ ಗಮನಿಸ ತಕ್ಕುದಾಗಿದೆ. ಕುಲಮುದ್ದನು ಬಾಣಗಳು ನಟ್ಟವನಾಗಿ ಕೆಳಗುರುಳುವಾಗ 'ಕಣಿಹಂದಿಯಂತೆ' 'ಕಣಿಪಂಜರ ದೊಳರಗಿ ಭೀಷ್ಮನ್ ವಿಳ್ದನ್ತೆ ನೆಲಮುಟ್ಟದೆ' ಎಂಬಲ್ಲಿ ಉಪಮೆ ಬಂದಿರುವುದನ್ನು ಕಾಣಬಹುದು.

ಕ್ರಿ.ಶ.೮ನೇ ಶತಮಾನದ ವಿಕ್ರಮಾದಿತ್ಯನ ಕಂಚಿಯ ಶಾಸನ ಈ ರೀತಿಯಿದೆ:

ಸ್ವಸ್ತಿ ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀ
ಪೃಥುವಿ ವಲ್ಲಭ ಮಹಾರಾಜಾದಿ ರಾಜ
ಪರಮೇಶ್ವರ ಭಟಾರರ್ ಕ
ಞ್ಚಿಯಾನ್ಕೊಣ್ಡು ರಾಜಸಿಂಘೇಶ್ವರದ
ಧನ ಮಾನ್ಕಣ್ಡು ಮಗುೞ್ದೇವ
ರ್ಗ್ಗೆ ಬಿಟ್ಟಾರ್ ಇನ್ತು ಭಟರರಾ
ಧರ್ಮದ ಸ್ಥಿತಿಯುಂ ಈ ಯಕ್ಷರಂಗಳು
ಮಾನಟಿಶ್ವಾರೀಯೂರಾ ಘಟಿಗೆಯಾಮಹಾ
ಜನಮಾನ್ಕೊನ್ದಾರ ಲೋಕಕ್ಕೆ ಸನ್ದಾರಪ್ಪಾರ್

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

**ನಿರವದ್ಯ ಶ್ರೀಮದನಿವಾರಿತ ಪುಣ್ಯವಲ್ಲಭೇ ನ ಲಿಖಿತಂ ಮಿದಂ ವಲ್ಲಭದುರ್ಜ್ಜಯರಧಿಕಾರದಿಂ**

ಪಲ್ಲವ ರಾಜರ ಹೃದಯವಾದ ಕಂಚಿಯ ರಾಜಸಿಂಹೇಶ್ವರ ದೇವಾಲಯದಲ್ಲಿ ಚಿರಸ್ಥಾಯಿಯಾಗಿ ನಿಂತಿರುವ ಈ ಶಾಸನವು ಕನ್ನಡ ಕುಲಕ್ಕೆ ಸಹಜವಾದ ಛಲ ಮತ್ತು ತ್ಯಾಗಗಳ ಜೀವಂತ ಪ್ರತೀಕವಾಗಿವೆ. ಶಾಸನ ಚಿಕ್ಕದಾದರೂ ಚೊಕ್ಕವಾದ ಭಾವ ಮತ್ತು ಭಾಷೆಗಳನ್ನು ಇದು ತುಂಬಿಕೊಂಡಿದೆ.

ಕ್ರಿ.ಶ.೮೬೬ರ ಶಿರೂರು ಶಾಸನವು[೧೦] ಉತ್ತಮ ಸಾಹಿತ್ಯ ಗುಣವುಳ್ಳ ಗದ್ಯಶಾಸನವಾಗಿದ್ದು ಸಂಸ್ಕೃತ ಶಾಸನಗಳಲ್ಲಿ ಬರೆಯಲಾಗುತ್ತಿದ್ದ ಸುದೀರ್ಘ ಬಿರುದುಗಳ ಮಾಲೆ ಈಗ ಕನ್ನಡ ಶಾಸನದಲ್ಲಿ ಕಾಲೂರಿ ನಿಂತುದಕ್ಕೆ ಇದು ನಿದರ್ಶನವಾಗಿದೆ. ನಿರಾಡಂಬರವಾಗಿ ಬರುತ್ತಿದ್ದ ಅರಸನ ಹೆಸರುಳ್ಳ ಹಿಂದೆ ಈಗ ಸಾಲಂಕೃತ ಪ್ರಶಸ್ತಿ ಗದ್ಯವನ್ನು ಜೋಡಿಸಿ ಶಾಸನಕ್ಕೆ ಆಕರ್ಷಣೀಯ ಆರಂಭವನ್ನು ಒದಗಿಸಿದ ಪರಂಪರೆಯೊಂದು ಈ ಕಾಲದಲ್ಲಿ ಪ್ರಾರಂಭವಾಯಿತು.

ಇದಕ್ಕೆ ನಿದರ್ಶನವಾಗಿ ಶಿರೂರು ಶಾಸನದ ಪಾಠ ಈ ರೀತಿಯಿದೆ 'ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕ ಚತುರ್ಥಿ ವಲಯ ವಲಯುತ ಸಕಲಧರಾತಳ ಪ್ರಾತರಾಜ್ಯಾನೇಕ ಮಂಡಳಿಕರ್ಕ್ಕಳಾ ಕಟಕ ಕಟೀಸೂತ್ರ ಕುಂಡಲ ಕೇಯೂರ ಹಾರಾಭರಣಾಳಂಕೃತ ಗಣಿಕಾ ಸಹಸ್ರ ಚಾಮರಾಂಧಕಾರ ವಾದಿಯ್ಯವೀಯ್ಕಳಮಾನ ಶ್ವೇತಾ ಪತ್ರತ್ರಯ ಕಳಹ ಶ\ಂಖ ಪಾಳಿಧ್ವಜೋರು ಕೇತು ಪತಾಕಾಚ್ಛಾದಿತ ದಿಗಂತೆಲ್ಲ ಸೃಷ್ಟಿ ಸೇನಾಪತಿ ಪುರವರ್ಗ್ಗ ತಳವರ್ಗ್ಗ ದಂಡನಾಯಕ ಸಾಮಂತಾದ್ಯನೇಕ ವಿಷಯ ವಿನಾಮ್ನೋತುಂಗ ಕಿರೀಟ ಮಕುಟ ಘೃಷ್ಟ ಪಾದಾರವಿಂದ ಯುಗ್ಮ ನಿರ್ಜಿತ ವೈರಿ ರಿಪುನಿವಹ ಕಾಲದಂಡ ದೃಪ್ತಮದ ಭಂಜನನ ಮೇಘರಾಯಂ ಪರಚಕ್ರ ಪಂಚಾನನಂ ಸುರಾಸುರ ಮರ್ಧನಂ ವೈರಿ ಭಯಂಕರಂ ಬದ್ಧ ಮನೋಹರಂ ಅಭಿಮಾನ ಮಂದಿರಂ ರಟ್ಟವಂಶೋದ್ಭವಂ ಗರುಡಲಾಂಛನಂ ತಿವಳಿ ಪರೆ ಘೋಷಣಂ ಲತ್ತಲೂರ ಪುರು... ಸಲ್ಲುತ್ತಿದೆ'

ಕ್ರಿ.ಶ.೮೭೨ರ ಶಿಶುವಿನಹಳ್ಳಿ ಶಾಸನದಲ್ಲಿ ಹಿಂದಿನ ಕನ್ನಡ ಶಾಸನಗಳಲ್ಲಿ ಕಂಡು ಬರದ ಚಕ್ರವರ್ತಿ, ಸಾಮಂತರ ವಿಸ್ತಾರ ಗುಣಕರ್ತನ, ಮಹಾಜನರ ವ್ಯಕ್ತಿತ್ವ, ಪಾಂಡಿತ್ಯ ಪ್ರತಿಭೆ ಮತ್ತು ಅಂತ್ಯ ಫಲಶ್ರುತಿ ಗದ್ಯ ಇವುಗಳಿಂದಾಗಿ ಈ ಶಾಸನಕ್ಕೆ ಒಂದು ಕ್ರಮ–ಅಚ್ಚುಕಟ್ಟುತನ ಸಂದಿದೆ. ಈ ನಿರ್ದಿಷ್ಟ ಚೌಕಟ್ಟು ಮುಂದಿನ ಶಾಸನಗಳಿಗೆ ಒಂದು ಮಾದರಿಯಾಯಿತೆಂದು ಹೇಳಬಹುದು.

೯ನೇ ಶತಮಾನಕ್ಕೆ ಸೇರಿದ ಕೋಲಾರದ ಅರಳಕೋಟೆ ಶಾಸನವು[೧೧] ಒಂದು ಉತ್ತಮ ಗದ್ಯ ಶಾಸನವಾಗಿದ್ದು ವೀರನೊಬ್ಬನು ತನ್ನ ಸೈನ್ಯವೆಲ್ಲ ಸೋತು ಹೋದರೂ ಧೈರ್ಯಗುಂದದೆ ಹೋರಾಡಿ ಶತ್ರುಗಳನ್ನು ಓಡಿಸಿದುದು ಅಸಾಮಾನ್ಯ ಪರಾಕ್ರಮವಾಗಿದೆ. ಆದ್ದರಿಂದ ಈತನನ್ನು 'ವೀರಮಹಾಮೇರು' ಎಂಬ ಬಿರುದಿನಿಂದ ಕರೆಯಲಾಗಿದೆ. ಅಷ್ಟೇ ಅಲ್ಲದೆ 'ಅಣಿಚೆಲ್ವನ್ ಅಣುಮಪರಾಕ್ರಮ ಪೊಕ್ಕಿವಿಪೊರ ದೊಗರಾಜನ್' ಎಂಬ ಬಿರುದುಗಳ ಸರಮಾಲೆಗಳೇ ಇವೆ. ಈತನನ್ನು 'ಬೆಟ್ಟನದಿರೆ' ಎಂದು ಕರೆಯುವಲ್ಲಿ ಉತ್ಪ್ರೇಕ್ಷೆಯನ್ನು ಕಾಣಬಹುದು.

ಕ್ರಿ.ಶ.೯೫೦ರ ಆತಕೂರು ಶಾಸನದಲ್ಲಿ[೧೨] ಬೂತುಗನ ಮೀಸಲು ಯೋಧನಾದ ಮಣಲೆರನ ವರ್ಣನೆ ಈ ರೀತಿಯಿದೆ. 'ಸಕಲ ಲೋಕದ ಸಂಕಟವನ್ನು ಪರಿಹರಿಸುವ ಪ್ರಭಾವದಿಂದ ಅವತರಿಸಿದ ದೇವಗಂಗೆಯ ಪ್ರವಾಹಕ್ಕೆ ಕಾರಣವಾದ ಉದಾರ ಸಗರ ವಂಶವಲ್ಲಭೀ ಪುರವರೇಶ್ವರನು, ಉದಾರ ಭಗೀರಥ, ಸಗರ ತ್ರಿಣೇತ್ರ, ಕೆಣಕಿದರೆ ಮೂಗು ಕತ್ತರಿಸಿ ಹಾಕುವವನು, ಕದನೈಕ ಶೂದ್ರಕ' ಎಂದು ಮಣಲೆರನನ್ನು ವರ್ಣನೆ ಮಾಡಲಾಗಿದೆ.

ಇದೇ ಶಾಸನದಲ್ಲಿ ೩ನೇ ಕೃಷ್ಣನನ್ನು ಈ ರೀತಿ ವರ್ಣನೆ ಮಾಡಲಾಗಿದೆ ಅಮೋಘ ವರ್ಷ ದೇವ, ಶ್ರೀ ಪೃಥ್ವೀವಲ್ಲಭ, ಪರಮೇಶ್ವರ, ಪರಮ ಭಟ್ಟಾರಕನ ಪಾದಕಮಲಗಳಲ್ಲಿ ದುಂಬಿಯಾಗಿರುವವನು, ಯುದ್ಧದಲ್ಲಿ ಮುಕ್ಕಣ್ಣ ಶಿವನಂತೆ ಭಯಂಕರನಾದವನು. ಆನೆಯ ಸವಾರಿಯಲ್ಲಿ ಸಮರ್ಥನು, ಕಾಡಾನೆಯನ್ನೇ ಪಳಗಿಸುವಷ್ಟು ಬಲಿಷ್ಠನಾದವನು (ವನಗಜಮಲ್ಲ) ಎಂದು ವರ್ಣನೆ ಮಾಡಲಾಗಿದೆ.

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

೩ನೇ ಕೃಷ್ಣನನ್ನು ಕ್ರಿ.ಶ.೯೫೦ರಲ್ಲಿ ರಚನೆಯಾದ ಜೂರಪ್ರಶಸ್ತಿ ಶಾಸನದಲ್ಲಿ೧೩ ಪರಮೇಶ್ವರ ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ ನಲ್ಲರ ಮರುಳ (ಒಳ್ಳೆಯವರನ್ನು ಆಕರ್ಷಿಸಬಲ್ಲವನು), ಆನೆಗಳನ್ನು ಪಳಗಿಸಬಲ್ಲ ಕುಶಲಿ, ಚಲಕೆನಲ್ಲಾತಂ (ಚಲಕ್ಕೆ ಹೆಸರಾದವನು), ವೈರಿ ವಿಳಾಸಂ (ಶತ್ರುಗಳೊಂದಿಗಿನ ಯುದ್ಧವನ್ನು ಒಂದು ವಿನೋದವೆಂದು ಭಾವಿಸಿರುವವನು), ಮದಗಜಮಲ್ಲಂ (ಸೊಕ್ಕಿದ ಆನೆಗಳೆದುರು ಹೋರಾಡಿ ಗೆಲ್ಲುವವನು), ಪರಾಂಗನಾಪುತ್ರಂ (ಬೇರೆ ಹೆಂಗಸರಿಗೆ ತಾನು ಮಗ ಎಂದು ತಿಳಿಯುವವನು), ಗಂಡ ಮಾರ್ತಾಂಡಂ (ವೀರರಲ್ಲಿ ಸೂರ್ಯನಂತೆ ಹೊಳೆಯುವವನು), ಅಕಾಲವರ್ಷಂ (ಅಕಾಲದಲ್ಲಿ ಮಳೆಯಂತೆ ಬಾಣ ಸುರಿಸುವವನು) ಕಚ್ಚೆಗಂ (ಕಾಂಚೀಪಟ್ಟಣವನ್ನು ಗೆದ್ದವನು) ಎಂದು ವರ್ಣಿಸಲಾಗಿದೆ.

೧೦ನೇ ಶತಮಾನಕ್ಕೆ ಸೇರಿದ ಚಿತ್ತವಳ್ಳಿಯ ಮಾರ್ಕಂಡೇಶ್ವರ ದೇವಾಲಯದ ಮುಂದಿರುವ ಶಾಸನವು೧೪ ವೀರಕಥನವನ್ನು ಹೇಳುತ್ತದೆ. ಮಾರಸಿಂಗದೇವನ ಸೇನವಾರನು ತಮ್ಮ ಅಜ್ಜ ಜೀಮೂತವಾಹನನನ್ನು ಕೊಂದ ಹಗೆಯನ್ನು ತನ್ನ ಅಯ್ಯಂದಿರು ತೀರಿಸಿಕೊಳ್ಳಲಾಗದಿದ್ದಾಗ ತಾನು ಶತ್ರುವನ್ನು ತಮ್ಮಜ್ಜ ಕಟ್ಟಿಸಿದ ಜೀವಿತೇಶ್ವರ ದೇವಾಲಯವು ಬಿದ್ದು ಹೋಗಿರಲು ತಾನು ಮತ್ತೆ ಕಟ್ಟಿಸಿದ. ಅವನ ಪ್ರಶಸ್ತಿ ಗದ್ಯವು ಅನುರಣಿತವಾಗುವ ಪದಗುಚ್ಛಗಳಿಂದ ಕೂಡಿದೆ.

ಸೇನವಾರ ಎಂಬುವನ ಮಲ್ಲಯುದ್ಧದ ಚಳಕನ್ನು "ಬೀಸಿದನೆಯ್ದೆವಾಯ್ದು ನಡೆಕುತ್ತಿದನ್ ಉಬ್ಬರವೆತ್ತಿಕೈಗಳಂ ಪಾಯ್ಸಿದ ನಟ್ಟಿ ಪೊಯ್ದು ನುಗುಮದಿವ್ವೆತೊಡವೆ" ಎಂದು ವರ್ಣಿಸಿದೆ೧೫ ಸಂಸ್ಕೃತ ಭೂಯಿಷ್ಟವಾದ ಪ್ರೌಢಗದ್ಯಶೈಲಿಯ ಬೇಗೂರು ಶಾಸನದಲ್ಲಿ೧೬ ಗಂಗರ ಎರೆಯಪ್ಪನನ್ನು ವರ್ಣಿಸಿದೆ.

೧೧ನೇ ಶತಮಾನದಲ್ಲಿ ಕ್ರಿ.ಶ.೧೦೦೭ರ ಲಕ್ಕುಂಡಿಯ ಅತ್ತಿಮಬ್ಬೆಯ ಶಾಸನವು೧೭ ಪ್ರಮುಖವಾಗಿದ್ದು ಕಲ್ಯಾಣಿ ಚಾಲುಕ್ಯದೊರೆ ಅಹವಮಲ್ಲದೇವನನ್ನು ಈ ರೀತಿ ವರ್ಣಿಸಲಾಗಿದೆ. ಸಕಲ ಭೂಮಂಡಲಕ್ಕೆ ಆಶ್ರಯದಾತನಾಗಿರುವನೂ, ಸಂಪದ್ಭರಿತ ಭೂಮಿಗೆ ಮಹಾರಾಜ ಮತ್ತು ಅಧೀನ ರಾಜರ ಒಡೆಯನೂ, ಅತ್ಯಂತ ಶ್ರೇಷ್ಠವ್ಯಕ್ತಿಯೂ ಸತ್ಯಾಶ್ರಯ ಕುಲಕ್ಕೆ ತಿಲಕ ಪ್ರಾಯನಾದವನೂ ಚಾಲುಕ್ಯ ವಂಶಕ್ಕೆ ಆಭರಣ ರೂಪನೂ ಆದ ಶ್ರೀ ಮದಾಹವಮಲ್ಲದೇವನ ಸಾಮ್ರಾಜ್ಯವೂ ಇತ್ಯೋಪತಿಶಯವಾಗಿ ಉಳಿಸಿ ಪಡೆಯುತ್ತ ಆ ಸೂರ್ಯ, ಚಂದ್ರ, ನಕ್ಷತ್ರಗಳಿರುವವರೆಗೆ ಸಲ್ಲುತ್ತಲಿರಬೇಕಾದರೆ ಆತನ ಪಾದ ಕಮಲಗಳಲ್ಲಿದ್ದುಕೊಂಡು ಜೀವನ ನಡೆಸುತ್ತಿದ್ದವನೆಂದೂ ಸಕಲ ರಾಜ್ಯಭಾರಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರ ವಿಭಾಗದ ದಾಖಲೆಪತ್ರಗಳ ಭಂಡಾರದ ಅಧಿಪತಿ' ಎನಿಸಿದವನೆಂದು ವರ್ಣಿಸಲಾಗಿದೆ.

ತೈಲಪನ ವರ್ಣನೆ ಈ ರೀತಿಯಿದೆ. 'ನನ್ನಿ ನಾರಾಯಣನೂ ಸಮ್ಯಕ್ತ್ವ ರತ್ನಾಕರನೂ, ಒಡೆಯನು ಮೆಚ್ಚುವಂಥ ವೀರನೂ, ಒಡೆಯನ ಚಕ್ರಾಯುಧನೂ, ಕರ್ಪೂರ ವರ್ಷನೂ ಚಾತುರ್ಯಬ್ರಹ್ಮನೂ, ಗುಣಮೇರುವಾಯಿದಾಚಾರ್ಯನೆಂಬ ಹೆಸರುಗಳ ಮೇಲೆ ದಿಕ್ಕುಗಳೆಂಬ ಸ್ತ್ರೀಯರ ಮುಡಿಗಳ ಮಾಲೆಯೆನಿಸಿದ ಸೇನಾಧಿಪತಿಯಾಗಿದ್ದನೆಂದು ಹೇಳಲಾಗಿದೆ.

ಅತ್ತಿಮಬ್ಬೆಯ ವರ್ಣನೆ ಈ ರೀತಿಯಿದೆ. ಅತಿಶಯವಲ್ಲದ ಸರಳವೂ, ನಿರ್ಮಲವೂ ಆದ ಕೇವಲ ಜ್ಞಾನವೆಂಬ ಎಳೆಯ ಸೂರ್ಯನ ನೂರು ಕಿರಣಗಳಿಂದ ಪ್ರಕಾಶಿತವಾದ ಸಕಲ ವಸ್ತು ವಿಸ್ತಾರದ ಜೈನಾಗಮ ರಚನೆಗಳಿಂದ ಸಂಗ್ರಹಿಸಿದ ಶ್ರಾವಕ ಧರ್ಮವೆಂಬ ಆಕಾರದ ಚಂದ್ರಕಲೆಯಾಗಿಯೂ, ಅಭ್ಯುದಯಪ್ರದವಾದ ಮೋಕ್ಷಸುಖಪ್ರಾಪ್ತಿಗೆ ಕಾರಣೀಭೂತವಾದ ಆಹಾರ ಅಭಯ ಭೈಷಜ್ಯ (ಮದ್ದು) ಶಾಸ್ತ್ರವೆಂಬ ನಾಲ್ಕು ದಾನ, ಪೂಜೆ, ಶೀಲ, ಉಪವಾಸವೇ ಮುಂತಾದ ಎಲ್ಲ ಗುಣ ಸಮೂಹದ ಪ್ರಕಾಶನದಿಂದ ಗುಣದಂಕಕಾರ್ತಿಯಾಗಿಯೂ, ಎಲ್ಲ ದೇವೇಂದ್ರರ ಸಿಂಹಾಸನಗಳನ್ನು ಕಂಪಿಸಲು ಸಮರ್ಥವಾದ ಇತರರಲ್ಲಿ ಕಾಣಬರದ ತನ್ನ ಪಾತಿವ್ರತ್ಯ ಗುಣದಿಂದ ಜಿನೇಂದ್ರನ ಪಾದಕಮಲಗಳಲ್ಲಿ ಹುಟ್ಟಿದ ಭಕ್ತಿಪ್ರವಾಹ ಪ್ರಭಾವದಿಂದ ಇಡೀ ರಾಜಧಾನಿಯನ್ನು ಆವರಿಸಿದ ಭಯಂಕರ ನದಿಯ ಪ್ರವಾಹವನ್ನು ಅಡಗಿಸಿರುವುದರಿಂದ ಕಟಕ ಪವಿತ್ರೆಯಾಗಿಯೂ,

ಕವಿ, ಕತೆಗಾರ, ಹಾಡುಗಾರ, ವಾದ್ಯಗಾರ, ಸಂನ್ಯಾಸಿ, ನಟ, ಸೇವಕ, ಹೊಗಳುಭಟ್ಟ, ಅನಾಥ ಮತ್ತು ಶಿಷ್ಟರಿಗೆ ಇಷ್ಟವೂ, ಬಯಸಿದಂಥವೂ ಆದ ಧನವನ್ನು ದಾನ ಮಾಡುವ ಗುಣವುಳ್ಳವಳು. ಈ ಗುಣದ ಯಶೋವಾರ್ಯದ ಸದ್ದಿನಿಂದ ದಿಕ್ಕುಗಳೆಂಬ ಆನೆಗಳ ಕಿವಿಯನ್ನು ಕಿವುಡಾಗಿಸಿದುದರಿಂದ ದಾನಚಿಂತಾಮಣಿಯಾಗಿಯೂ, ಮಂದರ ಪರ್ವತದಂತೆ ಮೋಡ ಮುಟ್ಟುವ ಸಮ್ಯಗ್ ದರ್ಶನ ಪ್ರಭಾವೆಯೂ ರುಕ್ಮಿಣಿಯನ್ನು ಗೆದ್ದ ಪ್ರಭಾವೆಯೂ ಎನ್ನಿಸುವಂತಹ ಗುಣವುಳ್ಳವಳೆಂದು' ಅತ್ತಿಮಬ್ಬೆಯನ್ನು ವರ್ಣಿಸಿದೆ.

'ಯಮನಿಯಮ ಸ್ವಾಧ್ಯಾಯ ಧ್ಯಾನ, ಧಾರಣ, ಮೌನಾನುಷ್ಠಾನ ಪರಾಯಣರೂ, ಜಪಸಮಾಧಿಶೀಲ ಸಂಪನ್ನರೂ, ಎಲ್ಲ ಬಗೆ-ಯ ಗುಣ ಸಮೂಹಗಳಿಂದ ಅಲಂಕೃತರೂ, ಪ್ರಸಿದ್ಧವಾದ ವೇದಾರ್ಥ ವಿದ್ಯೆಯಲ್ಲಿ ನಿಪುಣ-ರೂ, ಯಜನ ಯಾಜನ ಅಧ್ಯಯನ ಅಧ್ಯಾಪನ ದನ ಪ್ರತಿಗ್ರಹಗಳೆಂಬ ಆರು ಕರ್ಮಗಳಲ್ಲಿ ನಿರತರೂ ಏಳು ಯುಗಗಳ ಅವಭೃಥ ಸ್ನಾನದಿಂದ ಶುಚಿಯಾದ ಶರೀರವನ್ನುಳ್ಳುವರೂ, ಹದಿನೆಂಟು ಧರ್ಮಶಾಸ್ತ್ರಗಳಲ್ಲಿ ಚತುರರೂ, ಒಂದೇ ಮಾತನ್ನುಳ್ಳವರೂ, ಧೈರ್ಯಶಾಲಿಗಳೂ, ಸಿಂಹ ಪರಾಕ್ರಮಿಗಳೂ, ಆಶ್ರಯಿಸಿದವರಿಗೆ ಕಲ್ಪವೃಕ್ಷರೂ, ಶತ್ರು ಪಕ್ಷವನ್ನು ನಶಿಸುವವರೂ, ಕಲಿಯುಗ ಗಾಂಗೇಯರೂ, ಅತ್ಯಂತ ಪರೋಪಕಾರಿಗಳೂ, ಶಾಪವನ್ನು, ವರವನ್ನು ನೀಡಬಲ್ಲವರೂ, ಕಾರ್ಯಬೃಹಸ್ಪತಿಗಳು, ಏಕೈಕ ಪಂಡಿತರೂ, ವೈಷ್ಣವ ಗೀತಿ ಮನೋಹರರೂ, ಪಾಪಕ್ಕಂಜುವವರೂ ಅನ್ಯಸ್ತ್ರೀಯರಿಂದ ದೂರವಿರುವವರೂ, ದುಷ್ಟರನ್ನು ನಿರ್ಮೂಲ ಮಾಡುವವರೂ ಶಿಷ್ಟ ಜನರಿಗೆ ಆಶ್ರಯದಾತರೂ, ಕಾಮ, ಕ್ರೋಧ, ಲೋಭ ಮೋಹ, ಭಯಗಳನ್ನು, ಬಿಟ್ಟವರೂ, ಬ್ರಾಹ್ಮಣ ಕುಲತಿಲಕರೂ, ಶರಣುಬಂದವರಿಗೆ ವಜ್ರ ಪಂಜರರೂ, ರಾಮನಿಂದ ನಿರ್ಮಿಸಲ್ಪಟ್ಟ ಮಹಾ ಗ್ರಾಮವಾದ ಲಕ್ಕುಂಡಿಯ ಒಡೆಯರೂ ಎಂದು ಲಕ್ಕುಂಡಿಯ ಮಹಾಜನರನ್ನು ಬಣ್ಣಿಸಲಾಗಿದೆ.[೧೮]

ಕ್ರಿ.ಶ.೧೦೬೪ರ ಉಚ್ಚಂಗಿ ದುರ್ಗದ ಗದ್ಯಶಾಸನ ಭಾಗ ಈ ರೀತಿಯಿದೆ. 'ಕದಂಬಾವಾನಾಡ ಮದ್ಯದೊಳ್ಮೆರುವಿಪ್ರಂತಿ ಉಚ್ಚಂಗಿಯ ಪರ್ವತಂ. ಅದಕ್ಕೆ ನಾಲ್ಕು ನಾಮವೆಂತೆಂದೊಡೆ; ಕೃತಯುಗದೊಳು ಮೇಘನಾದನೆಂಬ ರಾಕ್ಷಸನಿವಾಸ ಮಪ್ಪುದಱಿಂ ಮೇಘನಾಧಮೆಂಬುದು, ತ್ರೇತೆಯೊಳ್ ಹಿರಣ್ಯಕನಿವಾಸ ಮಾತನಂ ನಾರಾಯಣ ವಧೆಗೆಯ್ದುಂದಿನೊಸಗೆಯೊಳ್ ಸ್ವರ್ಣವೃಷ್ಟಿಕಱೆ ದುದಱಿಂ ವೀರ ಕನಕಗಿರಿಯೆಂಬುದು, ದ್ವಾಪರದೊಳುತ್ತುಂಗ ಮಹರ್ಷಿ ಆಶ್ರಮ ಮಪ್ಪುದವೆಂ ಉತ್ತುಂಗ ಪರ್ವತವೆಂಬುದು, ಕಲಿಯುಗದೊಳ್ ಉಚ್ಚಂಗಿಯಬ್ಬೆಯೆಂಬಳು ಮೊದಲಾಗಿ ಮೂವರು ಬ್ರಾಹ್ಮಣ ಕನ್ನೆಯರು ತಪಂಗೆಯ್ದೀಶ್ವರವರ ಪ್ರಸಾದದಿಂದ ದೇವತ್ವಮಂ ಪಡೆದರದರಳಿಂದುಚ್ಚಂಗಿಯ ಪರ್ವತವೆಂಬುದು.'

ಆ ಪರ್ವತದ ಮೂಡಣ ದೆಸೆಯೊಳು ಹಿಡಂಬ ವನವೂ ಬನದೊಳಗೆ ಸ್ವಯಂಭು ಕಲಿದೇವ ಸ್ವಾಮಿಯೆಂಬುದು. ಆ ದೇವರ್ಗ್ಗೆ ದೇಗುಲವ ಮಾಡಿಸಿದಳು. ಹಿಡಂಬೆ... ದಿತ್ತ ಹಿಡಂಬೇಶ್ವರ ಮೆಂಬುದು ಆ ಲಿಂಗಂ ಪೆರ್ಚ್ಚೆ ಪೆರ್ಚ್ಚುವ ಕಾರಣದಿಂರಿ ಕಳೇಶ್ವರ ಮದಮೃತಲಿಂಗ ದೇವರ್ ಪ್ರಸನ್ನತೆಯಿಂ ಕಣ್ಡು ಶ್ರೀ ಮದ್ದಣ್ಣನಾಯಕರ ದೇವಪಯ್ಯ ಉಚ್ಚಂಗಿ ಮೂವತ್ತು ಮನಾಳುತ್ತ ಮಿಬ್ದು, ದೇಗುಲದ ಅದಿಷ್ಠಾನಮಂ ಕಟ್ಟಸೆ, ಮಠ ಮಗ್ಗಲು ಬಾವಿಯೆಂಬಿವಂ ಮಾಡಿಸಿ, ಪ್ರಧಾನರ್ಗ್ಗರೇಪಿದ, ದೇವರ್ಗ್ಗೆ ಭೋಗಮಪ್ಪಂತಾಗಿ ಅರಸರ್ಗ್ಗೆ ಬಿನ್ನ ಹಂಗೆಯ್ವುದೆಂದೊಡೆ, ಶ್ರೀಮನ್ಮನೆವೆರ್ಗ್ಗಡೆ ದಣ್ಣನಾಯಕ ನಾಗದೇವಯ್ಯನುಂ ದಣ್ಣನಾಯಕ ಎಱಕಪಯ್ಯನುಂ ಶ್ರೀಮತ್ಸಂಧಿವಿಗ್ರಹಿ ದಣ್ಣನಾಯಕ ಮಾರಮಯನುಂ ಸಂಧಿವಿಗ್ರಹಿ ಕಾಳಿದಾಸ ಭಟ್ಟರುಂ ಅರಸರಿಗೆ ಬಿನ್ನಪಂಗೆಯ್ದರು...

ಕ್ರಿ.ಶ.೧೦೫೫ರ ಸಿಗ್ಗಾವಿಯ[೧೯] ಕಲ್ಯಾಣಿ ಚಾಲುಕ್ಯ ದೊರೆ ಒಂದನೇ ಸೋಮೇಶ್ವರನ ಕಾಲದ ಶಾಸನದಲ್ಲಿ ಲಚ್ಚಲದೇವಿಯನ್ನು ಬಣ್ಣಿಸಿದೆ.

ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರ ಫಳಭೋಗಭಾಮಿನಿ, ದ್ವಿತೀಯ ಲಕ್ಷ್ಮೀಸಮಾನ, ತ್ಯಾಗನಿಧಾನೆ, ಶೃಂಗಾರ ಗಂಗಾ ತರಂಗಿಣಿ, ದಾನಚಿಂತಾಮಣಿ, ಗಿರಿಲಬ್ಧವರ ಪ್ರಸಾದ, ಚಂಪಕಾಮೋದೆ-ವಿವೇಕ ವಿದ್ಯಾಧರಿ, ಸಕಳ ಕಲಾಧರಿ, ಗೋತ್ರಪವಿತ್ರೆ, ದೂರ್ವಾಂಕುರ

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

ಶ್ಯಾಮಗಾತ್ರೆ, ಆಸ್ಥಾನ ರಂಜನೆ, ಸವತಿ ಮದ ಭಂಜನೆ, ಉಪ್ಪಟ್ಟವರ್ಷ, ಧಟುಸಂಕರ್ಷ, ಶ್ರೀಮಾನ್ ಹಿರಿಗಮನಸ್ಸರೋವರ ರಾಜಹಂಸಿ, ಸುಭಗ ವಿಳಾಸ, ಹರಿಗನದ್ಧಾಂಗ್ಗಿ ಪರಿವಾರ ಸುರಭಿಯರಪ್ಪ ಶ್ರೀಮಲಚ್ಚಲದೇವಿಯರು.

ಶಾಸನಗಳಲ್ಲಿ ರಾಜರ ಪ್ರಶಸ್ತಿ ಬಿರುದಾವಳಿಗಳನ್ನುತಿಳಿಸುವಗದ್ಯಶೈಲಿಗಂಭೀರವಾದ ನಿನಾದದಿಂದ ಮೊಳಗುತ್ತದೆ. ಈ ಬಿರುದಾವಳಿಗಳು ರಾಜರ ಆಸ್ಥಾನಗಳಲ್ಲಿ ವಂದಿಗಳಿಬ್ಬರು ಒಬ್ಬರಾದ ಮೇಲೊಬ್ಬರು ಒಂದೊಂದು ಬಿರುದನ್ನು ವಗ್ಗಡಿಸಿ ಹೊಗಳನುಕೂಲಿಸುವಂತೆ ಜೋಡಿ ಜೋಡಿಯಾಗಿದ್ದು ಲಯಬದ್ಧ ನುಡಿಗಟ್ಟುಗಳಿಂದ ಕೂಡಿ ವಿಶಿಷ್ಟವಾಗಿರುತ್ತವೆ. ಕಾಲಕ್ರಮದಲ್ಲಿ ಇವು ವಿಸ್ತಾರವಾಗುತ್ತ ಹೋಗುವುದಲ್ಲದೆ ಇಂಥ ಬಿರುದಾವಳಿಗಳನ್ನು ರಾಜರ, ಸಾಮಂತರ, ಅಧಿಕಾರಿಗಳ, ದಾನಪಡೆವ ಮಹಿಮರ ಸ್ತುತಿಮಾಲಿಕೆಗಳಲ್ಲಿ ಕಾಣಬಹುದು. ಇದ-ಕ್ಕೆ ಉದಾಹರಣೆಯಾಗಿ ಶ್ರವಣಬೆಳಗೊಳದ ವಿಷ್ಣುವರ್ಧನ ಶಾಸನದಲ್ಲಿ೨೦ ಕಾಣಬಹುದು.

೧೨ನೇ ಶತಮಾನದ ಗದ್ಯ ಶಾಸನಗಳಲ್ಲಿ ಕ್ರಿ.ಶ.೧೧೬೨ರ ಕೋಡಿಮಠದ ಶಾಸನವು೨೧ ಪ್ರಮುಖವಾಗಿದ್ದು, ಈ ಶಾಸನದಲ್ಲಿ ಬರುವ ಕಸಪಯ್ಯನನ್ನು ಕೀರ್ತಿ ಮತ್ತು ಪ್ರತಿಷ್ಠಿತ ಮೂಲ ಸ್ಥಾನನೆನಿಸಿದ ದೊರೆ ಬಿಜ್ಜಳ ದೇವನ ಚರಣ ಕಮಲಗಳಲ್ಲಿ ದುಂಬಿಯಂತೆ ಇದ್ದನೆಂದು ವರ್ಣಿಸಿರುವುದನ್ನು ಗಮನಿಸಬಹುದು. ಶ್ರೀಧರನಾಯಕ, ಆಚಣನಾಯಕ, ಚಟ್ಟಿಮಯ್ಯನಾಯಕ, ಮಲ್ಲಿಯಣ್ಣ ನಾಯಕ ಮತ್ತು ತಿಕ್ಕಿಮಯ್ಯ ನಾಯಕ ಎಂಬ ಐದು ಜನ ಮಂತ್ರಿಗಳು ಬಿಜ್ಜಳದೇವನ ಪಂಚೇಂದ್ರಿಯಗಳಂತೆ ಕಾರ್ಯನಿರ್ವಹಿಸುತ್ತಿದ್ದರೆಂದು ವರ್ಣಿಸಲಾಗಿದೆ. ಮಹಾಪ್ರಧಾನ ರವಿದೇವನು ಬಮ್ಮರಸನ ಮುಖಾರವಿಂದವನ್ನು ಅರಳಿಸುವಂತೆ ಮಾಡುವ ರವಿಯಂತಿದ್ದನೆಂದು ವರ್ಣಿಸಿರುವಲ್ಲಿ ಸುಂದರವಾದ ಉಪಮೆಯನ್ನು ಕಾಣಬಹುದು.

ಕಾಲಬಾಯೊಳಂ ಜವನೊಕ್ಕಲಿಕ್ಕಿದಂತೆ ತೊತ್ತಳದುಳಿದ ವೊಲು ತಂಕಯ್ಯನರೆದುಂ ಬಿಲ್ಲು ತಿರುಮಂ ಪರೆವನ್ನ ಮೆಚ್ಚು ನೆಱೆಯದೆ ಕಟ್ಟಿದಲಗಂ ಕಿತ್ತು ಬಲ್ಕುಱೆಯ ಹಿಂಡಂ ತೋಳಂ ಪೊಕ್ಕಂತೆ-ಯುಂ ಕಬ್ಬುದೋಂಟವನಾನೆ ಪೊಕ್ಕಂತೆಯುಂ ನಿಕ್ಕುರಳಿಲು ಪೊಕ್ಕುದೋಳ ಹಿಂಡು ಕುತ್ತಿನೂಂಕುತ್ತ ಬರ್ಪಾಗಳ್.....'

ದೇವಗೌಡ-ಮಲ್ಲಗೌಡ ತುರು ಕಾಳಗದಲ್ಲಿ ಪರಾಕ್ರಮವನ್ನು ತೋರಿ ಮಡಿಯುತ್ತಾರೆ. ಅದನ್ನು ಕಂಡ ಅವರ ತಮ್ಮ ಬೊಪ್ಪಗೌಡ ಸೈರಿಸಲಾರದೆ ಶತ್ರುಗಳನ್ನು ಒಬ್ಬನೇ ಬೆನ್ನಟ್ಟಿ ತುರುಗಳನ್ನು ಬಿಡಿಸಿದ ಸಂಗತಿಯು ವೀರ ರಸೋಪೇತವಾಗಿ ಮಾಲೋಪಮೆಗಳಿಂದ ತುಂಬಿ ವಿಶಿಷ್ಟವಾಗಿದೆ. ಇಲ್ಲಿನ ವೀರನು ಏಕಾಂಗಿಯಾಗಿ ನಿಂತು ನಡೆದ ಹೋರಾಟವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಗುಹೆಯ ಬಾಗಿಲಲ್ಲಿ ಸಿಂಹ ನಿಂತಂತೆ, ಶತ್ರುಸೈನ್ಯವೆಂಬ ಕುರಿಯ ಹಿಂಡನ್ನು ತೋಳ ಹೊಕ್ಕಂತೆ, ಕಬ್ಬಿನ ತೋಟಕೆ ಆನೆ ಹೊಕ್ಕಂತೆ ವೀರನು ಶತ್ರುಸೈನ್ಯದ ಮೇಲೆ ಬಿದ್ದ ಪರಿಯನ್ನು ಈ ರೀತಿ ಕವಿ ವರ್ಣಿಸಿದ್ದಾನೆ. ಈ ರೀತಿಯಾಗಿ ಗದ್ಯ ಶಾಸನಗಳಲ್ಲಿ ಸಾಹಿತ್ಯಕ ಅಂಶಗಳನ್ನು ಗುರ್ತಿಸಬಹುದು.

**ಅಡಿ ಟಿಪ್ಪಣಿಗಳು**

೧. ಬಿ.ಎಲ್.ರೈಸ್ (ಸಂ): E.C.VI ಚಿಕ್ಕಮಗಳೂರು, ಸಿರಗುಂದ ೫೦ ಪು.೬೮

೨. ಎಂ.ಬಿ.ನೇಗಿನಹಾಳ: ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪು.೩೯

೩. ದೇವರಕೊಂಡಾರೆಡ್ಡಿ (ಸಂ): ಬಾಗಲಕೋಟೆ ಜಿಲ್ಲೆ ಶಾಸನ ಸಂಪುಟ, ಬಾದಾಮಿ, ಪು.೧೨೭

೪. M.A.R-೧೯೩೩ ಪು.೮೩

೫. ಬಿ.ಎಲ್.ರೈಸ್ (ಸಂ): E.C.X ಶ್ರೀನಿವಾಸಪುರ – ೧೧೬ ಪು.೧೯೨

೬. ಎಂ.ಬಿ.ನೇಗಿನಹಾಳ: ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪು.೪೧

೭. ಎಂ.ಬಿ.ನೇಗಿನಹಾಳ: ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಕ ಅಧ್ಯಯನ, ಪು.೫೨

೮. ಬಿ.ಎಲ್.ರೈಸ್ (ಸಂ): E.C.VIII ಸೊರಬ, ಮಾವಳಿ-೧೦ ಪು.೫

೯. E.I .III ಪು.೩೬೦

೧೦. E.I.VII ಪು.೨೦೫

೧೧. ಬಿ.ಎಲ್.ರೈಸ್ (ಸಂ): E.C.X ಶ್ರೀನಿವಾಸಪುರ ಅರಳಕೋಟೆ ೭ ಪು.೧೨

೧೨. ಬಾ.ರಾ.ಗೋಪಾಲ (ಸಂ): E.C.೦೭ ಮದ್ದೂರು ಆತಕೂರು-೫೪೨, ಪು.೨೭೬

೧೩. ಬಾ.ರಾ.ಗೋಪಾಲ : ಕರ್ನಾಟಕ ಚರಿತ್ರೆಯ ಸಂಕ್ಷಿಪ್ತ ಅವಲೋಕನ, ಪು.೨೭೦

೧೪. ಬಿ.ಎಲ್ ರೈಸ್ (ಸಂ) : E.C.VI ಚಿತ್ತವಳ್ಳಿ-೯೪ ಪು.೯೪

೧೫. ಬಿ.ಎಲ್.ರೈಸ್ (ಸಂ): E.C.VI ಚಿತ್ತವಳ್ಳಿ-೭೬ ಪು.೭೨

೧೬. E.I, VI ಪು.೩೫೦

೧೭. ಎಚ್. ಕೃಷ್ಣಶಾಸ್ತ್ರೀ (ಸಂ): S.I.I - VI ಪು.೪೩

೧೮. ಎನ್.ಲಕ್ಷ್ಮೀನಾರಾಯಣರಾವ್ (ಸಂ): S.I.I. ಭಾಗ-೧, ಪು.೧೦೭

೧೯. ಏ. ಖ-ಗಿಖ, ಪು.೨೧

೨೦. ಬಾ.ರಾ.ಗೋಪಾಲ (ಸಂ): E C 2, ಶ್ರವಣಬೆಳಗೊಳ ೧೭೯, ಪು.೧೩೫

೨೧. ಬಿ.ಎಲ್ ರೈಸ್ (ಸಂ) : E.C.VII ಶಿಕಾರಪುರ, ಬೆಳ್ಳಿಗಾವೆ-೧೦೨ ಪು. ೧೯೦

ISSN: 2348-766

# International Journal of Academic Research

## ACHIEVED PUBLICATION EXCELLENCE AWARD, 2016 - 2017



Dr.Haniyuru Chandre Gowda, B.Ed., M.A., NET, M.Phil., Ph.D.,(LLB) is from Haniyuru, Channapatna Taluk, Ramanagara District of Karnataka state. He is a National & State level Awardee Writer, Actor, Radio Jockey, Anchor. Worked as HOD/Associate Professor of Kannada, SIMS, Bengaluru District. He completed MA in Kannada from Bangalore University, And passed NET in 2012. He is working for Folk, Nomadical tribes and Tribals like Soligas, Male kudiya, Jenu kuruba, Kadu golla, Handi Jogi, Sudugadu sidda, Domba, Hakki Pikki, Duruga murgi, Budubudike, Kole basava, etc. He published several articles in various national and international journals. He has written more than 5 thousand article in news paper like Daily, weekly, monthly. He delivered Guest lectures in various institutions. He is the founder President of Karnataka Budakattu Parishat, Chairman of National Tribal Council of India, managing Trustee of Birsa Munda [illegible] community development trust, Life member of Kannada Sahithya Parishad, and various NGOs. He is the Convener-Member of various Committees in the college. He got National Level KempeGowda Youth award-2017, Karunada Rathna state level award. He has given more than 4 thousand guest lectures on Folklore and Tibals issues. He is an actor (serials and films); he has written 14 books in various subjects like folklore, tribals and edited more than 10 issues of international journals (IJAR etc.). He is now Purely Visiting Lecturer and Subject Experts of Folk, History and Tribals. (Including Nomadic, Semi-Nomadi, And Tribes. Now He starts YouTube Channel about FOL and Tribes.

VOICE OF INTELLECTUALS


**www.ijar.org.in**

**For all contributions, correspondence and discussions mail to Editor-in-Chief**

Price: Rs. 650/-

**Dr.T.V.RAMANA**
Editor-in-Chief
International Journal of Academic Research
4-105/1, Srinivasanagar,
Kakinada-533005,
Andhra Pradesh (India)
e-mail: drtvramana@yahoo.co.in
**Mobile: 09948440288**

2348 7666


ISSN : 2347 - 5048
ಅರುಹು
ಕುರುಹು
ವಿಶೇಷ ಸಂಚಿಕೆ
ಸಂಶೋಧನ ತರಂಗ
UGC CARE LISTED AND PEER- REVIEWED KANNADA JOURNAL
ISSN - 2347-5048
ARUHU KURUHU Kannada Quarterly

ISSN: 2347 - 5048

# ಅರುಹು ಕುರುಹು

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

## ಸಂಶೋಧನ ತರಂಗ ವಿಶೇಷ ಸಂಚಿಕೆ

ಸಂಪುಟ : ೧೨ ಸಂಚಿಕೆ : ೪೭ ಜನವರಿ-ಮಾರ್ಚ್ ೨೦೨೨

ಯುಜಿಸಿ- ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞ - ಪರಿಶೀಲಿತ ಕನ್ನಡ ಪತ್ರಿಕೆ

UGC- CARE LISTED AND PEER - REVIEWED KANNADA JOURNAL

ತಜ್ಞಪರಿಶೀಲನ ಸಮಿತಿ

PEER REVIEW COMMITTEE

ಡಾ. ಸಿ. ನಾಗಣ್ಣ

ಸಂದರ್ಶಕ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಡಾ. ಎಂ.ಜಿ. ಮಂಜುನಾಥ

ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಡಾ. ಪ್ರೀತಿ ಶ್ರೀಮಂಧರಕುಮಾರ್

ಪ್ರಾಧ್ಯಾಪಕರು (ನಿ), ಮೈಸೂರು ವಿಶ್ವವಿದ್ಯಾನಿಲಯ

ಡಾ. ಮುಜಾಫರ್ ಅಸ್ಸಾದಿ

ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಡಾ. ವಿನಯಾ ಒಕ್ಕುಂದ

ಪ್ರಾಧ್ಯಾಪಕರು, ಸರ್ಕಾರಿ ಪ್ರದ. ಕಾಲೇಜು, ದಾಂಡೇಲಿ

ಡಾ. ಸೋಮಣ್ಣ ಹೊಂಗಳ್ಳಿ

ಕನ್ನಡ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾಲಯ

ಡಾ. ಮೇಟಿ ಮಲ್ಲಿಕಾರ್ಜುನ

ಭಾಷಾವಿಜ್ಞಾನ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ

ಡಾ. ಎಫ್.ಟಿ. ಹಳ್ಳಿಕೇರಿ

ಹಸ್ತಪ್ರತಿಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ

ಡಾ. ಪರಮಶಿವಮೂರ್ತಿ

ಕನ್ನಡ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ

ಡಾ. ಆರ್. ಸುನಂದಮ್ಮ

ಕನ್ನಡ ಪ್ರಾಧ್ಯಾಪಕರು, ಮಹಿಳಾ ವಿಶ್ವವಿದ್ಯಾಲಯ

ಡಾ. ಅಪ್ಪಗೆರೆ ಸೋಮಶೇಖರ

ಕನ್ನಡಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಸಂಪಾದಕರು

ಪ್ರೊ. ಎಚ್ ಎಸ್ ಉಮೇಶ

ಗೌರವ ಸಂಪಾದಕರು

ಡಾ. ಹಾ ತಿ ಕೃಷ್ಣೇಗೌಡ

ವ್ಯವಸ್ಥಾಪಕ ಸಂಪಾದಕರು

ಹಾ ತಿ ರತ್ನ

ವಿನ್ಯಾಸ

ಹಾಲತಿ ಲೋಕೇಶ್

ತಾಂತ್ರಿಕ ಸಹಕಾರ

ವಿಪುಲ್ ಹಾಲತಿ

ಅರುಹು ಕುರುಹು, ತ್ರೈಮಾಸಿಕ ಪತ್ರಿಕೆ

#೧೦, 'ಬೆಳಕು', ಕುವೆಂಪು ರಸ್ತೆ, ಸೃಷ್ಟಿ ಬಡಾವಣೆ, ದಟ್ಟಗಳ್ಳಿ ೩ನೆಯ ಹಂತ

ಮೈಸೂರು-೫೭೦೦೨೩, ಮೊ: ೯೮೮೬೭೨೮೩೩

aruhukuruhu@gmail.com

# ಒಳನೋಟ


೦೧. ಮಸ್ಕಿ ಪರಿಸರದ ಶಾಸನಗಳಲ್ಲಿ ಪ್ರಾದೇಶಿಕ ಭಾಷೆ
ಡಾ. ಜೋಗಿನಕಟ್ಟೆ ಮಂಜುನಾಥ / ೦೯
೦೨. ಬಾದಾಮಿ ಚಳುಕ್ಯರ ಕಾಲದ ಕವಿಗಳು ನಿಂಗರಾಜು / ೧೪
೦೩. ಕಲ್ಯಾಣ ಚಾಲುಕ್ಯರ ಕಾಲದ ಶಾಸನೋಕ್ತ ಶೈವ ದೇವಾಲಯ ಮತ್ತು ಮಠಗಳು: ಹರಪನಹಳ್ಳಿ ತಾಲ್ಲೂಕು ರಾಘವೇಂದ್ರ ಎಸ್ / ೧೯
೦೪. ಪ್ರಾಚೀನ ಕಾಲಮಾನದಲ್ಲಿ ಕನ್ನಡ ಮತ್ತು ತೆಲುಗು ಸಂಬಂಧ
ಡಾ.ಟಿ.ಎಂ.ಗೀತಾಂಜಲಿ / ೨೪
೦೫. ಆದಿಪುರಾಣದಲ್ಲಿ ಭರತ-ಬಾಹುಬಲಿಯ ಯುದ್ಧ ಪ್ರಸಂಗ
ಡಾ. ಭೀಮಾಶಂಕರ ಜೋಷಿ, ಕೂಡಲಗಿ / ೩೦
೦೬. 'ಪಂಪ ಭಾರತ'-ಒಂದು ಸಾಂಸ್ಕೃತಿಕ ಅಧ್ಯಯನ : ಪಕ್ಷಿನೋಟ
ರಶ್ಮಿ ದೇವಾಪುರ / ೩೫
೦೭. ಯಶೋಧರ ಚರಿತೆಯಲ್ಲಿ ಹಿಂಸೆ ಮತ್ತು ಅಹಿಂಸೆಯ ರೂಪಗಳು
ಶ್ರೀ ಚಂದ್ರ / ೪೦
೦೮. ಜನ್ನನ ಯಶೋಧರ ಚರಿತೆಯಲ್ಲಿ ದೂದವಿ ಕಲ್ಪಿಸಿದ ಕತೆ
ಡಾ. ಟಿ.ಡಿ. ರಾಜಣ್ಣ ತಗ್ಗಿ / ೪೪
೦೯. ವಚನ ಚಳವಳಿಯ ಪ್ರಸ್ತುತತೆ ಮತ್ತು ವೈಶಿಷ್ಟ್ಯತೆ
ಡಾ. ಶೋಭ ಸಾವಕಾರ / ೪೯
೧೦. ವಚನಕಾರ ಹೆಂಡದ ಮಾರಯ್ಯ : ಒಂದು ತಾತ್ವಿಕ ಚರ್ಚೆ
ಡಾ. ಅಣ್ಣಪ್ಪ ಎನ್. ಮಳೀಮಠ್ / ೫೩
೧೧. ಅಂಬಿಗರ ಚೌಡಯ್ಯನ ವಚನಗಳ ಲೌಕಿಕ ನೆಲೆ ಡಾ. ಸುಬ್ರಹ್ಮಣ್ಯ ಕೆ. / ೫೮
೧೨. ಸಿದ್ಧರಾಮನ ವಚನಗಳಲ್ಲಿ ಶರಣತತ್ತ್ವಗಳು ಹಾಗೂ ಸಾಮಾಜಿಕ ಚಿಂತನೆ
ಡಾ. ಭಾಗ್ಯಜ್ಯೋತಿ / ೬೩
೧೩. ಬಸವಣ್ಣನವರ ಸಹಕಾರ ತತ್ವ
ಡಾ. ರೂತಾ ಪ್ರಭುರಾವ ತಾಳಮಡಗಿ / ೬೮
೧೪. ಅಂಬಿಗರ ಚೌಡಯ್ಯನ ವಚನಗಳಲ್ಲಿ ಡಾಂಭಿಕತೆಯ ವಿಡಂಬನೆ
ಡಾ. ಸುಬ್ರಹ್ಮಣ್ಯ ಕೆ. / ೭೨
೧೫. ಮಾದಾರ ಚೆನ್ನಯ್ಯ ಮತ್ತು ಬೇಡರ ಕಣ್ಣಪ್ಪ ರಗಳೆಗಳ ಹೊಸ ಓದು
ಡಾ.ಎಚ್.ಲಕ್ಷ್ಮೀನಾರಾಯಣಸ್ವಾಮಿ / ೭೬
೧೬. ಹೈದ್ರಾಬಾದ್ ಕರ್ನಾಟಕದ ಪ್ರಾಚೀನ ಸಾಹಿತಿಗಳ ಬದುಕಿನ ಮೌಲ್ಯಗಳು
ಡಾ.ಬಿ.ಜಿ.ಕಲಾವತಿ / ೮೧
೧೭. 'ಅಲ್ಲಮ ಹಾಗೂ ಶರೀಫರ ಸಾಹಿತ್ಯದ ತಾತ್ವಿಕ ಅನುಸಂಧಾನ' ಆಧುನಿಕ ತುರ್ತು
ವಸುಂಧರಾ ಕೆ. ಎಂ. / ೮೪
೧೮. ಕನಕದಾಸರ ಸಾಹಿತ್ಯ ದರ್ಶನ- ಸಂತೋಷಕುಮಾರ ಹಿರೇಮನಿ / ೮೯
೧೯. ಭಾರತೀಯ ಸಾಧನಾ ಮಾರ್ಗಗಳು- ಡಾ. ಎಂ.ಬಿ. ಕಟ್ಟಿ / ೯೨
೨೦. ವಿಜಯನಗರ ಕಾಲದ ಕರಾವಳಿ ಕರ್ನಾಟಕ ಒಂದು ಅಧ್ಯಯನ
ಡಾ. ಹನುಮಂತಯ್ಯ / ೯೭





೨೧. ರತ್ನಾಕರವರ್ಣಿಯ ಭರತೇಶವೈಭವದ ಕಟಕವಿನೋದ ಸಂಧಿ (ಕಿರುವೆರಳಸಟೆ ಪ್ರಸಂಗ)
ಡಾ.ನಾಗಪ್ಪ ಟಿ.ಗೋಗಿ / ೧೦೩
೨೨. ಆರೂಢ ಪಂಥ ಡಾ. ಎಂ.ಬಿ. ಕಟ್ಟಿ / ೧೦೭
೨೩. ಕರಾವಳಿ ಕರ್ನಾಟಕದ ಕೈಫಿಯತ್ತುಗಳಲ್ಲಿ ಉಲ್ಲೇಖವಾಗಿರುವಂತೆ, ಕರಾವಳಿ ಕರ್ನಾಟಕದಲ್ಲಿ ಹೈದರ್‌ಆಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತದ ಒಂದು ಅಧ್ಯಯನ
ಡಾ. ಹನುಮಂತಯ್ಯ / ೧೧೧
೨೪. ಧಾರ್ಮಿಕ ಸಮನ್ವಯ – ಚಾಂದಪೀರ್ ದರ್ಗಾ
* ಚಾಂದಸಾಬ ** ಡಾ. ನಾಗಪ್ಪ ಟಿ. ಗೋಗಿ / ೧೧೬
೨೫. ಕರ್ನಾಟಕ ಏಕೀಕರಣಕ್ಕೆ ಆಲೂರು ವೆಂಕಟರಾಯರ ಕೊಡುಗೆ
* ಡಾ. ಭೀಮರಾಜು ** ಸೌಮ್ಯ ಕೆ.ಎನ್ / ೧೨೧
೨೬. ಕನ್ನಡ ನವೋದಯ ಸಾಹಿತ್ಯದ ವಿಮರ್ಶೆಯ ತಾತ್ವಿಕ ನೆಲೆಗಳು
ಯರಿಯಪ್ಪ / ೧೨೬
೨೭. ಭಾಷೆ-ಸಾಹಿತ್ಯ – ಪ್ರಸ್ತುತದ ಸವಾಲುಗಳು ಡಾ.ಟಿ.ಕೆ. ಶರತ್ ಕುಮಾರ್ / ೧೩೧
೨೮. ವಿಚಾರ ಸಾಹಿತ್ಯದ ಮಹತ್ವ ಡಾ.ಎನ್.ಆರ್.ಚಂದ್ರೇಗೌಡ / ೧೩೭
೨೯. ಭಾರತೀಯ ಸಾಹಿತ್ಯ: ಬದಲಾಗುತ್ತಿರುವ ದೃಷ್ಟಿಕೋನಗಳು
ಡಾ. ಗೀತಾವಸಂತ / ೧೪೨
೩೦. ಮಾಯಗಾತಿ ಗಂಗೆ ಡಾ. ಉಷಾದೇವಿ / ೧೪೭
೩೧. ಮನೋವಿಶ್ಲೇಷಣೆಯ ಹಿನ್ನಲೆಯಲ್ಲಿ ಹ್ಯಾಮ್ಲೆಟ್ ಮತ್ತು ರಕ್ತಾಕ್ಷಿ ನಾಟಕ
ಡಾ. ತಾರಾಮಣಿ ಆರ್. / ೧೫೨
೩೨. ಕುವೆಂಪು ಅವರ ಶಭರಿ ಮತ್ತು ತ್ರಿಜಟೆ ಡಾ. ಉಷಾದೇವಿ / ೧೫೮
೩೩. ದ.ರಾ. ಬೇಂದ್ರೆಯವರ ನಿದ್ದೆ ಕವನ- ಒಂದು ವಿಶ್ಲೇಷಣೆ
ಡಾ. ಧನರಾಜ್ ಧರಂಪುರೆ / ೧೬೪
೩೪. ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿ : ನೆನಪು ಮತ್ತು ನಿರೂಪಣೆ
* ಖೈರುನ್ನಿಸಾ ಬೇಗಂ ** ಡಾ.ವಿಜಯಕುಮಾರ ಹೆಚ್.ವಿಶ್ವಮಾನವ/ ೧೬೭
೩೫. ಪುತಿನ ಅವರ ಕವನಗಳಲ್ಲಿ ಸ್ತ್ರೀಪಾತ್ರಗಳು ರಂಗಸ್ವಾಮಿ ಹೆಚ್. / ೧೭೨
೩೬. ಅ.ನ.ಕೃ ಅವರ ಕಾದಂಬರಿಗಳಲ್ಲಿ ಸಂಸ್ಕೃತಿ ಚಿಂತನೆಗಳು ಮಹೇಶ ಎಂ.ಕೆ / ೧೭೮
೩೭. ಸಾಹಿತ್ಯ ಕುರಿತಂತೆ – ಅ.ನ. ಕೃಷ್ಣರಾಯರ ಚಿಂತನೆಗಳು
ಡಾ. ಶಿವಕುಮಾರ್ ಎಂ.ಕೆ. / ೧೮೨
೩೮. ಕನ್ನಡ ಕಾದಂಬರಿಗಳಲ್ಲಿ ಪ್ರಗತಿಶೀಲ ಚಳವಳಿ
ಡಾ.ವೆಂಕಟ.ಎ.ಜಾಧವ / ೧೮೭
೩೯. ರಂಗ ಕಲಾವಿದೆ ರೆಹಮಾನವ್ವ ಕಲ್ಮನಿ ಡಾ. ಶ್ರೀಶೈಲ ನಾಗರಾಳ / ೧೯೦
೪೦. ದರೋಜಿ ಈರಮ್ಮನ ಬುರ್ರ ಕಥಾ ವೈಶಿಷ್ಟ್ಯ
ಡಾ. ಸುವರ್ಣ ಎಂ. ಹಿರೇಮಠ / ೧೯೪
೪೧. ಕನ್ನಡದ ಪೌರಾಣಿಕ ಕಥನ ಕವನಗಳಲ್ಲಿ ಅವೈದಿಕ ಕ್ರಮಗಳ ಪ್ರತಿಕ್ರಿಯೆಗಳು-ಬುಡಕಟ್ಟು ಪುರಾಣಗಳು-ಆಧುನಿಕ ಕಥನ ಕವನಗಳು ಡಾ.ಟಿ.ಕೆ.ಶರತ್ ಕುಮಾರ್ / ೨೦೧
೪೨. ಗ್ರಾಮೀಣ ಮಕ್ಕಳ ಗಾಲಿ ಓಡಿಸುವ ಜನಪದ ಆಟ
ಡಾ. ಆರ್.ವಿ.ಪಾಟೀಲ / ೨೦೫
೪೩. ಹೈದ್ರಾಬಾದ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ಬ್ಯಾರಿಸ್ಟರ್ ರಾಜಾವೆಂಕಟಪ್ಪ ನಾಯಕ ನಿಂಗಪ್ಪಗೌಡ

೪೪. ಭಾರತದಲ್ಲಿ ಪ್ರಜಾಸತ್ತಾತ್ಮಕ ಬೆಳೆವಣಿಗೆ: ಆಡಳಿತ ಮತ್ತು ಅಭಿವೃದ್ಧಿ
ಪುಟ್ಟರಾಜು.ಸಿ. / ೨೧೬
೪೫. ಸಮ್ಮಿಶ್ರ ಸರ್ಕಾರ ಮತ್ತು ಅದರ ವಾಸ್ತವಿಕತೆ ಕೆ. ರಂಗರಾಜು / ೨೨೧
೪೬. ಯುವಜನತೆ – ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ
ಡಾ. ರತ್ನಾಕರ ಮಲ್ಲಮೂಲೆ / ೨೨೬
೪೭. ಆಧುನಿಕ ಕನ್ನಡ ಕವಿತೆಗಳಲ್ಲಿ ಕೃಷಿ ಮತ್ತು ಕೃಷಿಕನ ಚಿತ್ರಣ
ಡಾ. ಶೋಭಾ ಸಾವಕಾರ / ೨೩೦
೪೮. "ರೈತ ಸಂಘಟನೆ, ಸಮಾಜ ಮತ್ತು ಸರ್ಕಾರ : ಒಂದು ವಿಶ್ಲೇಷಣೆ"
ಡಾ. ಧನಂಜಯ. ಬಿ.ಜಿ. / ೨೩೬
೪೯. ರೈತ ಚಳವಳಿ: ಗ್ರಾಮ ಕೇಂದ್ರಿತ ಚರ್ಚೆ ಡಾ. ರವಿಕುಮಾರ್ ಬಾಗಿ / ೨೪೦
೫೦. ಚಂದ್ರಶೇಖರ ಕಂಬಾರರ 'ಶಿವಾಪುರ'ವೆನ್ನುವ ಕಲ್ಯಾಣ
ಸಂದೇಶ್.ಎ.ಎಸ್. / ೨೪೮
೫೧. ಕೆ.ಎಸ್.ನಿಸಾರ್ ಅಹಮದ್ ಅವರ ಕವನಗಳಲ್ಲಿ ಮುಸ್ಲಿಂ ಸಂವೇದನೆ
ತಾಜ್ ಉನ್ನೀಸ / ೨೫೨
೫೨. ಪ್ರೊ.ಕೆ.ಎಸ್. ನಿಸಾರ್ ಅಹಮದ್ ಅವರ ವಿಮರ್ಶೆ
ಡಾ.ರಾಮಚಂದ್ರಪ್ಪ ಗಣಾಪೂರ / ೨೫೬
೫೩. ಸಿರಿಸಂಪಿಗೆ ಮತ್ತು ಕೊಡೆಗಳು ನಾಟಕಗಳಲ್ಲಿ ದೇಹ ಮತ್ತು ಮನಸ್ಸುಗಳ ಸಂಘರ್ಷ
ಶರಣಪ್ಪ ಆಡಕಾರ / ೨೬೧
೫೪. ಮಹಿಳಾ ಸಬಲೀಕರಣ ವಿವಿಧ ಸ್ತರಗಳಲ್ಲಿ ಸಬಲತೆ ಜ್ಯೋತಿ / ೨೬೭
೫೫. ನನ್ನ ಬದುಕಿನ ಪುಟಗಳಿಂದ – ಕೃತಿಯಲ್ಲಿ ಸ್ತ್ರೀ ಸಂವೇದನೆ (ರಂಗಕಲಾವಿದೆ ಅನ್ನಪೂರ್ಣ ಸಾಗರರ ಆತ್ಮಕಥೆ) ರವಿ ಎನ್.ಸಿ. / ೨೭೩
೫೬. ಎಸ್.ಜೆ ಸುಜಾತ ಅವರ "ವೈದೇಹಿ ಏನಾದಳೋ" ಕಾದಂಬರಿಯಲ್ಲಿ ಮಹಿಳಾ ಶೋಷಣೆಯ ನೆಲೆ ಶಾರದಮ್ಮ / ೨೭೮
೫೭. ದೃಢ ಚಿತ್ತದ ಮನೋಮಿ...... ಡಾ. ಸೌಮ್ಯಲತಾ ಪಿ / ೨೮೩
೫೮. ಭಾರತೀಯ ಸಮಾಜದಲ್ಲಿ ಮಹಿಳೆ ಮತ್ತು ಮಾನಸಿಕ ಸ್ವಾಸ್ಥ್ಯ ಜ್ಯೋತಿ / ೨೯೦
೫೯. ಅಂಬೇಡ್ಕರ್ ಚಿಂತನೆಗಳ : ಹೊಸ ಓದು
ಡಾ. ವಿಜಯಕುಮಾರ ಹೆಚ್.ವಿಶ್ವಮಾನವ, ಡಾ. ಆಶಾರಾಣಿ ಎಂ.ಪಿ./ ೨೯೫
೬೦. ಮಹಾಬಲೇಶ್ವರ ಕಾಟ್ರಹಳ್ಳಿಯವರ 'ಬುದ್ಧ, ಬಸವ ಮತ್ತು ಬಾಬಾ ಸಾಹೇಬ' ಕೃತಿಯ ಅವಲೋಕನ ಡಾ. ಲೋಕೇಶ ಎಂ.ಆರ್. / ೨೯೯
೬೧. ಸುಬ್ಬು ಹೊಲೆಯಾರ ಅವರ ಕಾವ್ಯಗಳು : ಗಾಂಧೀಜಿ
ದೇವಿಕಾ ರಮೇಶ ಧಟ್ಟಿ / ೩೦೫
೬೨. ಕನ್ನಡಕ್ಕೆ ಅನುವಾದಗೊಂಡ ಮರಾಠಿ ನಾಟಕಗಳಲ್ಲಿ ಅಲಕ್ಷಿತ ಲೋಕದ ಸಂಕಥನ
ಸಂಗಪ್ಪ ತೌಡಿ / ೩೦೮
೬೩. ಡಾ. ಎಸ್.ಎಂ. ಹಿರೇಮಠರು ಮತ್ತು ಕನ್ನಡ ರಂಗಭೂಮಿ
ನಾಗಮ್ಮ ಹುಲೆಪ್ಪ ಭಂಗರಗಿ / ೩೧೪
೬೪. ರಂಜಾನ್ ದರ್ಗಾ ಅವರ ಜೀವನ ಮತ್ತು ಸಾಹಿತ್ಯ
ಪಿ.ಕೆ. ಧನಂಜಯ / ೩೧೭



೬೫. ಚಂದ್ರಕಲಾ ಬಿದರಿಯವರ 'ರಸ್ತಾಪುರದ ಭೀಮಕವಿ' ಕೃತಿ : ಅವಲೋಕನ
ಡಾ. ಶಾಂತಪ್ಪ ಎನ್. ಡಂಬಳ / ೩೨೩
೬೬. ಮನು ಬಳಿಗಾರ್ ಅವರ ಸಣ್ಣಕಥೆಗಳ ಆಶಯ
ಆರ್.ನಾಗೇಶ್ / ೩೨೭
೬೭. ಮಧು ಬನಿ–ಒಂದಿಷ್ಟು ಸಮಾಲೋಚನೆ
ಡಾ. ರೂತಾ ಪ್ರಭುರಾವ ತಾಳಮಡಗಿ / ೩೩೧
೬೮. ಆಳಂದ ತಾಲ್ಲೂಕಿನ ಪ್ರಮುಖ ಸ್ಥಳನಾಮಗಳು
ಡಾ. ಹಣಮಂತ ಬಿ. ಮೇಲಕೇರಿ / ೩೩೪
೬೯. ಯಾದಗಿರಿ ಜಿಲ್ಲೆಯ ಜವಾಬ್ದಾರಿಯುತ ಕಥೆಗಾರ– ಚಂದ್ರಕಾಂತ ಕರದಳ್ಳಿ
ಹಣಮಂತರಾಯ ಕಾಳಪ್ಪ / ೩೩೮
೭೦. ಡಾ. ಎಸ್.ಎಂ. ಹಿರೇಮಠ ಅವರ ರಂಗ ನಾಟಕಗಳು : ಒಂದು ಅವಲೋಕನ
ನಾಗಮ್ಮ ಹುಲೆಪ್ಪ ಭಂಗರಗಿ / ೩೪೧
೭೧. ನೈತಿಕ ಮೌಲ್ಯಗಳು
ತೆಲುಗು ಮೂಲ: ಕೆ. ಸತ್ಯನಾರಾಯಣ ಕನ್ನಡಾನುವಾದ: ಡಾ.ಮುನಿರಾಜ ಎ./೩೪೪
೭೨. 'ಕ್ರಮಣ' ಅಸ್ಮಿತೆಯ ಹುಡುಕಾಟ ರಾಮಚಂದ್ರಪ್ಪ ವಿ. / ೩೪೯
೭೩. ಶರಣರನ್ನು ನೆನಪಿಸುವ ಡಾ. ಪಲ್ಸು: ಡಾ. ಪ್ರೇಮಾ ಅಪಚಂದ / ೩೫೫
೭೪. ಆಧುನಿಕ ವಚನಕಾರರ ಮೇಲೆ ಪ್ರಾಚೀನ ವಚನಕಾರರ ಪ್ರಭಾವ
ಸುಕನ್ಯಾ ಮಾಣಿಕರಾವ / ೩೫೯
೭೫. ಚಿತ್ತಾಪೂರ ತಾಲ್ಲೂಕಿನ ಪ್ರಮುಖ ಸ್ಥಳಗಳ ಸಾಂಸ್ಕೃತಿಕ ಮಹತ್ವ
ಡಾ. ಹಣಮಂತ ಬಿ. ಮೇಲಕೇರಿ / ೩೬೨
೭೬. ವಡ್ಡರ್ಸೆ ರಘುರಾಮ ಶೆಟ್ಟಿ – ಅಪೂರ್ವ ಚಿಂತಕ
ಡಾ. ಉದಯ ಕುಮಾರ ಶೆಟ್ಟಿ / ೩೬೬
೭೭. ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಶಿಕ್ಷಣದ ಉದ್ದೇಶ ಹಾಗೂ ಸಾಮಾಜಿಕ ಕಾರ್ಯಗಳು ಡಾ ಅರುಣ ವಾಯ್. ಕಾಂಬಳೆ / ೩೭೨
೭೮. ಒಳಗೊಳ್ಳುವ ಶಿಕ್ಷಣ ಮತ್ತು ಪಠ್ಯಕ್ರಮ
ರೇಶ್ಮಾ ಎಂ.ವೈ. / ೩೭೭
೭೯. ತರಗತಿ ಸಂವಹನ – ಕನ್ನಡ ಅಧ್ಯಾಪಕರು ಎದುರಿಸುತ್ತಿರುವ ಸವಾಲುಗಳು: ಪರಿಹಾರಗಳು
* ವಿದ್ಯಾಲಕ್ಷ್ಮಿ ಕೆ. ** ಡಾ. ರತ್ನಾಕರ ಮಲ್ಲಮೂಲೆ / ೩೮೨
೮೦. ಡಿಜಿಟಲ್ ಲೈಬ್ರರಿ– ಒಂದು ಮೇಲ್ನೋಟ ಕಾತ್ಯಾಯಿನಿ.ಎನ್ / ೩೮೬
೮೧. ಆಧುನಿಕ ಸಾರ್ವಜನಿಕ ಗ್ರಂಥಾಲಯ ಸೇವೆಯ ಅನನ್ಯತೆ ಮತ್ತು ವೈಶಿಷ್ಟ್ಯ
ಲೋಕೇಶ ಸಿದ್ರಾಮ, ಡಾ. ವ್ಹಿ.ಟಿ. ಕಾಂಬಳೆ / ೩೯೧
೮೨. ಆನ್ಲೈನ್ ಪುಸ್ತಕ ಸಂಸ್ಕೃತಿ ಮತ್ತು ಡಿಜಿಟಲ್ ಪತ್ರಿಕೆಗಳು
ಡಾ. ರಘುನಂದನ್ ಬಿ.ಆರ್, ಶಂಭೂಗೌಡ ಹೆಚ್.ಸಿ, / ೩೯೬
೮೩. "ಡಿಜಿಟಲ್ ಪರಿಸರ: ಓದುವ ಪದ್ಧತಿ ಬದಲಾಯಿಸುವ ದೃಷ್ಟಿಕೋನ"
ಶ್ರೀ ಸತೀಶಕುಮಾರ ಸಿದ್ರಾಮ, ಡಾ. ಡಿ.ಬಿ. ಪಾಟೀಲ್ / ೪೦೨
೮೪. ಡಿಜಿಟಲ್ ಯುಗದಲ್ಲಿ ಮಾಹಿತಿ ಹುಡುಕಾಟದ ವ್ಯಾಪ್ತಿ ಕೃಷ್ಣ / ೪೦೭

# ಆದಿಪುರಾಣದಲ್ಲಿ ಭರತ-ಬಾಹುಬಲಿಯ ಯುದ್ಧ ಪ್ರಸಂಗ

ಡಾ. ಭೀಮಾಶಂಕರ ಜೋಷಿ, ಕೂಡಲಗಿ

ಆದಿಪುರಾಣದಲ್ಲಿ ಮಹಾಕವಿ ಪಂಪನು ಶಾಶ್ವತವಾದ ಸಂದೇಶವನ್ನು ಸಾರಿದ್ದಾನೆ. ಪುರಾಣದ ಚೌಕಟ್ಟಿನಲ್ಲಿ ಕಾವ್ಯ ಬರೆಯ ಹೊರಟ ಕವಿಯ ಪ್ರತಿಭಾ ವಿಲಾಸಕ್ಕೆ ಅಡೆತಡೆಗಳಿದ್ದರೂ ಆದಿಪುರಾಣ ಅಪವಾದವೆನ್ನುವಂತೆ ರಸದ ಮಡುವಾಗಿದೆ. ರಸಪೂರ್ಣವಾದ ಸನ್ನಿವೇಶಗಳು ಆದಿಪುರಾಣದುದ್ದಕ್ಕೂ ಕಂಡು ಬರುತ್ತವೆ. ಭರತ-ಬಾಹುಬಲಿಯರ ಯುದ್ಧ ಪ್ರಸಂಗವೊಂದು ರಸಘಟ್ಟ. ಆದಿನಾಥನ ಭವಾವಳಿಗಳಲ್ಲಿ ಕವಿಯು ಭೋಗದ ನಿಷ್ಫಲತೆಯನ್ನು ಚಿತ್ರಿಸಿದ್ದರೆ ಭರತ ಚಕ್ರವರ್ತಿಯ ಕತೆಯಲ್ಲಿ ಅಹಂಕಾರವು ಎಷ್ಟು ನಿಷ್ಫಲವಾದುದೆಂಬುದನ್ನು ಚಿತ್ರಿಸಿದ್ದಾನೆ.

ಭರತ-ಬಾಹುಬಲಿಯ ಯುದ್ಧ ಪ್ರಸಂಗ ಆದಿಪುರಾಣದ ಅತ್ಯಂತ ಆಕರ್ಷಕ ಪ್ರಸಂಗ. ನಾಟಕಕ್ಕೆ ಹೇಳಿ ಮಾಡಿಸಿದ ಪ್ರಸಂಗ ಇದಾಗಿದೆ. ವಿಜಯಶಾಸನವನ್ನು ಕೆತ್ತಿಸಿದ ಸಂದರ್ಭದಲ್ಲಿ ಭರತನ ಸೈನ್ಯ ಅಯೋಧ್ಯೆಯತ್ತ ಮುಖ ಮಾಡಿತು. ಇದುವರೆಗೆ ಅಸಂಖ್ಯ ವಿಜಯಗಳನ್ನು ಸಾಧ್ಯವಾಗಿಸಿದ ಚಕ್ರರತ್ನ ಅದೇಕೋ ಅಯೋಧ್ಯೆಯ ಹೊರವಲಯದಲ್ಲಿ ಇದ್ದಕ್ಕಿದ್ದಂತೆ ನಿಂತು ಬಿಟ್ಟಿತು. ಚಿಂತಿತನಾದ ಭರತನು ಚಕ್ರ ನಿಂತದ್ದೇಕೆ? ಎಂದು ಪುರೋಹಿತರನ್ನು ವಿಚಾರಿಸುತ್ತಾನೆ. ನಿನ್ನ ಸ್ವಂತದ ಸಹೋದರರು ನಿನ್ನ ಚಕ್ರವರ್ತಿತ್ವವನ್ನು ಒಪ್ಪಿಲ್ಲವೆಂಬುದನ್ನು ಈ ಚಕ್ರರತ್ನ ಸೂಚಿಸುತ್ತಿದೆಯೆಂದು ಪುರೋಹಿತರು ತಿಳಿಸಿದರು. ಬಹಿರ್ಮಂಡಲಗಳನ್ನು ನೀನು ಕೈವಶ ಮಾಡಿಕೊಂಡಿರುವೆ. ಆದರೆ ಅಂತರ್ಮಂಡಲ ನಿನ್ನ ಕೈವಶವಾಗಿಲ್ಲವಲ್ಲ? ಎಂದು ಪುರೋಹಿತರು ವಿಷಯವನ್ನು ಬಿಡಿಸಿ ಹೇಳಿದರು. ನಿನ್ನ ಅನುಜರೆಲ್ಲರೂ ಸ್ವಾಭಿಮಾನಿಗಳು. ಅದರಲ್ಲೂ ಬಾಹುಬಲಿಯಂತೂ ಅಭಿಮಾನಧನನು! ಅಪ್ಪ ಹಂಚಿಕೊಟ್ಟಿರು ವಂತೆ ನಮ್ಮ ನಮ್ಮ ರಾಜ್ಯದಲ್ಲಿ ನಾವು ಬಾಳುತ್ತಿದ್ದೇವೆ. ಇದಕ್ಕೆ ಯಾರ ಹಂಗೇಕೆ? ಯಾರ ಭಯವೇಕೆ? ಎಂಬ ನಿಲುವು ಬಾಹುಬಲಿಯದಾಗಿದೆ ಎಂದೂ ವಿವರಿಸಿದರು. ಇದನ್ನು ಕೇಳುತ್ತಿದ್ದಂತೆ ಭರತನ ಪಿತ್ತ ನೆತ್ತಿಗೇರಿತು. ತಡಮಾಡದೆ ಬಾಹುಬಲಿಯ ಬಳಿಗೆ ದೂತರನ್ನು ಕಳಿಸಿದ. ಹಿರಿಯಣ್ಣನನ್ನು ಜನಕನೆಂದು ಭಾವಿಸಿ ವಿನಯದಿಂದ ಬಂದು ಶರಣಾಗತರಾಗುವಂತೆ ರಾಜಾಜ್ಞೆಯಾಗಿದೆಯೆಂದು ದೂತ ಬಂದು ಬಾಹುಬಲಿ ಮುಂತಾದ ಸಹೋದರರಿಗೆ ತಿಳಿಸಿದ. "ಈಶ ಶಾಸನವಂನೆತ್ತಿಯೊಳಾಂತು ಬನ್ನಿಂ, ಎರಗಿಂ ಚಕ್ರೇಶ ಪಾದಾಬ್ಜದೊಳ್" ಎಂಬ ಸಂದೇಶವನ್ನು ರವಾನಿಸಿದ. ಇದನ್ನು ಕೇಳಿದ ಭರತನ ಸಹೋದರರು,

**ಪಿರಿಯಣ್ಣಂ ಗುರು ತಂದೆಯೆಂದರಗುವಂ ಮುನ್ನೆಲ್ಲ ಮಿನ್ನೀಗಳಾ**
**ಳರಸೆಂಪ್ರೊಂದು ವಿಭೇದ ಮಾದೊಡೆರಕಂ ಚೀ ಕಷ್ಟಮಲ್ತೆ ವಸುಂ**
**ಧರೆಗಯ್ಯಂ ದಯೆಗೆಯ್ದೆಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ**
**ಕರಭಾವಂ ನಮಗಕ್ಕಿಗೊಟ್ಟು ಮಡಗೊಳುಣ್ಬಂದಮಂ ಪೋಲದೇ**

ಹಿರಿಯಣ್ಣ ಗುರು, ತಂದೆಯೆಂಬುದು ನಮಗೂ ಗೊತ್ತು. ಹಾಗೆಂದೇ ಇದುವರೆಗೆ ಅವನನ್ನು ಗೌರವಿಸುತ್ತ ಬಂದಿದ್ದೇವೆ. ಆದರೆ ಈಗ ಆತ ಅರಸ, ನಾವು ಆಳುಗಳು. ತಂದೆ ಕೊಟ್ಟಿರುವ ಈ ರಾಜ್ಯದ ಕುರಿತಾಗಿ ಭರತನಿಗೇಕೆ ನಾವು ಕಿಂಕರರಾಗಬೇಕು? ಒಂದು ವೇಳೆ ನಾವು ಆತನಿಗೆ ಶರಣಾಗತರಾದರೆ ಅಕ್ಕಿ ನಮ್ಮದಾಗಿದ್ದರೂ ಮಡಗೂಳನ್ನು ಉಣ್ಣುವಂತಾಗುತ್ತದೆ ನಮ್ಮ ಸ್ಥಿತಿ ಎಂದು ಎಲ್ಲ ಸಹೋದರರೂ ಜಿಜ್ಞಾಸೆಗೆ ತೊಡಗುತ್ತಾರೆ. ಬಾಹುಬಲಿಯನ್ನುಳಿದು ಬೇರೆ ಸಹೋದರರೆಲ್ಲ ಭರತನ ವರ್ತನೆಗೆ ಬೇಸತ್ತು ವೈರಾಗ್ಯ ಪರರಾಗುತ್ತಾರೆ. ವಿಷಯ ತಿಳಿದ ಭರತ ಅವಮಾನಿತನೂ ಚಿಂತಿತನೂ ಆಗುತ್ತಾನೆ. ಉಳಿದವರ ವಿಷಯವಿರಲಿ, ಈ ಬಾಹುಬಲಿಯನ್ನು ಹೇಗೆ ಬಗ್ಗಿಸುವುದು? ಮೊದಲು ಸಾಮದಿಂದ ಪ್ರಯತ್ನಿಸಿ ನೋಡುತ್ತೇನೆ. ಅದಕ್ಕೆ ಒಪ್ಪದಿದ್ದರೆ ದಂಡ ಇದ್ದೇ ಇದೆಯಲ್ಲ ಎಂದು ತೀರ್ಮಾನಿಸುತ್ತಾನೆ. ಅದರಂತೆ ತನ್ನ ಇಂಗಿತವನ್ನು ತಿಳಿಸಿ ಸಮರ್ಥನಾದ ದೂತನ ಮೂಲಕ ಬಾಹುಬಲಿಗೆ ಓಲೆಯನ್ನು ಕಳಿಸುತ್ತಾನೆ. ದೂತನ ಮೂಲಕ ಹಾಗೂ ಆತ ತಂದ ಓಲೆಯ ಮೂಲಕ ಬಾಹುಬಲಿಗೆ ಪರಿಸ್ಥಿತಿಯ ಅರಿವಾಯಿತು.

ಬಾಹುಬಲಿಯೂ ಕೋಪದಿಂದ ಸಿಡಿದೆದ್ದ. ಭರತನ ದಿಗ್ವಿಜಯದ ಹಿಂದಿನ ರಹಸ್ಯವನ್ನು ಬಿಚ್ಚಿಟ್ಟನಲ್ಲದೆ ಇದನ್ನೆಲ್ಲ ನಿಮ್ಮ ದೊರೆಗೆ ತಿಳಿಸು ಎಂದು ವ್ಯಂಗ್ಯ ಮಾಡಿದನು. ನಿಮ್ಮ ದೊರೆ ಚಕ್ರರತ್ನವನ್ನು ಮುಂದಿಟ್ಟು ಭಿಕ್ಷಾಟನೆ ಎತ್ತಿದ್ದಾನೆಯೇ ಹೊರತು ಕೆಚ್ಚನ್ನು ಪ್ರದರ್ಶಿಸಿ ರಾಜರನ್ನು ಗೆದ್ದಿಲ್ಲ. ದಿವಿಜರು ಭರತನಿಗೆ ಅಂಜಿ ಧನವನ್ನು ಕೊಟ್ಟಿಲ್ಲ. ಕರುಣಿಸಿ ಕೊಟ್ಟಿದ್ದಾರೆ. ಬೇಡಪಡೆ ಮುತ್ತಿಕೊಂಡಾಗ ಕೊಡೆಯ ಮರೆಯಲ್ಲಿ ಅಡಗಿದ ತನ್ನ ಪರಾಕ್ರಮವನ್ನು ನಿನ್ನ ದೊರೆ ಮರೆತಿದ್ದಾನೆಯೇ? ಇನ್ನೊಬ್ಬ ದೊರೆಯ ಹೆಸರನ್ನು ಅಳಿಸಿ ತನ್ನ ಹೆಸರನ್ನು ಬರೆಯಿಸಿದ ನಿನ್ನ ದೊರೆಯ ಪರಾಕ್ರಮವನ್ನೂ ಇಡೀ ಜಗತ್ತೇ ನೋಡಿದೆ! ದೊರೆಯಾದವನಿಗೆ ನಿಜವಾದ ಧನವೆಂದರೆ ಯಶೋಧನ. ಅಂಥದ್ದರಲ್ಲಿ ನಿಮ್ಮ ದೊರೆ ಪಡೆದ ಧನವು ಏತರದು? ವಾಸ್ತವವಾಗಿ ಅದು ನಿಧನವೇ ಹೊರತು ಧನವಲ್ಲ. ಹೋಗು, ನಾನು ಹೀಗೆಲ್ಲ ಹೇಳಿದುದಾಗಿ ತಿಳಿಸು ನಿನ್ನ ದೊರೆಗೆ ಎಂದು ಬಾಹುಬಲಿ ಆರ್ಭಟಿಸಿದ.

**ಪಿರಿಯಣ್ಣಂಗೆರಗುವುದೇಂ । ಪರಿಭವವೇ ಕೀರಿ ನೆತ್ತಿಯೊಳ್ ಬಾಳಂ ನಿ**
**ಸ್ಸೆರಮೂರಿ ಚಲದಿನೆರಗಿಸ । ಲಿರೆ ಭರತಂಗೆರಗುವೆರಕಮಂಜಮೆಯಲೇ**

ವಾಸ್ತವವಾಗಿ ಹಿರಿಯಣ್ಣನಿಗೆ ಎರಗುವುದು ಸೋಲಲ್ಲ. ಆದರೆ ನಿಮ್ಮ ದೊರೆ ನೆತ್ತಿಯ ಮೇಲೆ ಖಡ್ಗವನ್ನೂರಿ ಒತ್ತಾಯದಿಂದ ಎರಗಿಸಿಕೊಳ್ಳಲು ನಿಂತಿದ್ದಾನೆ. ಹೀಗಿದ್ದಾಗ ಭರತನಿಗೆ ಎರಗುವುದು ಹೇಡಿತನವಾಗುತ್ತದೆ. ಕಾರಣ ಭರತನಿಗೆ ನಾನು ಎರಗುವುದು ಸಾಧ್ಯವಿಲ್ಲ. ಈ ಸ್ಥಿತಿಯಲ್ಲಿ ಭರತನಿಗೆ ಎರಗಿದರೆ ಲೋಕ ನನ್ನನ್ನು ನೋಡಿ ನಕ್ಕೀತು! ಎಂದು ಬಾಹುಬಲಿ ತನ್ನ ಅಚಲ ನಿರ್ಧಾರವನ್ನು ಘೋಷಿಸಿದ. ತಂದೆ ಆದಿನಾಥ ರಾಜ್ಯವನ್ನು ಹಂಚಿಕೊಡುವಾಗ ನಮ್ಮಿಬ್ಬರನ್ನೂ ರಾಜರೆಂದು ಕರೆದಿದ್ದಾನೆ. ಆದರೆ ಈಗ ನಿಮ್ಮ ದೊರೆ ತನ್ನನ್ನು 'ರಾಜಾಧಿರಾಜ' ಎಂಬ ಅಡಕಿಲ ಹೆಸರಿನೊಂದಿಗೆ ಕರೆದುಕೊಳ್ಳುತ್ತಿದ್ದಾನೆ. ಚಕ್ರ ಹುಟ್ಟಿದ ಕಾರಣಕ್ಕಾಗಿ ಮಾತ್ರ ಭರತ ಚಕ್ರೇಶನಾಗಿದ್ದಾನೆಯೇ ಹೊರತು ತನ್ನ ಪರಾಕ್ರಮದಿಂದಲ್ಲ.

ಮಾತಿನಿಂದ ಮಾತಿಗೆ ಬಾಹುಬಲಿಯ ಸಿಟ್ಟು ಏರುತ್ತ ಹೋಯಿತು. ಸ್ವಾಭಿಮಾನದ ಜ್ವಾಲೆ ಉರಿಯತೊಡಗಿತು. ಹೆಚ್ಚಿಗೆ ಮಾತೇನು? ಅರಣ್ಯದಲ್ಲಿ ಹುಲಿ ಜಿಂಕೆಯನ್ನು ಬೇಟೆಯಾಡುವಾಗ ಹಾಡುವ ಹಾಡನ್ನು ಮೃಗವಿರೋಧಿಗೆ (ಸಿಂಹಕ್ಕೆ) ಹಾಡುವುದೇ? ಯಾರು ಹೆಚ್ಚೆಂಬುದನ್ನು ನಾಳೆ ಯುದ್ಧದಲ್ಲಿ ತೋರಿಸುತ್ತೇನೆ. ನನ್ನ ಭುಜದಂಡವನ್ನೇ ತುಲಾದಂಡವನ್ನಾಗಿ ತೂಗಿ ತೋರಿಸುತ್ತೇನೆ ಕಳಿಸು ನಿನ್ನ ದೊರೆಯನ್ನು ಯುದ್ಧ ಭೂಮಿಗೆ; ಬಾಹುಬಲಿ ಯಾರೆಂಬುದು ಅಲ್ಲಿಯೇ ಪ್ರಕಟವಾಗಲಿ ಎಂದು ಅಬ್ಬರಿಸಿದ. ಇದೆಲ್ಲವನ್ನು ಕೇಳಿದ ದೂತ ನಿರುತ್ತರನಾಗಿ ಅಯೋಧ್ಯೆಗೆ ತೆರಳಿ ನಡೆದ ಪ್ರಸಂಗಗಳನ್ನು ಚಕ್ರವರ್ತಿಗೆ

ಡಾ. ಭೀಮಾಶಂಕರ ಜೋಷಿ, ಕೂಡಲಗಿ, ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

ತಿಳಿಸಿದ. ನೀನು ಶತಪ್ರಯತ್ನ ಮಾಡಿದರೂ ನಿನ್ನ ತಮ್ಮ ಬಾಹುಬಲಿ ನಿನಗೆ ಎರಗುವಂತೆ ತೋರುತ್ತಿಲ್ಲ ಎಂದು ತಿಳಿಸಿಬಿಟ್ಟ, ಯುದ್ಧ ಅನಿವಾರ್ಯವಾಯಿತು. ಭರತ ಯುದ್ಧ ಭೇರಿಯನ್ನು ಹೊಡೆಯಿಸಿದ. ಆನೆ, ಕುದುರೆ, ರಥ, ಕಾಲಾಳು ಈ ಚತುರ್ಬಲಗಳು ಸನ್ನದ್ಧವಾದವು, ಆಯುಧಗಳು ಮಸೆಯಲ್ಪಟ್ಟವು. ಭರತನ ಸೈನ್ಯ ಪೌದನಪುರದತ್ತ ಪ್ರಯಾಣ ಬೆಳೆಸಿತು. ಇತ್ತ ಬಾಹುಬಲಿಯ ಸೈನ್ಯವೂ ಎದುರಾಯಿತು. ಇನ್ನೇನು ಎರಡೂ ಪಡೆಗಳ ಕಾದಾಟದಿಂದ ಆಗಬಾರದ ಅನಾಹುತಗಳೆಲ್ಲ ಆಗಿ ಹೋಗುವ ಕಾಲ ಸನ್ನಿಹಿತವಾಯಿತು. ಇಬ್ಬರೂ ಶೂರರು, ಇಬ್ಬರೂ ಚರಮದೇಹಧಾರಿಗಳು, ಇಬ್ಬರಲ್ಲಿ ಗೆಲ್ಲುವವರೂ ಇಲ್ಲ, ಸೋಲುವವರೂ ಇಲ್ಲ. ಏನಿದ್ದರೂ ಸೋಲಬೇಕಾದುದು ಸಾಯಬೇಕಾದುದು ಚತುರಂಗ ಬಲ ಮಾತ್ರ. ಇದನ್ನರಿತು ಎರಡೂ ಪಡೆಗಳ ಪ್ರಜ್ಞಾವಂತ ಮಂತ್ರಿಮುಖ್ಯರು ಬಲಾಬಲದ ಪ್ರದರ್ಶನ ನೇರವಾಗಿ ಭರತ–ಬಾಹುಬಲಿ ಇವರಿಬ್ಬರ ನಡುವೆ ಮಾತ್ರ ನಡೆಯಲಿ; ಅದೂ ಅಹಿಂಸಾತ್ಮಕ ನೆಲೆಯಲ್ಲಿ ಎಂದು ಸಮಯೋಚಿತ ನಿರ್ಧಾರಕ್ಕೆ ಬರುತ್ತಾರೆ. ಭರತ– ಬಾಹುಬಲಿ ಇಬ್ಬರೂ ಅದನ್ನು ಒಪ್ಪಿಕೊಳ್ಳುತ್ತಾರೆ. ಪಂಪನಿಗೂ ಜಿನ–ಧರ್ಮಪರವಾದ ತನ್ನ ಅಹಿಂಸಾತ್ಮಕ ನಿಲುವನ್ನು ಪ್ರತಿಪಾದಿಸಲು ಯೋಗ್ಯ ಅವಕಾಶ ದೊರೆಯಿತು. ಪಂಪ ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ ಯುದ್ಧ ವಿರೋಧಿ ನಿಲುವುಗಳು ಆದಿಪುರಾಣದ ತೂಕವನ್ನು ಇಮ್ಮಡಿಗೊಳಿಸಿವೆ. ಅಹಿಂಸೆಯಿಂದ ಮಾತ್ರ ವಿಶ್ವಶಾಂತಿ ಸಾಧ್ಯ ಎಂಬುದನ್ನು ಪಂಪ ಇಲ್ಲಿ ತುಂಬಾ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾನೆ. ತನಗೆ ದೊರೆತ ಇಂಬನ್ನು ಪಂಪ ಇನ್ನಷ್ಟು ವಿಸ್ತರಿಸಿಕೊಂಡಿದ್ದಾನೆ. ಮಂತ್ರಿಮುಖ್ಯರ ಮೂಲಕ ಪಂಪ ಹೇಳಿಸಿದ ಈ ವಿಚಾರಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. "ಯುದ್ಧವೆಂಬುದು ಅತಿಕ್ರೂರ ಗ್ರಹಯುದ್ಧದಂತೆ, ಅದು ಸರಳ ಪ್ರಜಾ–ವಿನಾಶಕಾರಿಯಲ್ಲದೆ ಪೆರತಲ್ತು ಚತುರಂಗದ ಬಲಯುದ್ಧದೊಳ್ಗದೆ ಗೆಲ್ಲ ಸೋಲವೆಂಬುದಿಲ್ಲ. ಸಮಸ್ತ ಜನ ಸಂಹರಣ ಕಾರಣಮಪ್ಪ ರಣದೊಳೇವಂದಪುದು?" ಎಂಬ ಮಾತುಗಳು ಯುದ್ಧ ವಿರೋಧೀ ಧೋರಣೆಯ ಘೋಷವಾಕ್ಯಗಳಂತಿವೆ. ಅಂತೆಯೇ;

**ಜಯಮಂ ಕೈಕೊಳ್ವುದು ದೃ । ಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧದೊಳೆ ಜನ**
**ಕ್ಷಯಕರಣದೊಳೇಂ ಪಾಪ ಮು । ಮಯಶಮುಮಪ್ಪನಿತೆ ದೇವ ಕಡೆಗ೯ಳಿಪುದಿದಂ**

ಸಮಕಾಲೀನ ಜಾಗತಿಕ ಸಂದರ್ಭಕ್ಕೆ ಅನ್ವಯಿಸಿ ನೋಡಿದರೆ ಈ ಪ್ರಸಂಗದ ಮೂಲಕ ಪಂಪನು ಬಲಾಢ್ಯ ರಾಷ್ಟ್ರಗಳಿಗೆ ಬುದ್ಧಿವಾದ ಮಾಡುವವನಂತೆ ಕಂಡು ಬರುತ್ತಾನೆ. ಪಂಪನ ಕಾವ್ಯ ಇಂದಿಗೂ ಪ್ರಸ್ತುತವೆನ್ನಿಸುವುದು ಇಂಥ ಮೌಲಿಕ ವಿಚಾರಗಳಿಂದಾಗಿಯೇ! ಮೊದಲನೆಯದಾಗಿ, ದೃಷ್ಟಿಯುದ್ಧ. ಎರಡೂ ಕಡೆಯ ಸೈನಿಕರು ಭರತ–ಬಾಹುಬಲಿಯನ್ನು ಎವೆ ಮಿಡುಕದೆ ನೋಡುತ್ತಿದ್ದಾರೆ. ಬಾಹುಬಲಿ ಕಣ್ಣಿನಲ್ಲಿಯೇ ಭರತನನ್ನು ಹೀರುವಂತೆ ನೋಡುತ್ತಿದ್ದಾನೆ. ಬಾಹುಬಲಿಯ ತೇಜಃಪುಂಜವೇ ಕಣ್ಣಲ್ಲಿ ಕುಕ್ಕಿದಂತೆ ಭಾಸವಾದ ಕಾರಣ ಭರತ ಕೆಲವೇ ಕ್ಷಣಗಳಲ್ಲಿ ದೃಷ್ಟಿಯುದ್ಧದಲ್ಲಿ ಸೋತ.

ಅನಂತರದ್ದು ಜಲಯುದ್ಧ. ಎರಡು ಮದ್ದಾನೆಗಳು ಸರೋವರದಲ್ಲಿ ಧುಮುಕುವಂತೆ ಭರತ–ಬಾಹುಬಲಿಯರು ಕೊಳವನ್ನು ಪ್ರವೇಶಿಸಿದರು. ಪರಸ್ಪರ ನೀರೆರಚಾಟ ನಡೆಯಿತು. ಬಾಹುಬಲಿ ಎರಚಿದ ನೀರು ಭರತನ ಕೋಪಾವೇಶದ ಬೆಂಕಿಯನ್ನು ಆರಿಸಿಬಿಟ್ಟಿತಂತೆ! ಬಾಹುಬಲಿ ಭರತನ ಮುಖಕ್ಕೆ ನೀರು ಎರಚಿದ ಕಾರಣವಾಗಿ ಭರತನ ಉಸಿರು ಕಟ್ಟಿತಂತೆ ಹೀಗಾಗಿ ಜಲಯುದ್ಧದಲ್ಲೂ ಭರತ ಸೋತ. ಅನಂತರದ್ದು ಮಲ್ಲಯುದ್ಧ. ಕನಕಾಚಲದಂತಿದ್ದ ಬಾಹುಬಲಿ ತನ್ನೆಲ್ಲ ಮಲ್ಲಯುದ್ಧದ ಪಟ್ಟುಗಳನ್ನು ಬಳಸಿ ಭರತನನ್ನು ತಲೆಯೆತ್ತರಕ್ಕೆ ಎತ್ತಿ ಇನ್ನೇನು ಭೂಮಿಗೆ ಬಿಸಾಡುವುದರಲ್ಲಿದ್ದ. ಅಷ್ಟರಲ್ಲಿ ಅವನಲ್ಲಿ ವಿವೇಕ ಜಾಗೃತವಾಯಿತು.



**ಭರತಾವನೀಶ್ವರಂ ಗುರು । ಪಿರಿಯಣ್ಣಂ ಚಕ್ರವರ್ತಿ ಮಹಿಮಾರಕನೀ**
**ದೊರೆಯನುಮಳವಳಿಯೆ ವಸುಂ । ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ॥**

ಎಷ್ಟೇ ಆದರೂ ಭರತ ನನ್ನ ಹಿರಿಯಣ್ಣ, ಗುರು, ಚಕ್ರವರ್ತಿ, ಮಹಿಮಾಕರ ಇಂಥವನನ್ನು ಭೂಮಿಗೆ ಬಿಸಾಡಿ ಭಂಗಗೊಳಿಸುವುದು ತರವಲ್ಲ ಎಂದು ನಿರ್ಣಯಿಸಿದ ಬಾಹುಬಲಿ ಭರತನನ್ನು ನಯವಾಗಿ ನೆಲಕ್ಕಿಳಿಸಿದ. ತುಂಬಿದ ಸೈನ್ಯದೆದುರು ತನಗಾದ ಅಪಮಾನವನ್ನು ಸಹಿಸಲಾರದ ಭರತ ಇದ್ದಕ್ಕಿದ್ದಂತೆ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದ! ಆದರೆ ಚಕ್ರರತ್ನ ಬಾಹುಬಲಿಗೆ ಮೂರು ಪ್ರದಕ್ಷಿಣೆ ಹಾಕಿ ತೆಪ್ಪಗೆ ನಿಂತು ಬಿಟ್ಟಿತು. ಪಂಪ ತಾನು ಹೇಳಬೇಕಾದುದನ್ನು ಜನರಿಂದ ಹೇಳಿಸಿದ "ತನ್ನಗಲ್ಲಮುದಂ ಮಾಡಿದ ನಿನಿತಂ ಚಕ್ರೇಶಂ" ಎಂದೂ ಇಲ್ಲಿಯೂ ಪಂಪ ಒಬ್ಬ ಮನೋವಿಜ್ಞಾನಿಯಾಗಿ ಭರತನ ಈ ಪ್ರಸಂಗವನ್ನು ವಿಶ್ಲೇಷಿಸಿದ್ದಾನೆ.

ಅತ್ತ ಭರತನ ವರ್ತನೆಯನ್ನು ಕಂಡ ಬಾಹುಬಲಿ ಅಂತರ್ಮುಖಿಯಾದ. ಈ ಅಧಿಕಾರಲಾಲಸೆ ಹಾಗೂ ರಾಜ್ಯಮೋಹಗಳು ಎಂಥೆಂಥ ಅನಾಹುತಗಳನ್ನು ಮಾಡಿಸಿ ಬಿಡುತ್ತವೆಯಲ್ಲ ಎಂದು ಆತ ಚಿಂತಿಸತೊಡಗಿದ ವಿಚಾರ ಪ್ರಖರವಾಯಿತು. ವೈರಾಗ್ಯದ ಝರಿ ಹರಿಯತೊಡಗಿತು. ಈ ಸಂದರ್ಭದಲ್ಲಿ ಬಾಹುಬಲಿಯ ಅಂತರ್ ನಿರೀಕ್ಷಣೆಯ ರೂಪದಲ್ಲಿ ಪಂಪ ಹೇಳಿಸಿದ ಒಂದೊಂದೂ ಮಾತು ಮಹಾಕಾವ್ಯ ಆಗಿದೆಯನ್ನಬಹುದು.

**ಕಳೆದಿಡುವುದು ಕಷ್ಟಂ ಭೂ । ತಳ ರಾಜ್ಯ ವಿಮೋಹಮಚಿರರುಚಿ ಸಂಚಳಮಿಂ**
**ತಳವುಗಿಡಿಸಿದುದು ಮನುಕುಲ । ತಿಳಕನುಮಂ ಖಳಮಹೀಶರುಳಿದವರಳವೇಂ॥**

ಚಂಚಲೆಯಾದ ರಾಜ್ಯಲಕ್ಷ್ಮೀ ಭರತನಂಥವರನ್ನೇ ಈ ರೀತಿ ಅಳುವುಗೆಡಿಸಿದ್ದಾಳೆಂದು ಬಳಿಕ ಸಾಮಾನ್ಯ ದೊರೆಗಳ ಪಾಡೇನು? ಈ ಪದ್ಯದ ಭಾವದಷ್ಟೇ ಸೊಗಸು ಅದರ ರಚನೆಯಲ್ಲಿರುವುದನ್ನೂ ನಾವು ಗುರುತಿಸಬೇಕು. ಇಲ್ಲಿ ಒಂದು ಶಬ್ದವನ್ನು ತೆಗೆಯುವುದೂ ಸಾಧ್ಯವಿಲ್ಲ, ಹಾಕುವುದೂ ಸಾಧ್ಯವಿಲ್ಲ! ಸಮಪ್ರಮಾಣದ ಕನ್ನಡ–ಸಂಸ್ಕೃತ ಪದಗಳ ಅಪೂರ್ವ ಮಿಶ್ರಣ ಇಲ್ಲಿದೆ. ಭಾವಕ್ಕಿಂತ ಭಾಷೆ ಸೊಗಸು ಭಾಷೆಗಿಂತ ಭಾವ ಸೊಗಸು. ಇದು ಪಂಪನ ಸಹಜ ಕವಿತ್ವದ ಸೃಷ್ಟಿ !

**ಸೋದರರೊಳ್ ಸೋದರರಂ । ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು**
**ತ್ಪಾದಿಸುವುದು ಕೋಪಮನ । ಳವೀದೊರೆತನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ॥**

ಈ ರಾಜ್ಯಲಕ್ಷ್ಮೀ ಸೋದರ– ಸೋದರರನ್ನು ಕಾದಾಡಿಸುತ್ತಾಳೆ. ತಂದೆ– ಮಕ್ಕಳ ನಡುವೆ ಕೋಪಕ್ಕೆ ಕಾರಣಳಾಗುತ್ತಾಳೆ. ಹೀಗಿದ್ದಾಗ ಇವಳೊಂದಿಗೆ ಹೇಗೆ ವರ್ತಿಸುವುದು? ಕಾರಣ ಇವಳ ಗೊಡವೆಯೇ ಬೇಡ ಎಂದು ಬಾಹುಬಲಿ ನಿರ್ಧರಿಸಿದ. ಈ ರಾಜ್ಯಲಕ್ಷ್ಮೀ ಪಾತಕಿ ಚಂಚಲೆ. ನಾನಂತೂ ಇವಳ ಮೋಹಪಾಶಕ್ಕೆ ಸಿಲುಕುವವನಲ್ಲ ಭರತ ಬೇಕಾದರೆ ಇವಳೊಂದಿಗೆ ಕೂಡಿ ಸುಖಿಸಲಿ ಎಂದು ತೀರ್ಮಾನಿಸಿದ. ಬಾಹುಬಲಿ ಈ ಕೆಡುವ ಶರೀರ ಮತ್ತು ಕೆಡುವ ರಾಜ್ಯ ಸುಖವನ್ನು ಬೆನ್ನು ಹತ್ತಲು ನನ್ನ ಮನಸ್ಸು ಹೇಸಿಕೆ ಪಡುತ್ತಿದೆ. ಕಾರಣ ಈಗಲೇ ಜೈನ ದೀಕ್ಷೆಯನ್ನು ಪಡೆದು ದೇವಾಧಿದೇವತೆಗಳಿಂದ ಪೂಜಿಸಲ್ಪಡುತ್ತೇನೆ ಎಂದು ದೃಢ ನಿಲುವನ್ನು ತಾಳಿದನು.

ಪಂಪನ ಅಧ್ಯಯನ ಆರಂಭವಾದ ದಿನದಿಂದಲೂ ಸಹೃದಯ ಓದುಗರ ಮೆಚ್ಚಿಗೆ ಪಾತ್ರವಾಗಿರುವ ಪ್ರಸಿದ್ಧ ಪದ್ಯವೊಂದು ಈ ಪ್ರಸಂಗದಲ್ಲಿ ಬರುತ್ತವೆ.

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಯಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮೀ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದುನೆಗಳ್ತೆ ಮಾಸದೇ॥

ವ್ಯಾಖ್ಯಾನಿಸಿದಷ್ಟೂ ವಿಸ್ತಾರವಾಗುತ್ತ ಹೋಗುತ್ತದೆ. ಮನೋಹರಿಯಾದ ಈ ರಾಜ್ಯಲಕ್ಷ್ಮೀ ಚಂಚಲತೆಯೂ ಆಗಿದ್ದಾಳೆ. ಭಟರ ಖಡ್ಗ ಸಮೂಹವೆಂಬ ಕಮಲದ ಮೇಲೆ ಹಾರಾಡುವ ದುಂಬಿ ಇವಳು! ಈ ರಾಜ್ಯಲಕ್ಷ್ಮೀ ನಿನ್ನ ಎದೆಯಲ್ಲಿ ನಿಶ್ಚಲವಾಗಿ ನೆಲೆಸಲಿ ಎಂದು ಬಾಹುಬಲಿ ಹಾರೈಸುತ್ತಾನೆ. ಈ ರಾಜ್ಯಲಕ್ಷ್ಮೀ ನೀನು ಮೋಹಿಸಿದ ಹೆಣ್ಣು, ನೀನು ಮೋಹಿಸಿದವಳನ್ನು ನಾನು ಮೋಹಿಸಿದೆನಾದರೆ ನನ್ನ ಕೀರ್ತಿ ಮಣ್ಣುಪಾಲಾಗುತ್ತದೆ. ಕಾರಣ ಈ ರಾಜ್ಯಲಕ್ಷ್ಮಿಯನ್ನು ನಿನಗೇ ಬಿಟ್ಟುಕೊಡುತ್ತೇನೆ ಎಂದು ಬಾಹುಬಲಿ ಘೋಷಿಸಿದ. ಇಲ್ಲಿಯ 'ನಿಶ್ಚಲ' ಎಂಬ ಶಬ್ದ ವಿಶೇಷಾರ್ಥವನ್ನು ಹೊಂದಿದೆ. ಈ ರಾಜ್ಯಲಕ್ಷ್ಮೀ ನಿಶ್ಚಲವಾಗಿ ನಿನ್ನ ಎದೆಯಲ್ಲಿ ನೆಲೆಸಲಿ ಎಂಬುದು ಹೊರ ಅರ್ಥವಾದರೆ, ಸ್ವಭಾವತಃ ನಿಶ್ಚಲೆಯಾಗಿರುವ ಇವಳು ನಿನ್ನ ಎದೆಯಲ್ಲಿ ಶಾಶ್ವತವಾಗಿ ನೆಲೆಸುವುದು ಸಾಧ್ಯವಿಲ್ಲ ಎಂಬುದು ಒಳ ಅರ್ಥವಾಗಿದೆ. ಮನಸ್ಸನ್ನು ತಿಳಿಗೊಳಿಸಿಕೊಂಡ ಬಾಹುಬಲಿ ಅಣ್ಣನಲ್ಲಿ ಕ್ಷಮೆ ಯಾಚಿಸುತ್ತಾನೆ.

ಅವಧರಿಸದೆ ನಿನ್ನೊಳ್ ಪಿರಿ । ದವಿನಯಮಂ ನೆಗಲ್ದ ದೋಷಮಂ ತಪದೊಳ್ ನೀ
ಗುವೆನಣ್ಣ ಕಲುಷಮಂ ಬಿಸು । ಡುವುದೊರ್ಮೆಗೆ ಮರೆವುದೆನ್ನ ದುರ್ವಿಳಸನಮಂ॥

ಸ್ವಾಭಿಮಾನದ ದುಡುಕಿನಿಂದ ನಿನ್ನೊಂದಿಗೆ ಅವಿನಯದಿಂದ ವರ್ತಿಸಿದ್ದೇನೆ. ದಯವಿಟ್ಟು ನನ್ನ ಅವಿನಯವನ್ನು ಮನ್ನಿಸು ಎಂದು ಹೇಳಿ ಯುದ್ಧ ಮಾಡಿ ಗೆದ್ದಿದ್ದ ರಾಜ್ಯವನ್ನು ಭರತನಿಗೆ ಕೊಟ್ಟುಬಿಡುತ್ತಾನೆ.

ಈ ಪ್ರಸಂಗವು ಪಂಪನ ಶ್ರೇಷ್ಠವಾದ ಪ್ರತಿಭೆಗೆ ನಿದರ್ಶನವಾಗಿದೆ. ಈ ಇಬ್ಬರ ಪಾತ್ರವನ್ನು ಕವಿ ಅತ್ಯಂತ ಸುಮಧುರವಾಗಿ ಚಿತ್ರಿಸಿದ್ದಾನೆ. ತನ್ನನ್ನು ಎದುರಿಸುವರೇ ಇಲ್ಲವೆಂದು ಅಹಂಕಾರಗೊಳ್ಳುವ ಭರತ ಅವನನ್ನೇ ಗೆದ್ದರೂ ಉದಾರವಾಗಿ ರಾಜ್ಯವನ್ನು ಅಣ್ಣನಿಗೆ ದಾನ ಮಾಡಿಬಿಡುವ ಬಾಹುಬಲಿ–ಅವರಿಬ್ಬರ ನಡವಳಿಕೆಯು ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಈ ರೀತಿ ಪಂಪನ 'ಆದಿಪುರಾಣವು' ಪುರಾಣದ ಲಕ್ಷಣವನ್ನು ಅನುಸರಿಸಿ ರಚಿತವಾಗಿದ್ದರೂ, ಅದನ್ನು ಬರೆದವನು ಶ್ರೇಷ್ಠ ಕವಿಯಾದ್ದರಿಂದ ಅಲ್ಲಲ್ಲಿ ಉತ್ತಮ ಕಾವ್ಯ ಗುಣಗಳಿಂದ ಕೂಡಿದೆ. ಪಂಪನ ಗುರಿಯೂ ಇದೆ. 'ನೆಗಳ್ದಾದಿ ಪುರಾಣದೊಳರಿವುದು ಕಾವ್ಯಧರ್ಮಮಂ ಧರ್ಮಮುಮಂ" ಎಂಬ ಕವಿಯ ಉದ್ದೇಶವಿಲ್ಲಿ ಸಫಲವಾಗಿದೆ.


ಆಕರ ಗ್ರಂಥಗಳು

೧. ಪಂಪ ಒಂದು ಅಧ್ಯಯನ, ಡಾ. ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು, ವಿಶ್ವವಿದ್ಯಾಲಯ, ೧೯೭೪
೨. ಆದಿಪುರಾಣ– ಪಿ.ವಿ. ನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೮
೩. ಪಂಪಭಾರತಂ– ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ೨೦೧೮
೪. ಚಂಪೂ ಕವಿಗಳು– ಪಿ.ವಿ.ನಾರಾಯಣ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೦
೫. ಕನ್ನಡ ಸಾಹಿತ್ಯ ಚರಿತ್ರೆ– ತ.ಸು. ಶಾಮರಾಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೧೯೯೭




# 'ಪಂಪ ಭಾರತ'–ಒಂದು ಸಾಂಸ್ಕೃತಿಕ ಅಧ್ಯಯನ : ಪಕ್ಷಿನೋಟ

ರಶ್ಮಿ ದೇವಾಪುರ

ಕನ್ನಡದ ಆದಿಕವಿಯಾದ ಪಂಪನ ಬಗ್ಗೆ ಈವರೆಗೂ ಆಗಿರುವ ಅನೇಕ ಅಧ್ಯಯನಗಳಲ್ಲಿ ಪ್ರಮುಖವಾಗಿ ಜಿ.ಎಸ್. ಶಿವರುದ್ರಪ್ಪನವರು ಸಂಪಾದಿಸಿದ 'ಪಂಪ ಒಂದು ಅಧ್ಯಯನ', ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ', ಶಾಂತಿನಾಥ ದಿಬ್ಬದ ಅವರ 'ಪಂಪಭಾರತ: ಒಂದು ಸಾಂಸ್ಕೃತಿಕ ಅಧ್ಯಯನ' ಹಾಗೂ ಎಚ್.ಎಸ್. ಶ್ರೀಮತಿಯವರ 'ಹಳಗನ್ನಡ ಸಾಹಿತ್ಯಾಧ್ಯಯನ ಸಮೀಕ್ಷೆ' ಎಂಬ ಸಂಶೋಧನಾ ಕೃತಿಗಳನ್ನು ಗಮನಿಸಬಹುದು. ಇವುಗಳನ್ನು ಹೊರತುಪಡಿಸಿಯೂ ಬಿಡಿಬಿಡಿಯಾಗಿ ಅನೇಕ ಲೇಖನಗಳು ಬಂದಿರುವುದನ್ನೂ ಗಮನಿಸಬಹುದು.

ಪ್ರಸ್ತುತ ನಾವು ಹಳಗನ್ನಡ, ಶಾಸನ ಮತ್ತು ಶಾಸ್ತ್ರಕೃತಿಗಳೆಂದರೆ ಮೂಗು–ಮುರಿಯುವ ಕಾಲದಲ್ಲಿದ್ದೇವೆ. ಇದುವರೆಗೂ ನಡೆದಿರುವ ಅಧ್ಯಯನಗಳನ್ನು ಸಮೀಕ್ಷೆ ಮಾಡಿದರೆ ಹಳಗನ್ನಡವನ್ನು ಕುರಿತು ಆಗಿರುವ ಅಧ್ಯಯನವು ಕೇವಲ ಶೇ.೧೦ಕ್ಕಿಂತ ಕಡಿಮೆ ಎಂಬುದು ವಿಷಾದದ ಸಂಗತಿ. ಹಾಗಾಗಿ ಹಳಗನ್ನಡ ಸಾಹಿತ್ಯದ ಅಧ್ಯಯನವು ನನ್ನ ಪ್ರಕಾರ ಒಂದು ಸವಾಲಿನ ಕೆಲಸವೇ ಸರಿ. ಹಳಗನ್ನಡವನ್ನು ತಮ್ಮ ಸಂಶೋಧನ ಅಧ್ಯಯನಕ್ಕೆ ಆರಿಸಿಕೊಳ್ಳುವವರಿಗೆ ಮೊದಲಿಗೆ ಒಂದು ಬಗೆಯ ಮಾನಸಿಕ ಸಿದ್ಧತೆ ಮತ್ತು ಧೈರ್ಯ ಈ ಎರಡೂ ಬೇಕು ಅನ್ನುವುದು ಗಮನಾರ್ಹ ಅಂಶ.

ಇದುವರೆಗೂ ಬಂದಿರುವ ಕನ್ನಡದ ಸಂಶೋಧನಾ ಪ್ರಬಂಧ ಮತ್ತು ಲೇಖನಗಳ ಪಟ್ಟಿಗಳನ್ನು ಗಮನಿಸಿದರೆ ಆ ಸಂಶೋಧನೆಗಳು ಕವಿಯನ್ನು ಆಧರಿಸಿಯೋ, ಕೃತಿಗಳನ್ನು ಆಧರಿಸಿಯೋ, ಕೃತಿಯೊಳಗಿನ ವಸ್ತುವನ್ನು ಆಧರಿಸಿಯೋ ಅಥವಾ ಧರ್ಮವನ್ನು ಆಧರಿಸಿಯೋ... ಹಳಗನ್ನಡ ಸಾಹಿತ್ಯ ಕುರಿತು ಹಲವಾರು ನೆಲೆಯಲ್ಲಿ ಸಂಶೋಧನೆಗಳು ನಡೆದಿರುವುದು ನಮ್ಮ ಗಮನಕ್ಕೆ ಬಂದಿರುವ ಸಂಗತಿಯೇ.

ಈ ನಿಟ್ಟಿನಲ್ಲಿ ನೋಡುವುದಾದರೆ ಶಾಂತಿನಾಥ ದಿಬ್ಬದ ಅವರು ಹಳಗನ್ನಡ ಕವಿ ಪಂಪನ 'ಪಂಪ ಭಾರತ' ಎಂಬ ಒಂದೇ ಒಂದು ಕೃತಿಯನ್ನು ಇಟ್ಟುಕೊಂಡು ಅದರ ಸಾಂಸ್ಕೃತಿಕ ಅಧ್ಯಯನ ಮಾಡಿರುವುದು ಬಹಳ ಮಹತ್ವದ ಸಂಗತಿಯಾಗಿದೆ. ಪ್ರಸ್ತುತ ಲೇಖನದಲ್ಲಿ ಇವರ 'ಪಂಪ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಪ್ರಬಂಧದ ಬಗ್ಗೆ ಪರಿಚಯಾತ್ಮಕ ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಈ ಸಂಶೋಧನ ಪ್ರಬಂಧದಲ್ಲಿ ಲೇಖಕರು 'ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ'ಯ ಪ್ರಕರಣವನ್ನು ಹೊರತುಪಡಿಸಿ ಒಟ್ಟು ನಾಲ್ಕು ಪ್ರಕರಣಗಳಲ್ಲಿ ಪಂಪ ಭಾರತವನ್ನು ಸಾಂಸ್ಕೃತಿಕ ದೃಷ್ಟಿಯಿಂದ ವಿಶ್ಲೇಷಿಸಿಕೊಂಡು ಹೋಗುವ ಪ್ರಯತ್ನ ಮಾಡಿದ್ದಾರೆ. ಈ ಸಂಶೋಧನೆಯ ಅಧ್ಯಾಯಗಳನ್ನು ಪ್ರಕರಣಗಳೆಂದು ಕರೆದಿರುವುದು ವಿಶೇಷ.

**ರಶ್ಮಿದೇವಾಪುರ, ಸಂಶೋಧನಾ ವಿದ್ಯಾರ್ಥಿನಿ,**
ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ISSN: 2348-7666
Volume - 8, Issue 7(2), July, 2021
Impact Factor: 6.023


Monthly

# International Journal of Academic Research

VOICE OF INTELLECTUALS

## PEER REVIEWED JOURNAL

Editor
Dr. Haniyuru Chandre Gowda
Associate Professor in Kannada, National Tribals & Folkloric Researcher
Director & Head, Birsa Munda Tribals Community Development &
Research Center (BMTC-DRC), Bengaluru




Multidisciplinary, Multiple Languages
Refereed and Indexed Journal

Editor-in-Chief
Dr. T.V. Ramana

# Content

**Volume 8** **Issue 7(2)** **July 2021**


| Sl. No | | Page No. |
|---|---|---|
| 1 | ಕನ್ನಡ ಗದ್ಯಶಾಸನಗಳ ಸಾಹಿತ್ಯಕ ಅಧ್ಯಯನ –ಡಾ.ಜಯರಾಮಯ್ಯ ವಿ. | 1 |
| 2 | E-Governance Initiatives In Karnataka State: A Summary -Madhusudhan .G | 9 |
| 3 | ಸ್ತ್ರೀ ಸಮಾಜದ ಉದ್ಧಾರಕ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ –ಡಾ. ಹೆಚ್.ವಿ.ಶಾಂತರಾಜು | 17 |
| 4 | Conceptualizing the Myth of Ekalavya -Dr.Narasimharaju K. | 20 |
| 5 | ಕನಕದಾಸರಲ್ಲಿ 'ವಾಲ್ಮೀಕಿ ರಾಮಾಯಣ'ದ ಮರುನಿರೂಪಣೆ: ಪುರಾಣ–ವರ್ತಮಾನಗಳ ಮುಖಾಮುಖಿ –ಡಾ.ನಿಂಗಪ್ಪ ಮುದೇನೂರು | 31 |
| 6 | India's Falling Co2 Emissions – Is It A Flash In The Pan? -Narayana Das | 36 |
| 7 | ಕೀರ್ತಿನಾಥ ಕುರ್ತಕೋಟಿ ಅವರ ವಿಮರ್ಶೆ ವಿನ್ಯಾಸಗಳು –ಡಾ.ಮಹಾಂತೇಶ ಪಾಟೀಲ | 45 |
| 8 | Relationship Between India And China (1952 -2017): A Critical Analysis -Amar .S | 51 |
| 9 | ಹಳಗನ್ನಡ ಕಾವ್ಯ ಸ್ವರೂಪ –ಡಾ.ಜೋಗಿನಕಟ್ಟೆ ಮಂಜುನಾಥ | 57 |
| 10 | Employment Guarantee Program: Gender Related Review -Dr.Bheemesh Machanur | 61 |
| 11 | ಬಹುಮುಖಿ ಉತ್ಪನ್ನ ವಚನ ಚಳುವಳಿ: ಒಂದು ಅವಲೋಕನ –ಮಲ್ಲಿಕಾರ್ಜುನ ಎಚ್.ಎಂ | 66 |
| 12 | Gandhi In Indian Fiction With Reference To Mulkraj Anand -K.M. Jayanthi | 78 |
| 13 | ಡಾ.ಸಿದ್ಧಲಿಂಗಯ್ಯ ಅವರ ಹೋರಾಟದ ಹಾಡುಗಳು –ಲೋಹಿತ್.ಪಿ | 84 |
| 14 | The Ekalavya Theme in The Mahabharata and Early Retell-ings of Ekalavya in Indian Literatures -Dr.Narasimharaju K. | 89 |
| 15 | ವೈದೇಹಿಯ ಗೌರಿ (ಸ್ತ್ರೀ ವಿಶಿಷ್ಟ ಅಭಿವ್ಯಕ್ತಿಯ 'ಶಿವನ ಮೀಸುವ ಹಾಡು' ಕಾವ್ಯ ವಿಶ್ಲೇಷಣೆ) –ಎಂ.ಎಸ್.ಅರ್ಚನ ತೇಜಸ್ವಿ | 110 |

| Sl.No | |
|---|---|
| 16 | ಕನಕ... – ಡ... |
| 17 | 200... – ಡ... |
| 18 | Pro... Pro... |
| 19 | Edu... - C... |
| 20 | A S... e-C... |
| 21 | Soc... A S... |

International Journal of Academic Research
ISSN: 2348-7666; Vol.8, Issue-7(2), july, 2021
Impact Factor: 6.023; Email: drtvramana@yahoo.co.in

**Sthree Samajada Uddharaka Dr.Baba Saheb Ambedkar**
**-Dr.H.V.Shantharaju**

# ಸ್ತ್ರೀ ಸಮಾಜದ ಉದ್ಧಾರಕ ಡಾ.ಬಾಬಾ ಸಾಹೇಬ್ ಅಂಬೇಡ್ಕರ್

**–ಡಾ. ಹೆಚ್.ವಿ.ಶಾಂತರಾಜು**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ–07

ಭಾರತ ದೇಶದಲ್ಲಿ ಸ್ತ್ರೀ ಸಮಾನತೆಯ ಬಗ್ಗೆ ಧ್ವನಿ ಎತ್ತಿದವರಲ್ಲಿ ಬುದ್ಧ, ಬಸವ, ಫುಲೆ, ಶಾಹುಮಹಾರಾಜ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮುಖ್ಯರು. ಇವರ ಪ್ರಯತ್ನದಿಂದಾಗಿಯೇ ಭಾರತೀಯ ಸ್ತ್ರೀ ಸ್ವತಂತ್ರಳಾಗಿ ಪುರುಷನಷ್ಟೇ ಸಮಾನಳಾಗಿ ಬದುಕುವಂತಾಗಿದೆ, ಸ್ವಾತಂತ್ರ್ಯಕ್ಕೆ ಮೊದಲು ಭಾರತೀಯ ಮಹಿಳೆಗೆ ಧಾರ್ಮಿಕ ಮತ್ತು ಸಾಮಾಜಿಕ ಅಂತಸ್ತು ಬಹಳ ಕೆಳಮಟ್ಟದಲ್ಲಿತ್ತು. ಪುರುಷನಿಗೆ ಇದ್ದಷ್ಟು ಅಧಿಕಾರ ಸ್ತ್ರೀಗೆ ಇರಲಿಲ್ಲ. ಸ್ತ್ರೀಯಿಂದ ಜನ್ಮಪಡೆದ ಪುರುಷ ಆ ಸ್ತ್ರೀಯರನ್ನೇ ಕೀಳಾಗಿ ಕಾಣಲು ಪ್ರಾರಂಭಿಸಿದನು ಯಾವ ಸ್ತ್ರೀ ಪೋಶಿಸಿ ಬೆಳೆಸುತ್ತಾಳೋ ಅಂತಹ ಸ್ತ್ರೀಯನ್ನು ಮುಂದೆ ಪುರಷನು ಅವಮಾನಿಸಿದನು. ಯಾವ ಸ್ತ್ರೀ ನಮಗೆ ಶಿಕ್ಷಣವನ್ನು ಕೊಟ್ಟಳೊ ಅವಳನ್ನು ಗೃಹ ಬಂದಿಯಾಗಿ ಮಾಡಿದೆವು.

ಸ್ತ್ರೀಯನ್ನು ಶಿಕ್ಷಣ, ಸಂಪತ್ತಿನ ಅಧಿಕಾರ, ದತ್ತು ತೆಗೆದುಕೊಳ್ಳುವ ಅಧಿಕಾರ ಇವುಗಳಿಂದ ವಂಚಿತಳಾಗಿರುವಂತೆ ಮಾಡಿದ್ದೇವೆ. ರಾಜಕೀಯ, ಧಾರ್ಮಿಕ ಅಧಿಕಾರಗಳಿಗೆ ಸ್ತ್ರೀ ಯೋಗ್ಯಳಲ್ಲ ಎಂಬ ಭಾವನೆ ನಮ್ಮಲ್ಲಿತ್ತು. ಸ್ತ್ರೀ ಕೇವಲ ಮನೆಯಲ್ಲಿ ಅಡಿಗೆ ಮಾಡಲು ಮಕ್ಕಳ ರಕ್ಷಣೆ ಲಾಲನೆ, ಪಾಲನೆ ಮಾಡಲು ಮಾತ್ರ ಯೋಗ್ಯಳೆಂದು ತಿಳಿಯಲಾಗಿತ್ತು. ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪರಿಕಲ್ಪನೆಯಂತೆ ಮಕ್ಕಳನ್ನು ಹೆರುವ ಯಂತ್ರ ಎನ್ನುವ ಭಾವನೆಯಿತ್ತು. ಸ್ತ್ರೀಗೆ ವ್ಯಕ್ತಿತ್ವವೆನ್ನುವುದೇ ಇಲ್ಲ. ಸ್ತ್ರೀಯನ್ನು ಭೋಗದ ವಸ್ತುವಾಗಿ ಶೋಷಣೆಗೊಳಗಾಗಿಸಿದ್ದನ್ನು ಕಾಣುತ್ತೇವೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರು ಈ ವಿಧವಾದ ಸ್ತ್ರೀ ವಿರೋಧಿ ಅನ್ಯಾಯದ ವಿರುದ್ಧ ಧ್ವನಿ ಎತ್ತಿದರು. ಆಧುನಿಕ ಯುಗದಲ್ಲಿ ಸ್ತ್ರೀಯರು ರಾಜಕೀಯ, ಧಾರ್ಮಿಕ, ಮತ್ತು ಉದ್ಯೋಗ ಕ್ಷೇತ್ರದಲ್ಲಿ ಪ್ರಗತಿ ಹೊಂದುತ್ತಿರುವುದರ ಶ್ರೇಯಸ್ಸು ಡಾ. ಅಂಬೇಡ್ಕರ್‌ರಿಗೆ ಸೇರುತ್ತದೆ, ಅವರು ಸ್ತ್ರೀ ಸಮಾಜದಲ್ಲಿ ಸ್ವಾಭಿಮಾನದ ಜ್ಯೋತಿ ಬೆಳಗಿದರು, ಅವರಲ್ಲಿ ತಮ್ಮ ಅಧಿಕಾರ ಮತ್ತು ಹಕ್ಕಿನ ಬಗ್ಗೆ ಜಾಗೃತಿಯನ್ನುಂಟು ಮಾಡಿದರು. ಇಂದು ಇಂದಿರಾಗಾಂಧಿಯಂತಹ ಯೋಗ್ಯ ಆಡಳಿತಗಾರರ ಉದಾಹರಣೆಯಿಂದ ಸ್ತ್ರೀ ಜಾತಿ ಭಾರತದಲ್ಲೇ ಅಲ್ಲದೆ ಪ್ರಪಂಚದ ಎಲ್ಲ ಸ್ತ್ರೀ ಜಾತಿಯು ತಲೆ ಎತ್ತಿ ನಿಲ್ಲುವಂತಾಗಿದೆ. ಸ್ತ್ರೀಯರಿಗೆ ಯೋಗ್ಯವಾದ ಸ್ಥಾನ ನೀಡಲು ಸಂವಿಧಾನದಲ್ಲೇ ಹಿಂದು ಕೋಡ್ ಬಿಲ್ ತಂದರು. ಸನಾತನ ವಿಚಾರವಂತರು ಇದನ್ನು ಪ್ರಭಲವಾಗಿ ವಿರೋಧಿಸಿದರು. ಜೊತೆಗೆ ಪಾರ್ಲಿಮೆಂಟಿಗೆ ಜಾತಾ ಹೊರಟರು.

ಈ ಮಸೂದೆಯಿಂದ ಅವರ ಸನಾತನ ಧರ್ಮ ನಾಶವಾಗುವದೆಂಬುದು ಅವರ ನಂಬಿಕೆಯಾಗಿತ್ತು. ಆದರೆ ಇದಾವುದಕ್ಕೂ ಜಗ್ಗದ ಅಂಬೇಡ್ಕರ್ ಆ ಮಸೂದೆಯನ್ನು ತಂದೇ ತಂದರು ಅಂಬೇಡ್ಕರ್‌ರು ಕುಟುಂಬ ಯೋಜನೆಯನ್ನು ರಾಷ್ಟ್ರೀಯ ಕಾರ್ಯಕ್ರಮವೆಂದು ಭಾವಿಸಿದ್ದರು. ಇದರಿಂದಾಗಿ ಭಾರತದ ಆರ್ಥಿಕ ಪರಿಸ್ಥಿತಿ ವಿಕಾಸವಾಗುವುದು. ಬಡತನ ನಿರ್ಮೂಲವಾಗುವುದು ಹೆಚ್ಚು ಸಂತಾನದಿಂದ ತಂದೆ-ತಾಯಿ ಮತ್ತು ರಾಷ್ಟ್ರಕ್ಕೆ ದುಃಖವಾಗುತ್ತದೆ